ಅಧ್ಯಕ್ಷರು.—ಮಾನ್ಯ ಸದಸ್ಯರು ಉತ್ತರಗಳು ತಡವಾಗಿ ಬರುತ್ತಿದೆ ಎಂದು ಏನು ಹೇಳಿರುತ್ತಾರೆ ಅದನ್ನು ಗಮನದಲ್ಲಿಟ್ಟು ಕೊಳ್ಳಲಾಗುತ್ತದೆ. ಈಗ ನಿಯಮ ೬೮ರ ಮೇರೆಗೆ ಚರ್ಚೆಯನ್ನು ಮುಂದುವರಿಸುವುದು.

ನಿಯಮ ೬೮ರ ಮೇರೆಗೆ ಚರ್ಚೆ

ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್. (ಕಿತ್ತೂರು) —ಮಾನ್ಯ ಸಭಾಧ್ಯಕ್ಷರೆ, ರೈತರ ಸಾಲದ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ. ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ಯಾವ ಯಾವ ಸಾಲಗಳನ್ನು ರದ್ದು ಮಾಡಬೇಕು ಎಂಬ ವಿವರಣೆ ಕೇಳಿದ್ದರು. ಸಾಲವನ್ನು ಏಕೆ ರದ್ದು ಮಾಡಬೇಕೆಂದು ಕೇಳಿದ್ದರೆ ಇನ್ನೂ ಉತ್ತಮವಾಗಿತ್ತೆಂದು ನನ್ನ ಅಭಿಪ್ರಾಯ. ರೈತರು ಸಾಲವನ್ನು ರದ್ದು ಮಾಡಿಸಿಕೊಳ್ಳ ಬೇಕೆಂದು ಸಾಲ ತಂದಿಲ್ಲ. ಸಾಲ ತರುವಾಗ ಹೆಚ್ಚು ಬೆಳೆ ಬೆಳೆಯಬೇಕೆಂದು ರೈತರು ಸಾಲ ತಂದರು. ಸಾಲ ತಂದು ಭೂಮಿಯಲ್ಲಿ ಬಂಡವಾಳ ತೊಡಗಿಸಿ ಬೆಳೆದರೂ ಸಹ ಸರ್ಕಾರದ ತಪ್ಪು ಬೆಲೆ ನೀತಿಯಿಂದ ಲಾಭವಾಗದೆ ರೈತರಿಗೆ ಸಾಲದ ಹೊರೆ ಆಯಿತು. ಋಣ ವಿಮೋಚನೆ ಮಾಡುತ್ತೇವೆಂದು ಅನ್ನಬೇಡಿ. ಸರ್ಕಾರದ ತಪ್ಪು ನೀತಿಯಿಂದ ಸಾಲ ಉಳಿದಿದೆ ಎನ್ನುವುದು ರೈತರ ವಾದ. ಯಾವ ಯಾವ ಸಾಲ ಗಳನ್ನು ರದ್ದು ಮಾಡಬೇಕೆಂದರೆ ೧) ಬೆಳೆ ಸಾಲವನ್ನು ರದ್ದು ಮಾಡಬೇಕು. ಏಕೆಂದರೆ ರೈತರು ಬೆಳೆ ಬೆಳೆದಿದ್ದಾರೆ, ಆದರೆ ಅದಕ್ಕೆ ಯೋಗ್ಯ ದರ ಸಿಕ್ಕಿಲ್ಲ. ಆ ಕಾರಣದಿಂದ ಬೆಳೆ ಸಾಲವನ್ನು ರದ್ದು ಮಾಡಬೇಕು ಈ ಸದನದ ಹಿರಿಯ ಸದಸ್ಯರಾದ ಬಂಗಾರಪ್ಪನವರು ೧೯೭೭ರಲ್ಲಿ ಒಂದು ಬೆಲೆ ಸಮಿತಿಯ ಅಧ್ಯಕ್ಷರಾಗಿ ರೈತರ ಉತ್ಪತ್ತಿಗಳಿಗೆ ಯೋಗ್ಯ ಬೆಲೆ ಕೊಡಬೇಕೆಂದು ಶಿಫಾರಸ್ಸು ಮಾಡಿದ್ದರು. ಈಪತ್ತಾದರೂ ಬಂಗಾರಪ್ಪನವರ ಸಮಿತಿ ಶಿಫಾರಸ್ಸಿನ ಪ್ರಕಾರ ಅಂದರೆ ಪ್ರೈಸ್ ಇಂಡೆಕ್ಸ್ ಆಧಾರದ ಮೇಲೆ ಆ ದರಗಳನ್ನು ಕೊಟ್ಟರೆ ರೈತರ ಸಾಲವನ್ನು ರದ್ದು ಮಾಡಬೇಕಾಗಿಲ್ಲ. ರೈತರ ಸಾಲವನ್ನು ರದ್ದು ಮಾಡಿದರೆ ಬಹಳ ದೊಡ್ಡ ಉಪಕಾರವಾಗುತ್ತದೆಂದು ನಂಬಿಲ್ಲ. ರೈತರ ಬೆಳೆಗೆ ಯೋಗ್ಯ ಬೆಲೆ ಸಿಗಬೇಕೆಂಬ ವಾದ ಹತ್ತಾರು ವರ್ಷಗಳಿಂದ ಅಂದರೆ ಬ್ಯಾಂಕ್ ರಾಷ್ಟ್ರೀಕರಣವಾದಾಗಿನಿಂದ ಇದೆ. ಆವಾಗಿನಿಂದ ಬೆಲೆ ಸಮಾನತೆ ಉಳಿಯಲಿಲ್ಲ. ಕಾರ್ಖಾನೆಯ ಉತ್ಪಾದನೆಗಳ ವಿಚಾರದಲ್ಲಿ ಮತ್ತು ರೈತನ ಉತ್ಪತ್ತಿ ವಿಚಾರದಲ್ಲಿ ಸರ್ಕಾರ ಸಮಾನತೆ ಸಾಧಿಸುವ ಪ್ರಯತ್ನ ಮಾಡಿಲ್ಲ, ಬ್ಯಾಂಕ್ ರಾಷ್ಟ್ರೀಕರಣ ವಾಗುವ ವರ್ಷ ಅಂದರೆ ೧೯೬೯ರಲ್ಲಿ ಟ್ರ್ಯಾಕ್ಟರ್ ಬೆಲೆ ೧೮ ಸಾವಿರ ರೂಪಾಯಿ ಇದ್ದರೆ, ಜೋಳ ಒಂದು ಕ್ವಿಂಟಾಲಿಗೆ ೧೦೦ ರೂಪಾಯಿ ಇತ್ತು. ಅಂದರೆ ೧೮೦ ಚೀಲ ಜೋಳ ಮಾರಿದರೆ ರೈತನಿಗೆ ಟ್ರ್ಯಾಕ್ಟರ್ ಸಿಗುತ್ತಿತ್ತು. ಅದೇ ರೀತಿ ಈಗ ನಾವು ೧೮೦ ಚೀಲ ಜೋಳ ಕೊಡುತ್ತೇವೆ, ಒಂದು ಟ್ರ್ಯಾಕ್ಟರ್ ಕೊಡಿ, ನಮ್ಮ ಸಾಲವನ್ನು ರದ್ದು ಮಾಡಬೇಕಾಗಿಲ್ಲ. ಬ್ಯಾಂಕ್ ರಾಷ್ಟ್ರೀಕರಣ ಮಾಡಿದಾಗ ಒಂದು ಮೂಟೆ ಸಿಮೆಂಟಿಗೆ ೯ ರೂಪಾಯಿ ೮ ಆಣೆ ಇತ್ತು. ಈಗ ನಮಗೆ ಒಂದು ಚೀಲ ಜೋಳಕ್ಕೆ ೧೦ ಮೂಟೆ ಸಿಮೆಂಟ್ ಕೊಟ್ಟರೆ ಸಾಲವನ್ನು ರದ್ದು ಮಾಡಬೇಕಾಗಿಲ್ಲ. ಬ್ಯಾಂಕ್ ರಾಷ್ಟ್ರೀಕರಣ ಮಾಡಿ ರೈತರಿಗೆ ಸಾಲ ಕೊಟ್ಟನಂತರ ರೈತನ ಉತ್ಪತ್ತಿ ಬೆಲೆ ಕುಸಿಯಿತು; ಕಾರ್ಖಾನೆಯ ಉಪಕರಣಗಳ ಬೆಲೆ ಹೆಚ್ಚಾಯಿತು. ಈ ಕಾರಣದಿಂದ ಸಾಲ ಉಳಿಯಿತು ಎಂಬ ದೃಷ್ಟಿಯಿಂದ ಬೆಳೆ ಸಾಲವನ್ನು ರದ್ದು ಮಾಡಬೇಕೇ ಹೊರತು ರೈತನಿಗೆ ಉಪಕಾರ ಮಾಡುತ್ತೇವೆಂದುಮಾಡುವುದಕ್ಕೆ ಹೋಗಬೇಡಿ, ಪರಿಹಾರ ಕೊಡುತ್ತೇವೆ, ಋಣ ವಿಮೋಚನೆ ಮಾಡುತ್ತೇವೆಂದು ಹೇಳಬೇಡಿ. ರೈತನ ಋಣದಲ್ಲಿ ದೇಶ ಬದುಕಿದಾಗ ಅವನ ಋಣ ವಿಮೋಚನೆ ಮಾಡುತ್ತೇವೆಂದರೆ ನಾವು ಒಪ್ಪುವುದಿಲ್ಲ. ಯಾವ ಯಾವ ಸಾಲಗಳನ್ನು ರದ್ದು ಮಾಡಬೇಕೆಂದರೆ ನಾವು ನೀತಿಯಿಂದ ಕೇಳಿದ್ದೇವು. ಟ್ರ್ಯಾಕ್ಟರ್ ಸಾಲವನ್ನು ರದ್ದು ಮಾಡ ಬೇಕೆಂದು ಕೇಳಿಲ್ಲ ಅದು ಆಸ್ತಿಯಾಗಿರುತ್ತದೆ. ಅದನ್ನು ಮಾರಿದರೆ ದುಡ್ಡು ಸಿಗುವುದರಿಂದ ಅದರ ಸಾಲವನ್ನು ರದ್ದು ಮಾಡಬೇಕೆಂದು ಕೇಳಲಿಲ್ಲ. ಐ ಪಿ. ಸೆಟ್ ಸಾಲವನ್ನು ರದ್ದು ಮಾಡ ಬೇಕೆಂದು ಕೇಳಲಿಲ್ಲ. ಬಡ್ಡಿ ಮಾತ್ರ ರದ್ದು ಮಾಡಿ ಎಂದು ಕೇಳಿದ್ದೇವೆ. ಬೆಳೆ ಸಾಲವನ್ನು ಪೂರ್ತಿ ರದ್ದು ಮಾಡಿ ಎಂದು ಕೇಳಿದ್ದೇವೆ, ಏಕೆಂದರೆ, ಬೆಳೆಗೆ ಯೋಗ್ಯ ಬೆಲೆ ಸಿಗಲಿಲ್ಲ. ತಂಬಾಕು ಬೆಲೆ ಕತ್ತಿಪ್ಪತ್ತು ವರ್ಷಗಳ ಹಿಂದೆ ಎಷ್ಟಿತ್ತು. ಈಗ ಎಷ್ಟಿತ್ತು, ಬೀಡಿ ಬೆಲೆ ಎಷ್ಟಿದೆ ಎಂದು ಯೋಚನೆ ಮಾಡಿ. ರೈತನಿಗೆ ಯೋಗ್ಯ ಬೆಲೆ ಸಿಕ್ಕಿಲ್ಲವಾದ್ದರಿಂದ ಬೆಳೆ ಸಾಲ ರದ್ದಾಗಬೇಕೆಂದು ಹೇಳುತ್ತೇವೆ. ಎರಡನೆಯದಾಗಿ, ಬಂಡಿಂಗ್ ಸಾಲ. ಮಣ್ಣಿನಿಂದ ಬೆಳೆದ ಆಹಾರವನ್ನು ಉಣ್ಣುವವರೆಲ್ಲಾ ಅದನ್ನು ರಕ್ಷಣೆ ಮಾಡುವುದು ಅವರ ಜವಾಬ್ದಾರಿ. ರೈತ ಮಾತ್ರ ಮಣ್ಣನ್ನು ರಕ್ಷಣೆ ಮಾಡಬೇಕೆಂದು ಅಲ್ಲ.

ಮಣ್ಣನ್ನು ರಕ್ಷಣೆ ಮಾಡುವುದು ಇಡೀ ರಾಷ್ಟ್ರದ ಜವಾಬ್ದಾರಿ, ಎಲ್ಲರ ತಲೆ ಮೇಲೆ ಅದರ ಭಾರ ಇದೆ. ಅದು ರಾಷ್ಟ್ರೀಯ ಕಾರ್ಯಕ್ರಮ.

೧೨-೩೭ ಪಿ. ಎಂ.

ಆದರೆ ನಮ್ಮ ದೇಶದಲ್ಲಿ ಮಾತ್ರ ಕೇವಲ ರೈತನೇ ಮಣ್ಣಿನ ರಕ್ಷಣೆ ಮಾಡಬೇಕು, ಏತಕ್ಕೆ ? ಆ ಮಣ್ಣಿನಲ್ಲಿ ಬೆಳೆದಂಥ ಆಹಾರವನ್ನು ಅವನೊಬ್ಬನೇ ಊಟ ಮಾಡುತ್ತಾನೆಂದು, ಆ ಕಾರಣ ಬಂಡಿಂಗ್, ಸಾಲ ರದ್ದು ಮಾಡಬೇಕು. ಅದರ ಜೊತೆಗೆ ಬಡತನ ನಿವಾರಣೆಗಾಗಿ ಕೊಟ್ಟ ಸಾಲ. ಅಂದರೆ ಎಮ್ಮೆ ಕೊಟ್ಟರು, ಅದರ ಹಾಲಿಗೆ ರೇಟ್ ಎಷ್ಟು ಕೊಡಬೇಕೆಂದು ಸರ್ಕಾರ ವಿಚಾರ ಮಾಡಲಿಲ್ಲ. ಯಾರೋ ಹಾಲು ಕುಡಿದರು, ಪಾಪ, ಅವನು ಎಮ್ಮೆ ಸಗಣಿ ಬಳಿದಿದ್ದಕ್ಕೆ ಸಾಲ ಹೊತ್ತುಕೊಂಡು ಅಡ್ಡಾಡಬೇಕು ಅಂದರೆ ಅದು ತಪ್ಪು. ಆ ಕಾರಣ ಆ ಸಾಲ ರದ್ದಾಗಬೇಕು. ಆಮೇಲೆ ಕೋಳಿ ಸಾಕಿದರು. ಕೋಳಿ ಸಾಕಿದವನು ಆಮ್ಲೆಟ್ ತಿನ್ನಲಿಲ್ಲ. ಯಾರೋ ಆಮ್ಲೆಟ್ ತಿಂದರು. ಕೋಳಿ ಸಾಕಿದವನು ಸಾಲ ಹೊರಬೇಕು ಎಂದರೆ ಅದು ಯಾವ ನೀತಿ ? ಆ ಕಾರಣ ಆ ಸಾಲ ರದ್ದಾಗಬೇಕು. ಬಡತನ ನಿವಾರಣೆಗಾಗಿ ಕೊಟ್ಟ ಸಾಲ, ಬೆಳೆ ಸಾಲ, ಆಮೇಲೆ ಉಪಕರಣಗಳ ಸಾಲದ ಮೇಲಿನ ಬಡ್ಡಿ ರದ್ದಾಗಬೇಕು. ಈ ವಿಚಾರದಲ್ಲಿ ದೊಡ್ಡ ರೈತ, ಸಣ್ಣ ರೈತ ಎಂಬ ತಾರತಮ್ಯ ಬೇಡ. ಒಮ್ಮೆ ಭೂಸುಧಾರಣೆ ಕಾಯಿದೆ ಜಾರಿಗೆ ಬಂದನಂತರ ಸಣ್ಣ ರೈತ, ದೊಡ್ಡ ರೈತ ಎಂಬುದೇನೂ ಉಳಿದಿಲ್ಲ. ೧೦-೨೦ ಎಕರೆ ಇರುವವನು ದೊಡ್ಡ ರೈತ ಅಂದರೆ ಸಾಲ ಹೆಚ್ಚು ಮಾಡುವುದಕ್ಕೆ ಅನುಕೂಲ ಇರುವಂಥ ರೈತ ಎಂದು ಹೇಳಬಹುದು. ಆದರೆ ಅವನನ್ನು ದೊಡ್ಡ ರೈತ ಎಂದು ನಾವು ತಿಳಿದುಕೊಂಡಿಲ್ಲ. ಆ ಕಾರಣ ಈ ಸಾಲಗಳನ್ನು ರದ್ದು ಮಾಡಬೇಕು. ಅದರ ಜೊತೆಗೆ ಮಾರ್ಕೆಟಿಂಗ್ ಸಿಸ್ಟಂ ಬದಲಿ ಮಾಡಿ ಎಂದು ಬೇಕಾದಷ್ಟು ಕೇಳಿಕೊಂಡೆವು. ಅದನ್ನು ಮಾಡಿದ್ದರೆ ಈಗ ಸಾಲ ರದ್ದು ಮಾಡುವಂತೆ ಕೇಳಬೇಕಾದ ಪ್ರಮೇಯ ಬರುತ್ತಿರಲಿಲ್ಲ. ನಾನು ಒಂದು ಉದಾಹರಣೆ ಹೇಳುತ್ತೇನೆ. ಹೋದ ವರ್ಷ ಒಂದು ಕೆ.ಜಿ. ಹತ್ತಿಗೆ ೧೫೦೦ ರೂಪಾಯಿ ರೇಟ್ ಇತ್ತು. ಈ ವರ್ಷ ೫ ನೂರು ರೂಪಾಯಿಯೂ ಸಿಗಲಿಲ್ಲ. ಬೈಲಹೊಂಗಲ ತಾಲ್ಲೂಕಿನಲ್ಲಿ ಒಂದರಲ್ಲೇ ೪ ಲಕ್ಷ ಕ್ವಿಂಟಾಲ್ ಹತ್ತಿ ಬೆಳೆದರು. ಒಂದು ಕ್ವಿಂಟಾಲ್‌ಗೆ ೧೦೦೦ ರೂಪಾಯಿ ಅಂತರ ಅಂದರೂ ೪೦ ಕೋಟಿ ರೂಪಾಯಿ ಅಂತರ ಆಯಿತು. ಇಡೀ ಬೈಲಹೊಂಗಲ ತಾಲ್ಲೂಕಿನ ಸಾಲ ೧೦ ಕೋಟಿ ರೂಪಾಯಿ ಇಲ್ಲ. ಬೈಲಹೊಂಗಲ ತಾಲ್ಲೂಕಿನ ಹತ್ತಿಯಲ್ಲಿ ಮಾತ್ರ ೪೦ ಕೋಟಿ ರೂಪಾಯಿ ಲಾಸ್ ಆಯಿತು ಎಂದರೆ ಬಹುತೇಕ ರೈತರು ಯಾವ ರೀತಿ ಬದುಕಿರಬೇಕು ಎಂಬುದನ್ನು ಸರ್ಕಾರ ಅಂದಾಜು ಮಾಡಬೇಕು. ಮಧ್ಯವರ್ತಿಗಳು ರೈತರಿಗೆ ಮೋಸ ಮಾಡುವಂಥದ್ದನ್ನು ತಪ್ಪಿಸಬೇಕು. ಅದನ್ನು ಮಾಡಬೇಕೆಂದರೆ ಸರ್ಕಾರದವರು ಕಟ್ಟಿಗೆ ವ್ಯಾಪಾರ ಯಾವರೀತಿ ಮಾಡುತ್ತಾರೆಯೋ ಆ ರೀತಿ ಇದನ್ನೂ ಮಾಡಿದರೆ ಸ್ವಲ್ಪ ಮಟ್ಟಿಗೆ ಮೋಸ ತಡೆಯಬಹುದು ಎಂದು ಸರ್ಕಾರಕ್ಕೆ ಹೇಳಿದರೂ ಅದನ್ನೂ ಮಾಡಲಿಲ್ಲ. ಬಹಳಷ್ಟು ರೈತರು ಇದರಿಂದ ತೊಂದರೆಗೀಡಾಗಿದ್ದಾರೆ. ಬಹಳ ಜನರು ದಲ್ಲಾಳಿಗಳ ಪರವಾಗಿ, ಖರೀದಿದಾರರ ಪರವಾಗಿ ಕೆಲಸ ಮಾಡುವ ಕಾರಣ ಏಕೋ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲವೆಂಬ ಸಂದೇಹ ನಮ್ಮ ಮನಸ್ಸಿಗೆ ಬರುತ್ತಿದೆ. ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ಸಾಲ ರದ್ದು ಮಾಡಿದರೆ ಹಣ ಎಲ್ಲಿಂದ ತರುವುದು ಎಂದು ಕೇಳಿದರು. ನನಗನ್ನಿಸುತ್ತದೆ, ಇದಕ್ಕೊಂದು ಸುಲಭ ಉಪಾಯ ಇದೆ. ಫಿಲಿಫೈನ್ಸ್‌ನಲ್ಲಿ ಅಕ್ವಿನೊ ಅವರು ಒಂದು ಕಾನೂನು ಮಾಡಿದರು. ಅಂಥ ಒಂದು ಕಾನೂನು ಮಾಡಿ ೧೯೪೭ರಿಂದೀಚೆಗೆ ಯಾರುಯಾರು ಶಾಸಕರು ಮತ್ತು ಮಂತ್ರಿಗಳು ಅಕ್ರಮ ಗಳಿಕೆ ಮಾಡಿಕೊಂಡಿದ್ದಾರೆ ಅದನ್ನೆಲ್ಲಾ ಕರ್ನಾಟಕ ಸರ್ಕಾರ ಮುಟ್ಟುಗೋಲು ಹಾಕಿಕೊಂಡರೆ ಸಾಲವೂ ಹೋಗುತ್ತದೆ, ಕಾವೇರಿ, ಕೃಷ್ಣ ಯೋಜನೆಗಳು ಮುಗಿಯುತ್ತವೆ.

ಅಧ್ಯಕ್ಷರು.—ಆಗ ಯಾರದನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾರೋ ಅವರು ಸಾಲಗಾರರಾಗುತ್ತಾರೆ,

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಇಲ್ಲ ಸಾರ್ ಅವರಿಗೆ ಬೇಕಾದಷ್ಟಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಧೈರ್ಯ ಮಾಡಿ ಕರ್ನಾಟಕದಲ್ಲಿ ಏನಾದರೂ ಚಮತ್ಕಾರ ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಅವರು ವರ್ಗಾವರ್ಗಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಇದು ಬೇರೆ ಮಾಡಿ ಅವರನ್ನು ಫಜೀತಿ ಮಾಡುತ್ತೀರಿ. ಹಾಗೆ ಮಾಡಿದರೆ ಅವರು ಅಧಿಕಾರ ಕಳೆದುಕೊಳ್ಳುತ್ತಾರೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಅಧ್ಯಕ್ಷರೇ, ನಾನು ಒಂದು ಪ್ರಶ್ನೆ ಕೇಳಿದೆ. ಸರ್ಕಾರಿ ಅಧಿಕಾರಿಗಳ ವಾಹನಗಳು ಖಾಸಗಿಗೆ ಎಷ್ಟು ಬಳಕೆಯಾಗುತ್ತಿದೆ ಖಾಸಗಿಗೆ ಬಳಕೆಯಾಗಿದ್ದರೆ ಎಷ್ಟು ಹಣ ತುಂಬುತ್ತಾರೆ ಎಂದು ನಾನು ಪ್ರಶ್ನೆ ಕೇಳಿದ್ದೆ. ಆದರೆ ನನಗೆ ಇನ್ನೂ ಅದಕ್ಕೆ ಉತ್ತರ ಸಿಕ್ಕಿಲ್ಲ. ಕರ್ನಾಟಕದಲ್ಲಿ ಅಧಿಕಾರಿಗಳು ಉಪಯೋಗ ಮಾಡುವಂಥ ಗಾಡಿಗಳು ಐದಾರು ಸಾವಿರ ಇರಬಹುದು. ಮಿತವ್ಯಯದಿಂದ ಬಳಕೆ ಮಾಡಿದ್ದರೆ ಎಷ್ಟೋ ಉಳಿತಾಯ ಆಗಬಹುದು. ಅದೂ ಕೋಟ್ಯಾಂತರ ರೂಪಾಯಿಗಳು ಆಗಬಹುದು. ಆಡಳಿತ ಏನೋ ಈಗ ಸಿಕ್ಕಾಪಟ್ಟೆ ನಡೆಯುತ್ತಿದೆ, ಶಿಸ್ತಿನಿಂದ ದುಡ್ಡು ಉಳಿಸುವುದಕ್ಕೆ ಸಾಧ್ಯವಿದೆ. ಅನೇಕ ಮಿತ್ರರು ಕಲ್ಲು ಗಣಿಗಳ ಬಗ್ಗೆ ಮಾತನಾಡಿದರು. ಅರಾಕ್ ಬಗ್ಗೆ ಬಹಳ ಸದಸ್ಯರು ಮಾತನಾಡಿದರು. ಇದರಲ್ಲಿ ಹಣ ಸೋರಿಹೋಗುತ್ತದೆಂದು ಹೇಳಿದರು ಸೋರಿ ಹೋಗುವುದನ್ನು ಪ್ರಾಮಾಣಿಕತೆಯಿಂದ ತಡೆಹಿಡಿದರೆ ೭೦ ಕೋಟಿ ರೂಪಾಯಿ ದೊಡ್ಡದಲ್ಲ. ಮನಸ್ಸು ಮಾಡಿದರೆ ಇವತ್ತು ಮಾಡಬಹುದು. ಆದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನಸ್ಸಿಲ್ಲದ್ದರಿಂದ ೬೦–೭೦ ಕೋಟಿ ರೂಪಾಯಿ ಎಲ್ಲಿಂದ ತರಬೇಕು ಎಂದು ಕೇಳುತ್ತಾರೆ. ಪ್ರವಾಸಿ ಮಂದಿರಕ್ಕೆ, ಐ.ಬಿ.ಗೆ ಒಂದು ವರ್ಷಕ್ಕೆ ೪ ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ. ಕಾರ್ಪೆಟ್, ಕರ್ಟನ್‌ಗಳಿಗೆ ೪ ಕೋಟಿ ರೂಪಾಯಿ ಖರ್ಚು ಮಾಡುವಾಗ ಇಡೀ ಕರ್ನಾಟಕದ ಮೂರೂವರೆ ಕೋಟಿ ರೈತರ ೬೦ ಕೋಟಿ ರೂಪಾಯಿ ಸಾಲ ಬಿಡುವುದಕ್ಕೆ ಎಷ್ಟು ಹೊತ್ತು ಯೋಚನೆ ಮಾಡುತ್ತಾರೋ ಗೊತ್ತಿಲ್ಲ. ಆದ್ದರಿಂದ ದೊಡ್ಡ ಮನಸ್ಸು ಮಾಡಿ ಈ ೬೦–೭೦ ಕೋಟಿ ರೂಪಾಯಿ ಸಾಲ ರದ್ದು ಮಾಡಬೇಕು. ನಬಾರ್ಡ್‌ನವರ ಸ್ಕೀಂ ಬಂದಿದೆ. ಆದ್ದರಿಂದ ಹಿಂದೆ ಮುಂದೆ ನೋಡದೆ ಈ ಸಾಲವನ್ನು ರದ್ದು ಮಾಡಬೇಕೆಂದು ಮುಖ್ಯಮಂತ್ರಿಗಳಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ. (ವೇಮಗಲ್).— ಮಾನ್ಯ ಅಧ್ಯಕ್ಷರೇ, ರೈತರ ಸಾಲವನ್ನು ಮಜಾ ಮಾಡಬೇಕೆನ್ನುವ ಬೇಡಿಕೆ ಕಳೆದ ಆರು ತಿಂಗಳಿಂದ ನಡೆದಂತಹ ಈ ಸಭೆಯ ಅಧಿವೇಶನದಲ್ಲಿ ಬಹುಶಃ ಪ್ರತಿ ದಿವಸ ಪ್ರಸ್ತಾಪವಾಗುತ್ತಿದೆ. ಈ ಕಡೆಯ ಸದಸ್ಯರು ಮತ್ತು ಆ ಕಡೆ ಇರುವ ಸದಸ್ಯರು ಸದನದಲ್ಲಿ ಹೇಳದೇ ಇದ್ದರೂ ಸಹಾ ಅವರ ಮನಸ್ಸಿನಲ್ಲೂ ಕೂಡಾ ಅದು ವ್ಯಕ್ತ ಆಗುತ್ತಾ ಇದೆ. ಸಾಲ ಮಜಾ ಆಗಬೇಕೆಂದು ಅವರಿಗೂ ಗೋಚರವಾಗುತ್ತಾ ಇದೆ. ಆದರೆ ಇಲ್ಲಿ ಬಹಿರಂಗವಾಗಿ ಪಕ್ಷದ ಕಟ್ಟು ಪಾಡಿಗೆ ಬಿದ್ದಿರುವುದರಿಂದ ಅದನ್ನು ಹೇಳುವುದಕ್ಕೆ ತಯಾರು ಇಲ್ಲ. ಆದರೆ ಹೊರಗಡೆ, ಈ ಸದನದ ಎಲ್ಲ ಸದಸ್ಯರ ಒಮ್ಮತದ ಅಭಿಪ್ರಾಯ ಈ ವಿಚಾರದಲ್ಲಿ ಇದೆ. ಆದರೂ ಕೂಡಾ ಇಲ್ಲಿಯವರೆಗೂ ಸರ್ಕಾರ ರೈತರ ಸಾಲ ಮಜಾ ಮಾಡುತ್ತೇವೆ ಎನ್ನುವ ಮನಸ್ಸನ್ನು ಮಾಡಿಲ್ಲ. ಕಳೆದ ಸಾರಿ ಈ ವಿಚಾರ ಚರ್ಚೆಯಾದಾಗ ಒಂದು ಪರಿಸ್ಥಿತಿ ಇತ್ತು. ಕಳೆದ ಸಾರಿ ಏನಿತ್ತು ಅಂದರೆ, ಕೇಂದ್ರ ಸರ್ಕಾರ ಏನು ಮಾಡುತ್ತಾರೋ ನೋಡೋಣ, ಕೇಂದ್ರದ ಬಡ್ಜೆಟ್ ಬರುತ್ತದೆ, ಬಡ್ಜೆಟ್‌ನಲ್ಲಿ ಅವರು ಯಾವ ರೀತಿ ರಿಯಾಯಿತಿ ಕೊಡುತ್ತಾರೆನ್ನುವ ಒಂದು ಅಭಿಪ್ರಾಯವನ್ನು ಸರ್ಕಾರ ಹೊಂದಿತ್ತು. ಈಗ ಕೇಂದ್ರ ಸರ್ಕಾರದ ಬಡ್ಜೆಟ್ ಕೂಡಾ ಬಂದಿದೆ. ನಮ್ಮ ಮುಖ್ಯಮಂತ್ರಿಗಳು ಅನೇಕ ಸಲ ಹೇಳಿದ್ದಾರೆ. ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಸಾಲ ರದ್ದಿಯಾತಿ ಬಗ್ಗೆ ಹೇಳಿಲ್ಲ, ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡುತ್ತೇವೆ. ಪ್ರಧಾನ ಮಂತ್ರಿಗಳ ಗಮನಕ್ಕೆ ಇದನ್ನು ತರುತ್ತೇವೆಂದು ಮಾತ್ರ ನಾವು ಹೇಳಿದ್ದೇವೆಂದು ಹೇಳಿದ್ದಾರೆ. ಹಾಗೂ ರಾಷ್ಟ್ರೀಯ ರಂಗ ಮತ್ತು ಜನತಾದಳ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಅಧಿಕಾರಕ್ಕೆ ಬಂದರೆ ಸಾಲ ತನ್ನಷ್ಟಕ್ಕೆ ತಾನೇ ರದ್ದಾಗುತ್ತದೆನ್ನುವ ಮಾತನ್ನು ಹೇಳಿದ್ದಾರೆ, ಇದಕ್ಕೆ ಅವರೇ ಜವಾಬ್ದಾರರು, ನಾವು ಜವಾಬ್ದಾರರಲ್ಲ ಎನ್ನುವ ಮಾತನ್ನು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರ ಈ ವಾದವನ್ನು ಒಪ್ಪಿದರೂ ಕೂಡಾ ಇವತ್ತಿನ ವಾಸ್ತವಾಂಶ ಏನು ಎಂಬುದನ್ನು ಗಮನಿಸಬೇಕಾಗಿದೆ. ವಾಸ್ತವಾಂಶ ಏನು? ಕೇಂದ್ರ ಸರ್ಕಾರ ಚುನಾವಣಾ ಪ್ರಣಾಳಿಕೆಯಲ್ಲಿ ಏನು ತಿಳಿಸಿತ್ತೋ ಅದನ್ನು ಮಾಡಿಲ್ಲ. ಅದನ್ನು ನಾವೆಲ್ಲರೂ ಒಪ್ಪಬೇಕಾಗುತ್ತದೆ. ಸಾಲ ತನ್ನಷ್ಟಕ್ಕೆ ತಾನೇ ಮಜಾ ಆಗುತ್ತದೆನ್ನುವ ಅರ್ಥ ಬರುವಂತೆ ಚುನಾವಣಾ ಪ್ರಣಾಳಿಕೆಯಲ್ಲಿ ಜನತಾದಳ ಮತ್ತು ರಾಷ್ಟ್ರೀಯ ರಂಗದವರು ಸೇರಿಸಿದ್ದಾರೆ, ಆ ಕೆಲಸವನ್ನು ಮಾಡಿಲ್ಲ. ಮತ್ತೆ ಏನು ಮಾಡಿದ್ದಾರೆಂದರೆ, ಅವರಿಗೂ ಅರೆ ಮನಸ್ಸು. ಮೊದಲು ೧೩ರಿಂದ ೧೪ ಸಾವಿರ ಕೋಟಿ ಬೇಕಾಗುತ್ತದೆಂದು ಸರ್ಕಾರ ಅಂದಾಜು ಮಾಡಿತ್ತು. ಅರೆ ಮನಸ್ಸಿನಲ್ಲಿ ಈಗ ಕೇಂದ್ರ ಸರ್ಕಾರ ಸಿಕ್ಕಿ ಬಿದ್ದಿದೆ. ಚುನಾವಣೆಯಲ್ಲಿ ಗೆದ್ದು ಬರುತ್ತೇವೋ ಇಲ್ಲವೋ ಎನ್ನುವ ಅರೆ ಮನಸ್ಸಿನಿಂದ ಚುನಾವಣೆಗೆ ಮೊದಲು ಸಾಲ ಮನ್ನಾ ಬಗ್ಗೆ ಕರಾರುವಾಕ್ಕಾಗಿ ಹೇಳಿದರು. ಈಗ ಅದೃಷ್ಟಕ್ಕೆ ಅವರು ಅಧಿಕಾರಕ್ಕೆ ಬಂದಿದ್ದಾರೆ. ಈಗ ಅವರಿಗೆ ನಿಜವಾದ ಸಮಸ್ಯೆ ಪ್ರಾರಂಭವಾಗಿದೆ. ಅವರೂ ಕೂಡಾ ಈ

† ಈ ಚಿಹ್ನೆ ಸಂಬಂಧಪಟ್ಟ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ವಿಫಲರಾಗಿದ್ದಾರೆಂದು ನನ್ನ ದೃಢ ಅಭಿಪ್ರಾಯ. ಕೇಂದ್ರ ಸರ್ಕಾರದವರು ಕೇವಲ ವಾಣಿಜ್ಯ ಬ್ಯಾಂಕಿನಲ್ಲಿರತಕ್ಕ ಸಾಲವನ್ನು ವಜಾ ಮಾಡಿದ್ದಾರೆ. ಅದರಲ್ಲೂ ಕೂಡಾ ನೂರೆಂಟು ಕೊಕ್ಕೆಗಳನ್ನು ಹಾಕಿ, ಯಾರಿಗೂ ಈ ಸೌಲಭ್ಯ ಸಿಗಬಾರದು ಎನ್ನುವ ರೀತಿಯಲ್ಲಿ ಸಾಲದ ಒಂದು ನೀತಿಯನ್ನು ಕೇಂದ್ರ ಸರ್ಕಾರ ತೆಗೆದುಕೊಂಡಿದೆ. ಅದು ಬೇರೆ ವಿಚಾರ. ಪ್ರಾರಂಭದಲ್ಲಿ ಸಹಕಾರಿ ರಂಗದಲ್ಲೂ ಕೂಡಾ ಸಾಲವನ್ನು ವಜಾ ಮಾಡುವುದಿಲ್ಲವೆಂದು ಹೇಳಿದ್ದರು. ಇತ್ತೀಚೆಗೆ ಕೇಂದ್ರ ಸರ್ಕಾರ ಶೇಕಡಾ ೫೦ರಷ್ಟನ್ನು ವಜಾ ಮಾಡುತ್ತೇವೆನ್ನುವ ನೀತಿಯನ್ನು ಪ್ರಚಾರ ಮಾಡಿದೆ. ಅದನ್ನು ನಾನಂತೂ ಸ್ವಾಗತ ಮಾಡುತ್ತೇನೆ. ಅದು ಕೇಂದ್ರ ಸರ್ಕಾರದ ಜವಾಬ್ದಾರಿಯೂ ಹೌದು, ಅವರ ಕರ್ತವ್ಯವೂ ಹೌದು. ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದಾರೆ ಅವನ್ನು ನಡೆಸಬೇಕಾದುದು ಅವರ ಕರ್ತವ್ಯ. ಸಹಕಾರಿ ರಂಗದ ಸಾಲ ಏನಿದೆ ಅದು ವಜಾ ಆಗಲೇಬೇಕಾಗಿದೆ ಅದನ್ನು ವಜಾ ಮಾಡತಕ್ಕ ಕರ್ತವ್ಯ ಕೇಂದ್ರ ಸರ್ಕಾರದ್ದು. ನಾನು ಕೂಡ ರೈತರ ಸಾಲ ವಜಾ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಆದರೆ ಈಗ ಏನಾಗಿದೆ? ಕೇಂದ್ರ ಸರ್ಕಾರದವರು ಶೇಕಡ ೫೦ರಷ್ಟು ಸಾಲವನ್ನು ನಾವು ಕೊಡುತ್ತೇವೆ, ಶೇಕಡ ೫೦ರಷ್ಟನ್ನು ನೀವು ಹಾಕಿ ವಜಾ ಮಾಡಿಯೆಂದು ಹೇಳುತ್ತಿದ್ದಾರೆ. ಸಹಕಾರಿ ರಂಗದಲ್ಲಿರತಕ್ಕ ಸಾಲದ ಶೇಕಡ ೫೦ರಷ್ಟನ್ನು ನಾವು ಕೊಡುತ್ತೇವೆ ಎನ್ನುವ ನೀತಿಯನ್ನು ಕೇಂದ್ರ ಸರ್ಕಾರದವರು ಪ್ರಚಾರ ಮಾಡಿದರು. ಎಲ್ಲಾ ವಿರೋಧ ಪಕ್ಷದವರು ಒಂದುಗೂಡಿ, ಒಂದು ನಿಯೋಗ ಹೋಗಿ, ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿಯಾದಾಗ ಅವರು ಇದಕ್ಕೆ ಒಪ್ಪಲಿಲ್ಲ. ಮತ್ತೊಮ್ಮೆ ನಾವು ವಿನಂತಿ ಮಾಡಿಕೊಳ್ಳುತ್ತೇವೆ. ಕೇಂದ್ರ ಸರ್ಕಾರ ಶೇಕಡ ೫೦ರಷ್ಟು ಸಾಲವನ್ನು ಕೊಡುವಾಗ ನಮ್ಮ ರಾಜ್ಯದಲ್ಲಿ ೩೬೦ ಕೋಟಿ ರೂಪಾಯಿ ಸಾಲ ಇದೆ. ಈ ೩೬೦ ಕೋಟಿ ರೂಪಾಯಿ ಸಾಲದಲ್ಲಿ ೧೮೦ ಕೋಟಿ ರೂಪಾಯಿ ಹಣ ನಮ್ಮ ರಾಜ್ಯದ ರೈತರ ಪರವಾಗಿ ಕೇಂದ್ರ ಸರ್ಕಾರದಿಂದ ಬರುತ್ತದೆ. ೧೮೦ ಕೋಟಿ ರೂಪಾಯಿಗಳವರೆಗೆ ಹಣ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯದ ರೈತರ ಕೈ ಸೇರುವುದು ಯಾವಾಗ ಅಂದರೆ ಕೇಂದ್ರ ಸರ್ಕಾರದ ಯೋಜನೆಯಂತೆ ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡರೆ ಕೇಂದ್ರದವರು ಕೊಡುವುದಕ್ಕೆ ತಯಾರಾಗಿದ್ದಾರೆ. ಇವರ ನಿಲುವು ಏನಾಗಿದೆ ಅಂದರೆ, ಇವರು ಇಲ್ಲಿ ಕೊಡುವುದಕ್ಕೂ ತಯಾರಾಗಿಲ್ಲ, ಅಲ್ಲಿಂದ ಬರತಕ್ಕ ಹಣವನ್ನು ತೆಗೆದುಕೊಳ್ಳುವುದಕ್ಕೂ ತಯಾರಾಗಿಲ್ಲ. ಕೇಂದ್ರ ಸರ್ಕಾರದಿಂದ ಬರುವಂತಹ ಹಣಕ್ಕೆ ಇವರು ಅಡ್ಡಗಾಲು ಹಾಕುತ್ತಿದ್ದಾರೆಂದು ಹೇಳಬೇಕಾಗಿದೆ. ಇದನ್ನು ಸರ್ಕಾರದವರು ತೀವ್ರವಾಗಿ ಗಮನಿಸಬೇಕು. ಒಂದೇ ಮಾತಿನಲ್ಲಿ ಹೇಳುವುದಾದರೆ, ಮೊದಲಿನಿಂದ ಕೊನೆಯವರೆಗೂ ಏನೂ ಆಗಿಲ್ಲ. ನಿಮ್ಮ ಕೈಯಲ್ಲಿ ಆಗುವುದಿಲ್ಲ. ಸಂಪನ್ಮೂಲದ ಕೊರತೆಯಿದೆ. ನೀರಾವರಿ ಕೆಲಸ ಮಾಡಬೇಕು ರಸ್ತೆ ಕೆಲಸ ಮಾಡಬೇಕು, ಶಾಲಾ ಕಟ್ಟಡಗಳನ್ನು ಕಟ್ಟಬೇಕು. ಅದನ್ನು ನಾವು ಇಲ್ಲವೆಂದು ಹೇಳುವುದಿಲ್ಲ. ಆದರೆ ಕೇಂದ್ರ ಸರ್ಕಾರ ಮಾಡಿರತಕ್ಕ ನಿರ್ಧಾರದಿಂದ ೧೮೦ ಕೋಟಿ ರೂಪಾಯಿ ರೈತರ ಕೈ ಸೇರುತ್ತದೆ. ಇದನ್ನು ತಡೆಯುವಂತಹ ಕೆಲಸವನ್ನು ಆ ಪ್ರಯತ್ನವನ್ನು ನೀವು ಖಂಡಿತಾ ಮಾಡಬೇಡಿ. ಅವರು ಮಾಡಲಿಯೆಂದು ನೀವು ಕೈಕಟ್ಟಿ ಕುಳಿತರೆ ರಾಜ್ಯದ ರೈತರ ಪರಿಸ್ಥಿತಿ ಏನಾಗಬೇಕು. ಇದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ರೈತರಿಗಾಗಿ ಯಾವುದೇ ರಾಜ್ಯದಲ್ಲಿ ಏನಾದರೂ ಮಾಡಿರಲಿ ನೀವು ನಮ್ಮ ರಾಜ್ಯದ ರೈತರಿಗೆ ಸಹಾಯ ಮಾಡಿ. ಗುಜರಾತ್ ರಾಜ್ಯ ಸರ್ಕಾರ ರೈತರಿಗೆ ೪೦೦ ಕೋಟಿ ರೂಪಾಯಿ ಸಾಲವನ್ನು ವಜಾ ಮಾಡಿದೆ. ಅವರು ರೈತರ ಸಾಲವನ್ನು ವಜಾ ಮಾಡಿರುವುದನ್ನು ನೋಡಿಯಾದರೂ ಕೂಡ ತಾವು ಕೆಲಸ ಮಾಡಿ. ಬೇರೆ ರಾಜ್ಯದಲ್ಲಿ ಯಾವ ಕೆಲಸಗಳನ್ನು ಮಾಡುತ್ತಿದ್ದಾರೆ, ಯಾವ ದಿಕ್ಕಿನಲ್ಲಿ ರಾಜ್ಯ ಸರ್ಕಾರಗಳು ಕೆಲಸ ಮಾಡುತ್ತಿವೆ, ಯಾವ ದಿಕ್ಕಿನಲ್ಲಿ ರಾಜ್ಯ ಸರ್ಕಾರಗಳು ಹೋಗುತ್ತಿವೆ ಎನ್ನುವುದನ್ನು ಗಮನಿಸಿ ಕೆಲಸ ಮಾಡಿ. ಗುಜರಾತ್ ಸರ್ಕಾರ ದಿಟ್ಟವಾದ ನಿಲುವನ್ನು ತಳೆದು ರೈತರ ಸಾಲವನ್ನು ವಜಾ ಮಾಡತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಅದನ್ನು ನೋಡಿ ಆ ಒಂದು ಮಾರ್ಗದರ್ಶನದಲ್ಲಿ ತಾವು ರೈತರ ಸಾಲವನ್ನು ವಜಾ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ ಈ ಸಂದರ್ಭದಲ್ಲಿ ರೈತರ ಯಾವ ಸಾಲವನ್ನು ವಜಾ ಮಾಡಬೇಕೆನ್ನುವ ಬಗ್ಗೆ ಚಿಂತನೆ ಮಾಡುವುದು ಅವಶ್ಯಕತೆ ಇದೆ. ೧೯೪೭ರಲ್ಲಿ ನಮಗೆ ಸ್ವಾತಂತ್ರ್ಯ ಬಂದ ಮೇಲೆ ಈ ದೇಶದಲ್ಲಿ ಆಹಾರ ಉತ್ಪಾದನೆ ೪೪ ದಶಲಕ್ಷ ಟನ್ ಇತ್ತು. ೧೯೪೬-೪೭ರಲ್ಲಿ ಆಹಾರ ಧಾನ್ಯ ಉತ್ಪಾದನೆಯಾಗುತ್ತಿತ್ತು. ಇವತ್ತು ನಮ್ಮ ದೇಶದಲ್ಲಿ ೧೭೧ ದಶಲಕ್ಷ ಟನ್ ಆಹಾರ ಉತ್ಪಾದನೆಯಾಗುತ್ತಿದೆ. ಆಹಾರದ ಉತ್ಪಾದನೆ ಎಷ್ಟರಮಟ್ಟಿಗೆ ಜಾಸ್ತಿಯಾಗುತ್ತಿದೆ ಅಂದರೆ ಶೇಕಡ ೦.೧ರಷ್ಟು ಆಹಾರ ಉತ್ಪಾದನೆ ಸ್ವಾತಂತ್ರ್ಯ ಪೂರ್ವದಲ್ಲಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಪ್ರತಿ ವರ್ಷ ೦.೧ರಷ್ಟು ಆಹಾರ ಉತ್ಪಾದನೆಯಾದರೆ, ಇವತ್ತು ನಮ್ಮ ದೇಶದಲ್ಲಿ ಎಷ್ಟು ಆಹಾರ ಉತ್ಪಾದನೆಯಾಗುತ್ತಿದೆ

ಯೆಂದರೆ, ೧೯೫೦ರಿಂದ ೧೯೮೦ರವರೆಗೆ ಪ್ರತಿ ವರ್ಷ ಆಹಾರದ ಹೆಚ್ಚುವರಿ ಉತ್ಪಾದನೆಯಾಗುತ್ತಿರುವುದು ಶೇಕಡ ೨.೬ರಷ್ಟು ೧೯೮೦ರಿಂದ ೧೯೮೫ರವರೆಗೆ ಆಹಾರದ ಉತ್ಪಾದನೆ ಆಗಿರುವುದು. ಶೇಕಡ ೩.೯ ದಶಲಕ್ಷ ಟನ್. ಈ ಮಟ್ಟದಲ್ಲಿ ಪ್ರತಿ ವರ್ಷ ಆಹಾರದ ಉತ್ಪಾದನೆ ಆಗುತ್ತಿದೆ. ಅದೇ ರೀತಿ ಹತ್ತಿ, ಸಕ್ಕರೆ, ಮುತ್ತಿತರೆ ಪದಾರ್ಥಗಳು ಸಹ ಉತ್ಪಾದನೆಯಾಗುತ್ತಿವೆ. ವ್ಯವಸಾಯ ರಂಗದಲ್ಲಿ ಉತ್ಪಾದನೆಯಾಗತಕ್ಕದ್ದನ್ನು ನೋಡಿದರೆ ಅದರಲ್ಲಿ ಅಜಗಜಾಂತರ ವ್ಯತ್ಯಾಸ ಇದೆ.

ಇಷ್ಟೊಂದು ರೀತಿಯಲ್ಲಿ ಉತ್ಪಾದನೆ ಜಾಸ್ತಿಯಾಗುತ್ತದೆ. ಇದೇರೀತಿಯಲ್ಲಿ ರೈತನ ಆದಾಯ ಹೆಚ್ಚಾಗುತ್ತಿದೆಯೇ ಎಂದರೆ, ಖಂಡಿತ ಇಲ್ಲ. ಈ ಬಗ್ಗೆ ಇರುವ ಅಂಕಿಅಂಶಗಳನ್ನು ಗಮನಿಸಿದಾಗ ಎಂಥವನೂ ಕೂಡ, ಎಂಥ ನಿರ್ದಯಿ, ಕಟುಕ ಹೃದಯ ಇರುವಂಥವನೂ ಕೂಡ ರೈತರ ಬಗ್ಗೆ ಕನಿಕರದ ಮಾತನ್ನು ಆಡತಕ್ಕಂಥ ಪರಿಸ್ಥಿತಿಯನ್ನು ಇವತ್ತು ನಮ್ಮ ದೇಶದಲ್ಲಿ ಕಾಣುತ್ತಿದ್ದೇವೆ. ಇವತ್ತು ಇಡೀ ದೇಶಕ್ಕೆ ಅನ್ನ ಕೊಡತಕ್ಕಂಥವನು ರೈತ, ಭತ್ತ ಕೊಡತಕ್ಕವನು ರೈತ ಆದರೆ ಅವನ ಪಾಡು ಏನಾಗಿದೆ ಎಂದು ತಜ್ಞರಾಗಿರತಕ್ಕಂಥವರು ಹೇಳಿದರು. ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ನಮ್ಮ ದೇಶದಲ್ಲಿ ಆರ್ಥಿಕ ಪರಿಸ್ಥಿತಿಯು ದಿಕ್ಕು ಯಾವ ದಾರಿಯಲ್ಲಿ ಹೋಗುತ್ತಿದೆ ಎಂದು ತಿಳಿದುಕೊಂಡು ತಜ್ಞರಾದವರು ಹೇಳಿದ್ದಾರೆ. ಅದನ್ನು ಇಲ್ಲಿ ಹೇಳತಕ್ಕದು ಬಹಳ ಸೂಕ್ತವೆಂದು ಭಾವಿಸಿ, ನಾನು ತಮ್ಮ ಅಪ್ಪಣೆ ಪಡೆದು ಅದನ್ನು ಓದುವುದಕ್ಕೆ ಇಚ್ಛೆಪಡುತ್ತೇನೆ.

> "...in view of undue interest shown in agricultural development in the country has resulted in wide fluctuation in respect of agricultural income and national economy. The share of Agricuiture GDP has declined from 59% in 1950–51 to 33%...in the year 1950–51 the national GDP was 59%. now it has come down to 33% though the percentage of population dependent on agriculture has more or less remained constant around 72%. This shows National Income distribution in the country is getting adversely sequezed the ratio between average urban income and rural income widening all the time."...

ಇದು ನಾನು ಹೇಳಿರತಕ್ಕಂಥಾದ್ದಲ್ಲ, ನಮ್ಮ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡಿದಂಥ ತಜ್ಞರಾದ ಶ್ರೀ ರಂಗಸ್ವಾಮಿ ಎನ್ನತಕ್ಕಂಥವರು ಹೇಳಿದ್ದುದು. ಅವರ ಮಾತನ್ನು ನಾನು ಇಲ್ಲಿ ಉಲ್ಲೇಖ ಮಾಡಿದ್ದೇನೆ. ಅಂದರೆ ನಮ್ಮ ದೇಶದಲ್ಲಿ ಆಹಾರ ಉತ್ಪಾದನೆ, ಬಟ್ಟೆ ಉತ್ಪಾದನೆ ಹೆಚ್ಚಾಗಿದ್ದರೂ ಕೂಡ, ಅಂದು ೧೯೫೦–೫೧ರಲ್ಲಿ ಅಂದರೆ ಸ್ವಾತಂತ್ರ್ಯ ಬಂದ ೨–೩ ವರ್ಷಗಳಲ್ಲಿ ಶೇಕಡಾ ೭೨ರಷ್ಟು ಜನ ನಾನು ಹೇಳಿದ ರೀತಿಯಲ್ಲಿ ಕೇವಲ ೪೪ ಮಿಲಿಯನ್ ಟನ್ ಆಹಾರವನ್ನು ಉತ್ಪಾದನೆ ಮಾಡುತ್ತಿದ್ದರು. ಅವತ್ತು ರಾಷ್ಟ್ರದ ಸಂಪತ್ತಿಗೆ ಶೇಕಡ ೫೯ರಷ್ಟನ್ನು ಈ ಶೇಕಡಾ ೭೨ರಷ್ಟು ಜನ ಕೊಡುತ್ತಿದ್ದರು. ಇವತ್ತು ರಾಷ್ಟ್ರೀಯ ಉತ್ಪಾದನೆಗೆ ಇಡೀ ಶೇಕಡ ೭೨ ರಷ್ಟು ಜನ ಕೇವಲ ೩೩ರಷ್ಟು ಕೊಡುತ್ತಿದ್ದಾರೆ ಎಂದರೆ ಶೇಕಡಾ ೩೩ ರಷ್ಟು ಆದಾಯವನ್ನು ಶೇಕಡಾ ೭೨ರಷ್ಟು ಜನ ಇವತ್ತಿನದಿವಸ ವ್ಯವಸಾಯ ರಂಗದಲ್ಲಿ ಹಂಚಿಕೊಳ್ಳುತ್ತಿದ್ದಾರೆ. ರೈತನ ಸಾಲ ಏಕೆ ಮಜಾ ಆಗಬೇಕು ಎಂದು ಹೇಳಿದರೆ, ಇವತ್ತು ಇಡೀ ದೇಶದಲ್ಲಿ ರೈತ ಸಂಪತ್ತನ್ನು ಹಂಚಿಕೊಳ್ಳುವುದಕ್ಕೆ ಬದಲಾಗಿ ಸಾಲವನ್ನು ಹಂಚಿಕೊಳ್ಳುತ್ತಿದ್ದಾನೆ. ಈ ಸಾಲವನ್ನು ಅವನು ಹಂಚಿಕೊಳ್ಳತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಅದಕ್ಕೆ ರೈತ ಯಾವ ವಿಧದಿಂದಲೂ ಕಾರಣನಲ್ಲ. ಈ ಸಮಾಜ ಇದಕ್ಕೆ ಕಾರಣ. ಯಾವುದೇ ಸರ್ಕಾರವಾಗಲಿ, ಆಳುವಂಥ ಸರ್ಕಾರಗಳು ಇದಕ್ಕೆ ಕಾರಣ. ಈ ಸಮಾಜ ಕೂಡ ರೈತನಿಗೆ ವಂಚನೆ ಮಾಡಿದೆ. ಸರ್ಕಾರಗಳು ಕೂಡ ರೈತನಿಗೆ ವಂಚನೆ ಮಾಡಿವೆ. ಈ ಕಾರಣದಿಂದ ರೈತನ ಸಾಲದ ಹೊರೆ ದಿನಕಳೆದಂತೆ, ವರ್ಷಗಳು ಕಳೆದಂತೆ ಇವತ್ತು ಹೆಚ್ಚಾಗುತ್ತಿದೆ. ಆದ್ದರಿಂದ ಈ ಸಾಲದ ಮಜಾ ಆಗಬೇಕಾಗಿರತಕ್ಕಂಥಾದ್ದು ಅತಿ ಅವಶ್ಯಕವೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಉಪಾಧ್ಯಕ್ಷಿಣಿಯವರೆ, ಇವತ್ತಿನದಿವಸ ಕೈಗಾರಿಕಾ ರಂಗದಲ್ಲಿ ಅನೇಕ ಉತ್ಪಾದನೆಗಳು ಆಗುತ್ತವೆ. ವ್ಯವಸಾಯ ರಂಗದಲ್ಲಿ ಉತ್ಪಾದನೆ ನಡೆಯುತ್ತಿದೆ. ಕೈಗಾರಿಕಾ ರಂಗದಲ್ಲಿ ಉತ್ಪಾದನೆ ಆಗತಕ್ಕಂಥ ಪ್ರತಿಯೊಂದು ಪದಾರ್ಥಕ್ಕೂ ಆ ವಸ್ತುವಿನ ಬೆಲೆ ಎಷ್ಟು ಎಂದು ಚೀಟಿಯನ್ನು ಅಂಟಿಸಿರುತ್ತಾರೆ ಇದು ನಮ್ಮೆಲ್ಲರಿಗೂ ಗೊತ್ತಿದೆ. ಇದರ ಬಗ್ಗೆ ವಿಶೇಷವಾಗಿ ಏನೂ ಹೇಳಬೇಕಾಗಿಲ್ಲ. ನೀವು ಯಾವುದಾದರೂ ಸಂತೆಗೆ ಅಥವಾ ಯಾವುದಾದರೂ ಮಾರ್ಕೆಟ್ಟಿಗೆ ಹೋಗಿ ನೋಡಿ. ಅಲ್ಲಿ ರೈತ ಬೆಳೆದ ಮಾಲಿನ ಮೇಲೆ ಅದರ ಬೆಲೆ

ಎಂದು ಒಂದು ಚೀಟಿ ಅಂಟಿಸಿ ಮಾರಾಟ ಮಾಡತಕ್ಕ ಪದ್ಧತಿ ಈ ದೇಶದಲ್ಲಿ ಇದೆಯೇ? ಮಾನ್ಯ ಬಾಬಾಗೌಡ ರುದ್ರಗೌಡ ಪಾಟೀಲರು, ಹತ್ತಿ ೧೬೦೦ ರೂಪಾಯಿ ಇದ್ದುದು, ಈ ವರ್ಷ ೫೦೦ ರೂಪಾಯಿ ಆಗಿದೆ ಎಂದು ಹೇಳಿದರು. ಹೋದವರ್ಷ ಒಂದು ಕ್ವಿಂಟಾಲ್ ಹತ್ತಿಯನ್ನು ಬೆಳೆಯ ಬೇಕಾದರೆ ಎಷ್ಟು ಖರ್ಚು ಮಾಡಬೇಕಾಗಿತ್ತೋ ಅಷ್ಟನ್ನು ಈ ವರ್ಷವೂ ಖರ್ಚುಮಾಡಬೇಕು. ಹೋದ ವರ್ಷ ಒಂದು ಕ್ವಿಂಟಾಲ್ ಹತ್ತಿಗೆ ೧೬೦೦ ರೂಪಾಯಿ ಬೆಲೆ ಸಿಕ್ಕಿದರೆ, ಈ ವರ್ಷ ೫೦೦ ರೂಪಾಯಿ ಸಿಕ್ಕಿದೆ. ಇದಕ್ಕೆ ಯಾರು ಕಾರಣ? ರೈತರು ಕಾರಣವೇ ? ಈ ಸಮಾಜಕ್ಕೆ, ಈ ದೇಶಕ್ಕೆ ಅನ್ನ ಕೊಟ್ಟಿರತಕ್ಕ ತಪ್ಪನ್ನು ಬಟ್ಟೆ ಕೊಟ್ಟಿರತಕ್ಕ ತಪ್ಪನ್ನು ರೈತ ಸತತವಾಗಿ ಮಾಡುತ್ತಾ ಬಂದಿದ್ದಾನೆ. ಇದು ಈ ಸಮಾಜಕ್ಕೆ, ಈ ದೇಶಕ್ಕೆ, ಈ ರೈತ ಮಾಡಿರತಕ್ಕ ಅನ್ಯಾಯ ಅಪಕಾರ. ಅದಕ್ಕೋಸ್ಕರ ಇವತ್ತಿನದಿವಸ ಈ ಸಾಲದ ಹೊರೆಯನ್ನು ರೈತರ ಮೇಲೆ ಏರಿಸಿರತಕ್ಕ ಹುನ್ನಾರ ಏನಿದೆ ಇದು ಸತತವಾಗಿ ನಡೆಯುತ್ತಾ ಬಂದಿದೆ. ಈ ಬಗ್ಗೆ ನಾನು ಅನೇಕ ಉದಾಹರಣೆಗಳನ್ನು ಕೊಡಬಲ್ಲೆ. ಇವತ್ತಿನದಿವಸ ಕ್ರಿಮಿನಾಶಕ ಔಷಧಿಗಳ ಬೆಲೆ ಏನಾಗಿದೆ? ಈ ಔಷಧಿಗಳು ಇಲ್ಲದೆ ವ್ಯವಸಾಯ ಮಾಡುವ ಹಾಗೆ ಇಲ್ಲ. ಬೆಳೆ ಸಂರಕ್ಷಣೆಗೆ ಔಷಧಿಗಳು ಇಲ್ಲದೆ ಏನೂ ಮಾಡುವ ಹಾಗೆ ಇಲ್ಲ ೧೬-೧೮ ರೂಪಾಯಿ ಗಳು ಇದ್ದ ಕೆಲವು ಔಷಧಿಗಳು ೪-೫ ವರ್ಷಗಳಿಂದೀಚೆಗೆ ೭೦-೮೦ ರೂಪಾಯಿಗಳಿಗೆ ಮಾರಾಟ ವಾಗುತ್ತಿವೆ. ತರಕಾರಿ ಬೆಳೆಯತಕ್ಕ, ಹಣ್ಣು ಬೆಳೆಯತಕ್ಕ ರೈತರು ಔಷಧಿ ಹೊಡೆಯಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ಕೋಸು ಬೆಳೆಯಬೇಕಾದ್ದರೆ, ಇದ್ದಕ್ಕೆ ಔಷಧಿ ಹೊಡೆಯಬೇಕು. ನನಗೆ ಎಷ್ಟು ದುಃಖವಾಗುತ್ತದೆಂದು ಹೇಳಿದರೆ ಈ ಔಷಧಿ ಹೊಡೆಯಬೇಕಾದರೆ ಒಂದೊಂದು ಸಂದರ್ಭದಲ್ಲಿ, ಒಂದು ಲೀಟರ್ ಔಷಧಿಗೆ ಒಂದೂವರೆ ಸಾವಿರ ರೂಪಾಯಿವರೆಗೂ ಕೊಡಬೇಕಾಗುತ್ತದೆ. ಇಂತಹ ಔಷಧಿ ಹೊಡೆದರೂ ಕೋಸಿಗೆ ಬೀಳತಕ್ಕ ಹುಳ ಸಾಯುವುದಿಲ್ಲ. ಒಂದು ವಾರಕ್ಕೆ ಇಂತಹ ಔಷಧಿಯನ್ನು ಒಂದೆರಡು ಬಾರಿ ಹೊಡೆಯಬೇಕಾಗುತ್ತದೆ. ಕೋಸನ್ನು ಬೆಳೆಯಬೇಕಾದರೆ, ವಿಷದಲ್ಲಿ ಈ ಕೋಸು ಗೆಡ್ಡೆಯನ್ನು ಮುಳುಗಿಸಬೇಕು. ಈ ರೀತಿ ಒಂದು ಲೀಟರ್ ಔಷಧಿಗೆ ಒಂದೂವರೆ ಸಾವಿರ ರೂಪಾಯಿ ಖರ್ಚು ಮಾಡಿ ಬೆಳೆದ ಈ ಬೆಳೆಯನ್ನು ಮಾರುಕಟ್ಟೆಗೆ ತಂದರೆ, ಅನೇಕ ಸಂದರ್ಭಗಳಲ್ಲಿ ಮಾರುಕಟ್ಟೆಗೆ ತರತಕ್ಕ ಕೂಲಿ ಕೂಡ ಸಿಗುವುದಿಲ್ಲ. ಎಷ್ಟೋ ಜನ ರೈತರು ನೂರಾರು ಎಕರೆಯಲ್ಲಿ ಬೆಳೆದಿರತಕ್ಕ ಈ ಕೋಸನ್ನು ಅಲ್ಲಿಯೇ ಭೂಮಿಯಲ್ಲಿ ಹೂಳಿರತಕ್ಕ ನಿದರ್ಶನಗಳೂ ಇವೆ. ರೈತನಿಗೆ ಬೆಳೆ ಹೋಯಿತೆಂದು ಅವನಿಗೆ ಯಾರು ಮೂರು ಕಾಸು ಕೊಟ್ಟಿದ್ದಾರೆ. ಅವನಿಗೆ ಯಾವ ವ್ಯವಸ್ಥೆ ಇದೆ. ಇನ್ಷೂರೆನ್ಸ್ ಇದೆ ಎಂದು ಹೇಳಬಹುದು. ಹೆಬ್ಬೆಟ್ಟನ್ನು ಒತ್ತುವ ರೈತನಿಗೆ ಇನ್ಷೂರೆನ್ಸ್ ಇದೆ ಎಂದು ಗೊತ್ತೇ? ಈ ವಿಷಯವನ್ನು ಈ ಜನಕ್ಕೆ ಮುಟ್ಟಿಸುವ ಕೆಲಸ ಈ ದೇಶದಲ್ಲಿ ನಡೆದಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಇದು ಗಂಭೀರವಾದ ಚರ್ಚೆ. ನಾವು ಜನರಲ್ಲಾಗಿ ಮಾತನಾಡುತ್ತಾ ಇದ್ದೇವೆ. ರೈತ ಕಷ್ಟದಲ್ಲಿದ್ದಾನೆ, ರೈತ ಶೋಷಣೆಗೆ ಒಳಗಾಗಿದ್ದಾನೆ, ಅವನು ಬೆಳೆದ ಮಾಲಿಗೆ ಸಾಕಷ್ಟು ದರ ಸಿಗುತ್ತಾ ಇಲ್ಲ, ರೈತನಿಗೆ ಸರ್ಕಾರಗಳು ಅನುಕೂಲಗಳನ್ನು ಮಾಡಿಲ್ಲ. ಇದನ್ನು ಗಂಟೆ ಗಟ್ಟಲೆ, ದಿನಗಟ್ಟಲೆ ಮಾತನಾಡಬಹುದು. ಇವತ್ತು ನಮ್ಮ ಮುಂದಿರುವಂಥ, ಸೀಮಿತವಾದಂಥ ಪ್ರಶ್ನೆ, ರೈತರ ಸಾಲ ಮನ್ನಾ ಮಾಡುವಂಥ ಪ್ರಶ್ನೆ. ಮತ್ತು ಇದರ ಬಗ್ಗೆ ಕೇಂದ್ರ ಸರ್ಕಾರದ ಯೋಜನೆ ಹಿನ್ನೆಲೆಯಲ್ಲಿ ನಾವು ವಿಚಾರ ಮಾಡಿ, ನಮ್ಮ ನಿಲುವೇಯನ್ನು ಸ್ಪಷ್ಟವಾಗಿ ಹೇಳಬೇಕು. ಅದಕ್ಕಾಗಿ ನಿನ್ನೆಯೇ ನಾನು ಹೇಳಿದ್ದೇನೆ. ಕೇಂದ್ರ ಸರ್ಕಾರದ ಯೋಜನೆಗಳ ವಿವರಗಳನ್ನು ಈಗಾಗಲೇ ಹಂಚಿದ್ದೇನೆ. ಕೇಂದ್ರ ಸರ್ಕಾರದ ಯೋಜನೆ ಸ್ಪಷ್ಟವಾಗಿ ಹೇಳುತ್ತದೆ. ಈ ಯೋಜನೆ ೧೯೮೯-೯೦ರಲ್ಲಿ ರೈತರು ಏನು ಸಾಲ ತೆಗೆದುಕೊಂಡಿದ್ದಾರೆ, ಅವಕ್ಕೆ ಅನ್ವಯವಾಗುತ್ತದೆ. ಆದರೆ ೧೯೮೯-೯೦ಕ್ಕೆ ರೈತರು ಏನು ಸಾಲ ತೆಗೆದುಕೊಂಡಿದ್ದಾರೆ ಅದನ್ನು ತಿರುಗಿ ಕೊಡಬೇಕು. ೧೯೯೦-೯೧ರ ಸಾಲ ರೈತರಿಗೆ ಸಿಗಬೇಕು. ಇದನ್ನು ನಾನು ಹೇಳಿದ್ದಲ್ಲ, ಕೇಂದ್ರ ಸರ್ಕಾರ ಹೇಳುತ್ತಾ ಇದೆ. ಅನೇಕ ಮಾನ್ಯ ಸದಸ್ಯರು ಇಲ್ಲಿ ಜನರಲ್ಲಾಗಿ ಮಾತನಾಡುತ್ತಿದ್ದಾರೆ. ರೈತನಿಗೆ ಔಷಧಿ ಕೊಳ್ಳಲು ಶಕ್ತಿ ಇಲ್ಲ, ಔಷಧಿ ಸಿಗುತ್ತಿಲ್ಲ, ಎಷ್ಟು ಔಷಧಿ ಹೊಡೆದರೂ ಕ್ರಿಮಿಕೀಟಗಳು ಸಾಯುವಂತೆ ಇಲ್ಲ, ರೈತನಿಗೆ ಕೊಡುವ ಗೊಬ್ಬರದಲ್ಲಿ ಮಿಶ್ರಣವಾಗುತ್ತಿದೆ, ಇತ್ಯಾದಿ ಇತ್ಯಾದಿ ಮಾತುಗಳನ್ನು ಹೇಳುವುದೆಲ್ಲಾ ಸರಿ. ಆದರೆ ನಮ್ಮ ಮುಂದೆ ಇರುವಂತಹ ಪ್ರಶ್ನೆ ಏನು ? ರೈತರ ಸಾಲ ಮನ್ನಾ ಆಗಬೇಕು. ಯಾವ ಸಾಲ ಮನ್ನಾ ಆಗಬೇಕು ? ೧೯೮೯-೯೦ರ ಸಾಲವನ್ನು ಕೇಂದ್ರ ಸರ್ಕಾರ ಮನ್ನಾ ಮಾಡುವುದಕ್ಕೆ ತಯಾರು ಇಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಅಂದಮೇಲೆ ಆ ಸಾಲವನ್ನು ವಸೂಲು ಮಾಡಬೇಕೇ ಅಥವಾ ವಸೂಲು ಮಾಡಬಾರದೇ, ಆ ಸಾಲ ವಸೂಲಿ ಮಾಡದಿದ್ದರೆ ನಬಾರ್ಡ್‌ನವರು, ನೀವು ಮನೆಗೆ ಹೋಗಿ, ಇಲ್ಲಿಗೆ ಬರಬೇಡಿ ಎಂದು ಹೇಳುತ್ತಾರೆ. ಹೀಗಾದರೆ ಮುಂದೆ ರೈತರ ಗತಿ ಏನು ? ಈ ಒಂದು ಹಿನ್ನೆಲೆ ಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ನನಗೆ ಸ್ವಲ್ಪ ಸಹಾಯವಾಗುತ್ತದೆ, ನಾವು ಯಾವ ರೀತಿ ಯೋಜನೆ ರೂಪಿಸಬೇಕು ಎನ್ನುವುದಕ್ಕೆ ಕೂಡ ಅವರು ಸಹಾಯ ಮಾಡಿದಂತಾಗುತ್ತದೆ. ಆ

ದೃಷ್ಟಿಯಲ್ಲಿ ಮಾತನಾಡಿ ಎಂದರೆ ರೈತನಿಗೆ ಔಷಧಿ ಇಲ್ಲ, ರೈತ ಕಷ್ಟದಲ್ಲಿ ನಿಂತಿದ್ದಾನೆ, ರೈತ ಶೋಷಣೆಯಲ್ಲಿದ್ದಾನೆ ಎಂದರೆ ಇದು ತಮಗೆಲ್ಲರಿಗೂ ಗೊತ್ತಿದೆ. ಏಕೆಂದರೆ ಇಲ್ಲಿರುವವರೆಲ್ಲರೂ ರೈತರ ಮಕ್ಕಳೇ, ರೈತರ ಮಕ್ಕಳಲ್ಲದೆ ಇರುವವರು ನೂರಕ್ಕೆ ಒಬ್ಬರೂ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ಈ ಎಲ್ಲಾ ವಿಷಯಗಳ ಬ್ಯಾಕ್‌ಗ್ರೌಂಡ್ ಇಟ್ಟುಕೊಂಡು ತಾವು ತಮ್ಮ ಸಲಹೆಗಳನ್ನು ರಚನಾತ್ಮಕವಾಗಿ ಕೊಟ್ಟರೆ ನಾವು ಯೋಚನೆ ಮಾಡಬಹುದು. ಅಂಥಾದ್ದನ್ನು ವಿಚಾರ ಮಾಡುವುದಕ್ಕೆ ಮತ್ತು ಅದನ್ನು ಗಮನಕ್ಕೆ ತೆಗೆದುಕೊಂಡು ಯೋಚನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ದಿಸೆಯಲ್ಲಿ ನಾವು ಚರ್ಚೆ ಮಾಡಿದರೆ, ಅದು ಸಾರ್ಥಕವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಮಾನ್ಯ ಬೈರೇಗೌಡರೇ, ಅವರು ಹೇಳಿದ್ದಾರೆ ತಾವು ಯೋಚನೆ ಮಾಡಿ ಪುನಃ ೧೨ ಗಂಟೆಗೆ ತಮ್ಮ ಭಾಷಣವನ್ನು ಪ್ರಾರಂಭ ಮಾಡಿ. ಈಗ ಸಭೆಯನ್ನು ನಾನು ಮುಂದೂಡುತ್ತೇನೆ.

ಸದನವು ಒಂದು ಗಂಟೆ ಎರಡು ನಿಮಿಷಕ್ಕೆ ಮುಂದಾಯವಾಗಿ ಪುನಃ ಎರಡು ಗಂಟೆಗೆ ಸೇರಲು ನಿಶ್ಚಯಿಸಿತು.

(ಸದನವು ಪುನಃ ೨ ಗಂಟೆ ೨೪ ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷರು ಪೀಠದಲ್ಲಿದ್ದರು).

ಶ್ರೀ ವಾಟಾಳ್ ನಾಗರಾಜ್.—ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ೨೦ ನಿಮಿಷಗಳ ಕಾಲ ಕರೆಗಂಟೆಯನ್ನು ಹಾಕಿದ್ದುದರಿಂದ ಎಲ್ಲರ ಕಿವಿ ಕಿವುಡಾದವು. ವಿಧಾನಸೌಧಕ್ಕೆಲ್ಲ ಕೇಳುವಂತೆ ಕರೆಗಂಟೆ ಹೊಡೆದುಕೊಂಡರೂ ಯಾರೂ ಬರಲಿಲ್ಲ. ಈಗ ತಾನೆ ಒಬ್ಬರು ಮಂತ್ರಿಗಳು ಒಳಗೆ ಬಂದರು. ಸಧ್ಯ ಅವರೊಬ್ಬರಾದರೂ ಬಂದರಲ್ಲ ಎಂದು ಸಂತೋಷ ಪಡೋಣ. ಈ ಸರ್ಕಾರ ಇದೆಯೊ ಇಲ್ಲವೊ ಎನ್ನುವ ಬಗ್ಗೆ ದೊಡ್ಡ ಸಂಶಯ ಉದ್ಭವವಾಗುತ್ತಿದೆ. ಏನಾದರೂ ಮುಖ್ಯ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟಿದ್ದಾರೆಯೆ ? ಈ ವಿಷಯವನ್ನು ಸಭೆಯ ಮುಂದೆ ಹೇಳುವುದಾದರೆ ಹೇಳಲಿ. ಮಂತ್ರಿಗಳ ಕುರ್ಚಿಗಳನ್ನು ನೋಡಿದರೆ ಎಲ್ಲವೂ ಖಾಲಿ ಇವೆ. ಬೆಳಿಗ್ಗೆಯಿಂದ ನಾವು ನೋಡುತ್ತಿದ್ದೇವೆ. ನಾವು ೨೦ ನಿಮಿಷ ಕರೆ ಗಂಟೆಯ ಶಬ್ದವನ್ನು ಕೇಳಿದ್ದೇವೆ ನೀವು ಬಂದು ಒಂದು ನಿಮಿಷ ಕೂಡ ಆಗಿಲ್ಲ. ಆಗಲೇ ಗಂಟೆ ಬಾರಿಸುತ್ತಿದ್ದೀರಿ. ಮಾನ್ಯ ಪುಟ್ಟಸ್ವಾಮಿಗೌಡರು ಒಬ್ಬರು ಮಂತ್ರಿಗಳು ಬಂದಿದ್ದಾರೆ. ೧೮೦ ಜನ ಶಾಸಕರು ಎಲ್ಲಿ ಹೋಗಿದ್ದಾರೆ ? ಏನಾಗಿದ್ದಾರೆ ?

ಉಪಾಧ್ಯಕ್ಷರು.—ಈಗ ಚರ್ಚೆಯನ್ನು ಪ್ರಾರಂಭ ಮಾಡೋಣ. ಮಾನ್ಯ ಬೈರೇಗೌಡರೆ, ತಮ್ಮ ಭಾಷಣವನ್ನು ಶುರುಮಾಡಿ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಲೋಕೋಪಯೋಗಿ ಸಚಿವರು ಸದಸ್ಯರು ಹೇಳುವುದನ್ನೆಲ್ಲ ಸ್ವೀಕಾರ ಮಾಡುತ್ತಾರೆ. ಈಗ ಮತ್ತೊಬ್ಬರು ಮಂತ್ರಿಗಳು ಬಂದರು. ಅವರು ಮುಕ್ಕಾಲು ಮಂತ್ರಿಗಳು. ಈಗ ಒಂದೂಮುಕ್ಕಾಲು ಮಂತ್ರಿಗಳು ಬಂದಿದ್ದಾರೆ.

ಉಪಾಧ್ಯಕ್ಷರು.—ಚರ್ಚೆಯನ್ನು ಶುರು ಮಾಡೋಣ.

ಶ್ರೀ ವಾಟಾಳ್ ನಾಗರಾಜ್.—ನಾನು ಮನವಿ ಮಾಡುತ್ತಿದ್ದೇನೆ, ಖಾಲಿ ಕುರ್ಚಿಗಳಿವೆ. ಸಚಿವರು ಪ್ರಾಮಾಣಿಕವಾಗಿ ಹೇಳಬೇಕು, ಇದು ಸರಿಯೆ ? ನಿಮ್ಮ ಸರ್ಕಾರದ ವರ್ತನೆ ಸರಿಯೆ ? ಇದಕ್ಕೆ ಉತ್ತರ ಕೊಡಿ. ಸದನದಲ್ಲಿ ರೈತರ ಬಗ್ಗೆ ಚರ್ಚೆಯಾಗುತ್ತಿದೆ, ಸದಸ್ಯರು ಯಾರೂ ಇಲ್ಲ, ಹೇಳುವವರು ಕೇಳುವವರು ಯಾರೂ ಇಲ್ಲವೆ ?

ಉಪಾಧ್ಯಕ್ಷರು.—ದಯವಿಟ್ಟು ಮಾನ್ಯ ಸದಸ್ಯರು ಕುಳಿತುಕೊಳ್ಳಿ. ಮಾನ್ಯ ಬೈರೇಗೌಡರೇ ತಮ್ಮ ಭಾಷಣ ಶುರುಮಾಡಿ. ಕೇಳುವವರು ಇದ್ದಾರೆ, ಬರೆದುಕೊಳ್ಳುವವರು ಇದ್ದಾರೆ, ಎಲ್ಲರೂ ಇದ್ದಾರೆ.

ಶ್ರೀ ಸಿ. ಬೈರೇಗೌಡ.—ಇಬ್ಬರು ಸದಸ್ಯರು, ಒಂದೇ ಬಾರಿ ನಿಂತುಕೊಂಡು ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಪಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷಿಣಿಯವರೆ ತಮ್ಮಲ್ಲಿ ಒಂದು ಮನವಿ ಏನೆಂದರೆ......

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಸದಸ್ಯರು ತಾವು ಕುಳಿತುಕೊಳ್ಳಿ. ತಾವು ಹೇಳಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ಹೇಳಿದ್ದಾರೆ.

ಶ್ರೀ ಪಾಟಾಳ್ ನಾಗರಾಜ್.—ಇದು ಅರ್ಧಜೀವ. ಇವರು ನಮ್ಮ ಕಡೆ ಕುಳಿತುಕೊಂಡು ಬಿಟ್ಟು ಸ್ವಲ್ಪ ನಮಗೆ ಒಂದು ತರಹ ಆಗಿದೆ. ಅವರು ನಮ್ಮ ಸ್ನೇಹಿತರಿದ್ದಾರೆ. ಆದರೆ ಅವರು ಯಾವ ಪಾರ್ಟಿ ಎಂದು ಹೇಳಬೇಕು.

ಉಪಾಧ್ಯಕ್ಷರು.—ಮಾನ್ಯ ಬೈರೇಗೌಡರು ಅರ್ಧ ಮಾತನಾಡಿದ್ದಾರೆ, ಅವರು ಮುಂದುವರಿಸಲಿ ಮಂತ್ರಿಗಳು ಬಂದಿದ್ದಾರೆ, ಸದಸ್ಯರು ಮಾತನಾಡುವುದಕ್ಕೆ ಅಡ್ಡಿ ಮಾಡುವುದು ಬೇಡ, ನಾವು ಚರ್ಚೆ ಯನ್ನು ಪ್ರಾರಂಭ ಮಾಡೋಣ.

ಶ್ರೀ ಪಾಟಾಳ್ ನಾಗರಾಜ್.—ನಾನು ಚರ್ಚೆಗೆ ಅಡ್ಡಿ ಮಾಡುತ್ತಿಲ್ಲ.

ಉಪಾಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ. ಮಂತ್ರಿಗಳನ್ನು ಕರೆಸೋಣ, ತಾವು ಕುಳಿತುಕೊಳ್ಳಿ.

ಶ್ರೀ ಪಾಟಾಳ್ ನಾಗರಾಜ್.—ದಯಮಾಡಿ ಮಂತ್ರಿಗಳನ್ನು ಕರೆಯಿಸಿ.

ಉಪಾಧ್ಯಕ್ಷರು.—ಮಾನ್ಯ ಬೈರೇಗೌಡರು, ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಸಿ. ಬೈರೇಗೌಡ.—ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಮಾತನಾಡತಕ್ಕ ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಧ್ಯೆ ಪ್ರವೇಶಮಾಡಿ, ನೀವು ಪ್ರಸ್ತಾಪ ಮಾಡುವಾಗ ಕೆಲವು ವಿಚಾರ ಗಳನ್ನು ಪದೇ ಪದೇ ಹೇಳುತ್ತಿದ್ದೀರಿ. ನೀವು ನಿರ್ದಿಷ್ಟವಾದ ಸಲಹೆಗಳನ್ನು ಕೊಡಬೇಕನ್ನುವ ಮಾತನ್ನು ಹೇಳಿದ್ದಾರೆ, ನಾನು ಅದಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ನಿರ್ದಿಷ್ಟವಾದ ಸಲಹೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುವಷ್ಟರೊಳಗೆ ಸಭೆಯನ್ನು ಮುಂದೂಡಲಾಯಿತು. ಈಗ ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿಲ್ಲ. ಈಗ ನಾನು ಯಾರಿಗೆ ಹೇಳಬೇಕು.

ಉಪಾಧ್ಯಕ್ಷರು.—ತಾವು ಹೇಳುವುದನ್ನು ಮಂತ್ರಿಗಳು ನೋಟ್ ಮಾಡಿಕೊಂಡು ಮುಖ್ಯ ಮಂತ್ರಿಗಳಿಗೆ ಹೇಳುತ್ತಾರೆ, ತಾವು ಮಾತನಾಡಿ.

ಶ್ರೀ ಸಿ. ಬೈರೇಗೌಡ.—ನಿರ್ದಿಷ್ಟವಾಗಿ ಮಾತನಾಡಿಯೆಂದು ಹೇಳಿದವರು ಈಗ ಸಭೆಯಲ್ಲಿಲ್ಲ.

ಉಪಾಧ್ಯಕ್ಷರು.—ತಾವು ಮಾತನಾಡಿ, ಮಂತ್ರಿಗಳು ಇದ್ದಾರೆ. ಅವರು ನೋಟ್ ಮಾಡಿ ಕೊಂಡು ವಿಷಯವನ್ನು ಮುಖ್ಯಮಂತ್ರಿಗಳಿಗೆ ತಿಳಿಸುತ್ತಾರೆ.

ಶ್ರೀ ಸಿ ಬೈರೇಗೌಡ.—ನಾನು ಹೇಳತಕ್ಕ ವಿಚಾರ, ಎಲ್ಲರಿಗೂ ಗೊತ್ತಿರತಕ್ಕ ವಿಚಾರ, ಅನೇಕ ಸಂದರ್ಭಗಳಲ್ಲಿ ಎಲ್ಲರೂ ಹೇಳಿದ್ದಾರೆನ್ನುವ ಮಾತನ್ನು ಅವರು ಹೇಳಿದ್ದಾರೆ. ಅದನ್ನು ನಾನು ಕೂಡ ಒಪ್ಪಿದರೂ ನಾವು ಹೇಳುವಂತಹ ಮಾತಿಗೆ ಒಪ್ಪಿಗೆ ಇದ್ದರೂ ನಾವು ಮಾತನಾಡಿ, ವೃಥಾ ಕಾಲಹರಣ ಮಾಡುವುದಕ್ಕೆ ನಾವು ಇಲ್ಲಿಗೆ ಬಂದಿದ್ದೇವೆಯೇ? ನಾವು ಪದೇ ಪದೇ ಒತ್ತಿ ಹೇಳುತ್ತಿದ್ದರೂ ಸಹ ರೈತರ ಕಷ್ಟವನ್ನು ನೀವು ಅರ್ಥ ಮಾಡಿಕೊಳ್ಳದಿದ್ದರೆ ನೂರು ಸಾರಿ ಹೇಳಬೇಕಾಗುತ್ತದೆ. ನೂರು ಒಂದನೇ ಸಾರಿಯೂ ಹೇಳಬೇಕಾಗುತ್ತದೆ. ಈಗ ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿಲ್ಲ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ತಾವು ಏನು ಸಲಹೆಗಳನ್ನು ಕೊಡುತ್ತೀರಿ ಅದನ್ನು ಮಂತ್ರಿಗಳು ನೋಟ್‌ಡೌನ್ ಮಾಡಿಕೊಂಡು ವಿಷಯವನ್ನು ಅವರಿಗೆ ತಿಳಿಸುತ್ತಾರೆ.

ಶ್ರೀ ಸಿ. ಬೈರೇಗೌಡ.—ನಾನು ಮಾತನಾಡುವುದಕ್ಕೆ ನಿಂತಿದ್ದೇನೆ, ಮಾತನಾಡುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಮುಖ್ಯಮಂತ್ರಿಗಳು ಬರುವವರೆಗೆ ಈ ಸಭೆಯನ್ನು ಅರ್ಧ ಗಂಟೆ ಮುಂದಕ್ಕೆ ಹಾಕಿ.

ಶ್ರೀ ಪಾಟಾಳ್ ನಾಗರಾಜ್.—ಈಗ ಒಟ್ಟು ಹಿಳಿಜನ ಸದಸ್ಯರು ಇಲ್ಲಿದ್ದೇವೆ. ರೈತರ ಬಗ್ಗೆ ಚರ್ಚೆ ನಡೆಯುತ್ತಿದೆ. ರೈತರ ಬಗ್ಗೆ ಪ್ರಾಮಾಣಿಕವಾದ ಚರ್ಚೆ ಮಾಡಬೇಕಾದರೆ ಅರ್ಧಗಂಟೆ ಸಭೆಯನ್ನು ಮುಂದಕ್ಕೆ ಹಾಕಿದರೆ ಒಳ್ಳೆಯದು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ರೈತರ ಬಗ್ಗೆ ನಮ್ಮ ಸಹೋದ್ಯೋಗಿಗಳಿಗೆ ಇರತಕ್ಕಂಥ ಅನುಕಂಪ ಆಸಕ್ತಿ, ಅಭಿಮಾನ ಈ ಸರ್ಕಾರಕ್ಕೇನೂ ಕಡಿಮೆ ಇಲ್ಲ ಎನ್ನತಕ್ಕದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸನ್ಮಾನ್ಯ ಬೈರೇಗೌಡರು ಕೊಡತಕ್ಕಂಥ ಅಮೋಘವಾದ ಎಲ್ಲಾ ಸಲಹೆಗಳನ್ನು ನಾನು ನಮೂದಿಸಿ. ಮುಖ್ಯಮಂತ್ರಿಗಳಿಗೆ ತಲುಪಿಸುವಂಥಾದ್ದು ಅಥವಾ ನನ್ನ ಸಚಿವಸಂಪುಟದ ಸಹೋದ್ಯೋಗಿಗಳಿಗೆ ತಿಳಿಸತಕ್ಕದ್ದು ಮಾಡಿ, ಅವರಿಗೆ ಹೆಚ್ಚಿಗೆ ತೃಪ್ತಿಯಾಗುವಂಥ ಉತ್ತರ ಕೊಡಿಸುವ ಕೆಲಸವನ್ನು ನಾನು ನಿರ್ವಹಿಸುತ್ತೇನೆ. ಆದ್ದರಿಂದ ಸಭೆಯನ್ನು ಮುಂದೂಡುವ ಅಗತ್ಯ ಇಲ್ಲ.

ಉಪಾಧ್ಯಕ್ಷರು.—ಶ್ರೀ ಬೈರೇಗೌಡರೇ, ನೀವು ಭಾಷಣ ಪ್ರಾರಂಭ ಮಾಡಿ.

ಶ್ರೀ ವಾಟಾಳ್ ನಾಗರಾಜ್.—ಈಗ ಸಚೇತಕರು ಬಂದಿದ್ದಾರೆ, ಅವರನ್ನು ಕೇಳಿ.

ಉಪಾಧ್ಯಕ್ಷರು.—ನನಗೆ ಗೊತ್ತಿದೆ. ಮಾನ್ಯ ಸಚಿವರು ನೋಟ್‌ಡೌನ್ ಮಾಡಿಕೊಂಡು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸುತ್ತಾರೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಉಪಹಾರ ವೇಳೆಯನ್ನು ಮೊಟಕುಗೊಳಿಸಿ ಮೊದಲು ಹೇಗೆ ಇತ್ತೋ ಹಾಗೆ ಮಾಡಬೇಕು, ಇದಕ್ಕೆ ನನ್ನ ಸ್ನೇಹಿತರು ಕೂಡ ಒಪ್ಪುತ್ತಾರೆ ಎಂದು ನಾನು ತಿಳಿಯುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಾವು ಸಿದ್ಧ ಇದರಲ್ಲಿ ಅನುಮಾನ ಇಲ್ಲ.

ಒಬ್ಬರು ಮಾನ್ಯ ಸದಸ್ಯರು.—ಈಗಿರುವುದೇ ಸರಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ.—ಶ್ರೀ ಬೈರೇಗೌಡರು ಮಾತನಾಡಿದ ಮೇಲೆ ನಾನು ಮಾತನಾಡುವವರ ಪಟ್ಟಿಯಲ್ಲಿ ಇದ್ದೇನೆ ಎಂದು ಕಾಣುತ್ತದೆ.

ಉಪಾಧ್ಯಕ್ಷರು.—ಇಲ್ಲ. ತಾವು ಮಾತನಾಡುವುದಾದರೆ ನಾನು ಅವಕಾಶ ಕೊಡುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ನಾನು ಈಗಲೇ ಸ್ಪಷ್ಟಪಡಿಸುತ್ತೇನೆ. ಇದು ಬಹಳ ಗಂಭೀರವಾದ ವಿಚಾರ ಆಗಿರುವುದರಿಂದ ಮುಖ್ಯಮಂತ್ರಿಗಳು ಇಲ್ಲಿ ಇದ್ದರೆ ಮಾತ್ರ ನಾನು ಮಾತನಾಡುತ್ತೇನೆ, ಇಲ್ಲದಿದ್ದರೆ ಇಲ್ಲ. ಅವರು ಬರುವುದಿಲ್ಲವಾದರೆ ನಾನು ಈಗಲೇ ಸಭೆಯಿಂದ ಹೊರಗೆ ಹೋಗುತ್ತೇನೆ. ನಾವು ಶೋಕಿಗಾಗಿ ಶಾಸನಸಭೆಗೆ ಬಂದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ.—ಹಿರಿಯ ಶಾಸಕರು ಇಲ್ಲಿ ಮಾತನಾಡಬೇಕಾದರೆ, ಮುಖ್ಯಮಂತ್ರಿಗಳು ಇಲ್ಲಿ ಇಲ್ಲದೇ ಹೋದರೆ, ಅವರಿಗೆ ಜವಾಬ್ದಾರಿ ಇದೆಯೋ ಇಲ್ಲವೇ, ಹೇಳಿ ನೋಡೋಣ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ.—ಶ್ರೀ ನಂಜುಂಡಸ್ವಾಮಿಯವರು ಹೇಳಿದ್ದುದು ಸರಿ ಇದೆ. ಮುಖ್ಯಮಂತ್ರಿಗಳು ಬಾರದೇ ಇದ್ದರೆ ನಾವು ಹೊರಗೆ ಹೋಗುತ್ತೇವೆ. ಅವರು ಬರುತ್ತಾರೆ ಎಂದರೆ ಮಾತ್ರ ನಾವು ಮಾತನಾಡುತ್ತೇವೆ.

ಉಪಾಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈಗ ಮಾನ್ಯ ಲೋಕೋಪಯೋಗಿ ಸಚಿವರು ಇದ್ದಾರೆ. ಅವರು ಬಾಯಿಬಿಟ್ಟು ಹೇಳಿದ್ದಾರೆ ಎಲ್ಲಾ ನೋಟ್‌ಡೌನ್ ಮಾಡಿಕೊಳ್ಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಸವಿವರವಾಗಿ ಎಲ್ಲವನ್ನೂ ತಿಳಿಸುತ್ತೇನೆ ಎಂದು ಅವರು ಹೇಳಿದ್ದಾರೆ. ಈಗ ಶ್ರೀ ಬೈರೇಗೌಡರು ಅರ್ಧಕ್ಕೆ ನಿಲ್ಲಿಸಿದ್ದಾರೆ, ಅವರು ಮುಂದುವರೆಸಲಿ ಅಷ್ಟರಲ್ಲಿ ಮುಖ್ಯಮಂತ್ರಿಗಳು ಬರುತ್ತಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ.—ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ.—ಈ ಸಭೆಯಲ್ಲಿ ನಾವು ಮಾತನಾಡಬೇಕಾಗಿದ್ದರೆ ಯಾರು ಪ್ರಶ್ನೆ ಕೇಳುತ್ತಾರೆ ಅವರು ಇದ್ದರೆ ನಮಗೂ ಕೂಡ ಮಾತನಾಡಲಿಕ್ಕೆ ಉತ್ಸಾಹ ಇರುತ್ತದೆ. ನಮ್ಮ ತಲೆ ಸಹ ಅಷ್ಟೇ ಚುರುಕಾಗಿ ಕೆಲಸ ಮಾಡುತ್ತದೆ. ಇಲ್ಲಿ ಎಲ್ಲಾ ಖಾಲಿ ಖುರ್ಚಿಗಳೇ ಇವೆ; ಮಾತನಾಡಿ ಎಂದರೆ ನಮಗೆ ಹೇಗೆ ಸ್ಫೂರ್ತಿ ಬರುತ್ತದೆ?

ಉಪಾಧ್ಯಕ್ಷರು.—ನೀವು ದಯವಿಟ್ಟು ಮುಂದುವರೆಸಿ.

ನಿಯಮ ೬೯ರ ಮೇರೆಗೆ ಚರ್ಚೆ (ಮುಂದುವರೆದಿದೆ)

ಶ್ರೀ ಸಿ. ಬೈರೇಗೌಡ.—ಸನ್ಮಾನ್ಯ ಉಪಸಭಾಧ್ಯಕ್ಷಿಣಿಯವರೇ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಿದಾಗ ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ, ನಾನು ಈಗಾಗಲೇ ಹೇಳಿದ್ದೇನೆ. ನಾವು ಇಲ್ಲಿ ಕಾಲಹರಣ ಮಾಡುವುದಕ್ಕಾಗಲಿ, ಪತ್ರಿಕೆಗಳಲ್ಲಿ ಪ್ರಚಾರ ಪಡೆಯಬೇಕು ಎನ್ನುವ ದೃಷ್ಟಿಯಿಂದಾಗಲಿ ಬಂದಿಲ್ಲ.

ಈ ದೃಷ್ಟಿಯಿಂದ ಕೆಲಸ ಮಾಡುವುದಕ್ಕೆ ನಾವು ತಯಾರಿಲ್ಲ. ನಮಗೆ ಮತ ಕೊಟ್ಟಿರುವ ರಾಜ್ಯದಲ್ಲಿರತಕ್ಕ ಜನರ ಕಷ್ಟನಷ್ಟಗಳನ್ನು, ನೋವು ನಲಿವುಗಳನ್ನು ಪ್ರತಿಬಿಂಬಿಸತಕ್ಕಂಥ ಸಂಪೂರ್ಣವಾದ ಜವಾಬ್ದಾರಿಯನ್ನು ಹೊತ್ತು ಬಂದಿದ್ದೇವೆ ಇವತ್ತು ರೈತರ ಸಾಲ ಮನ್ನಾ ಮಾಡುವ ವಿಚಾರ, ಹೊಸದಾಗಿ ಏನೂ ಸದನದಲ್ಲಿ ಪ್ರಸ್ತಾಪವಾಗುತ್ತಿಲ್ಲ. ಸಮಯ ಸಿಕ್ಕಿದಾಗಲೆಲ್ಲ ಈ ವಿಷಯ ಇಲ್ಲಿ ಪ್ರಸ್ತಾಪವಾಗಿದೆ. ಆದರೆ ಸರ್ಕಾರ ಮಾತ್ರ ಇಲ್ಲಿಯವರೆಗೂ ಇದರ ಬಗ್ಗೆ ಸಹಾನುಭೂತಿಯ ನಿಲುವು ತಾಳುವುದಕ್ಕೆ ತಯಾರಿಲ್ಲ. ಒಂದು ಸಂತೋಷ ಏನೆಂದರೆ, ಹಿಂದೆ ಮುಖ್ಯ ಮಂತ್ರಿಗಳಲ್ಲಿ ಇದ್ದಂಥ ನಿಲುವು ಈಗ ಸ್ವಲ್ಪ ಬದಲಾವಣೆಯಾಗಿ ಹೇಳಿದ್ದನ್ನು ಕೇಳತಕ್ಕ ಉದಾರ ಮನಸ್ಸನ್ನು ತೋರಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ. ನಾನು ಈ ಹಿಂದೆ ಮಾತನಾಡುತ್ತಾ ಹೇಳಿದ್ದೇನೆ. ಗುಜರಾತ್ ರಾಜ್ಯದಲ್ಲಿ ಏನಾಗಿದೆ, ಕೇಂದ್ರಸರ್ಕಾರ ಯಾವರೀತಿ ಮಾಡುತ್ತಿದೆ ಎನ್ನುವುದಕ್ಕಿಂತ ಮುಂದಕ್ಕೆ ಹೋಗಿ ಎಂದು ನಾನು ಹೇಳುವುದಿಲ್ಲ. ಕಾರಣ, ಏನೆಂದರೆ, ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ನನಗೆ ಗೊತ್ತಿದೆ. ಹಿಂದೆ ಈ ಸದನದಲ್ಲಿ ಇದ್ದು ಕೆಲಸ ಮಾಡಿ, ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡಿರುವುದರಿಂದ, ಯಾವ ರೀತಿಯಲ್ಲಿ ನಮ್ಮ ಆರ್ಥಿಕ ಪರಿಸ್ಥಿತಿ ಇದೆ ಎಂಬುದು ನನಗೆ ಗೊತ್ತಿದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ರೈತ ಎಷ್ಟೇ ಕಷ್ಟದಲ್ಲಿದ್ದರೂ ಕೂಡ, ಅನಾನುಕೂಲತೆಗಳು ಇದ್ದರೂ ಕೂಡ, ಬೇರೆಯವರಿಗಿಂತ ಮುಂದಕ್ಕೆ ಹೋಗಿ ಎಂದು ನಾನು ಹೇಳುವುದಿಲ್ಲ, ಕೇಂದ್ರಸರ್ಕಾರ ಏನು ಮಾಡಿದೆ, ಅದಕ್ಕಿಂತ ಮುಂದಕ್ಕೆ ಹೋಗಿ ಎಂದು ನಾನು ಹೇಳುವುದಿಲ್ಲ, ಕೊನೆಯ ಪಕ್ಷ, ಕೇಂದ್ರ ಸರ್ಕಾರ ಒಟ್ಟು ೩೭೦ ಕೋಟಿಯಷ್ಟು ಸಾಲ ಇದೆಯೆಂದು ಹೇಳಿರುವಾಗ, ಅದರಲ್ಲಿ ರಾಜ್ಯ ಸರ್ಕಾರದ ಪಾಲು ಸುಮಾರು ೧೬೦-೧೭೦ ಕೋಟಿಯವರೆಗೆ ಆಗುತ್ತದೆ. ತಾವು ಇದನ್ನಾದರೂ ಭರಿಸತಕ್ಕ ಪ್ರಯತ್ನ ಮಾಡಿದ್ದರೆ ನಾವು ಸ್ವಾಗತ ಮಾಡುತ್ತಿದ್ದೆವು. ಕೇಂದ್ರ ಸರ್ಕಾರ ನಿರ್ದಿಷ್ಟವಾದ ಸಲಹೆಗಳನ್ನು ಸೂತ್ರಗಳನ್ನು ಇಟ್ಟಿದೆ. ಈ ಸೂತ್ರಗಳನ್ನು ಒಪ್ಪಿ, ನಮ್ಮ ಪಾಲನ್ನು ನಾವು ಕೊಡುತ್ತೇವೆ ಎನ್ನತಕ್ಕಂಥ ದೃಢ ನಿರ್ಧಾರ ಮಾಡತಕ್ಕ ಮನಸ್ಸು ಮಾಡಬೇಕೆಂದು ನಾನು ವಿನಂತಿಸುತ್ತೇನೆ. ಹಿಂದೆ ಇದ್ದಂಥ ಸರ್ಕಾರಗಳು ಬಡ್ಡಿ ರಿಯಾಯಿತಿಯನ್ನು ಈ ರಾಜ್ಯದ ರೈತರಿಗೆ ಕೊಟ್ಟಿದ್ದಾರೆ. ಈ ವಿಚಾರದಲ್ಲಿ ಒಂದೊಂದುಸಾರಿ ಒಂದೊಂದು ಚಿತ್ರವನ್ನು ಕೊಡುತ್ತಿದ್ದಾರೆ ಒಂದುಸಾರಿ ೧೫೦ ಕೋಟಿ ಆಯಿತು, ೫-೬ ವರ್ಷಗಳಿಂದ ೧೨೦ ಕೋಟಿ ಆಯಿತು ಎಂದು ಹೇಳುತ್ತಾರೆ ಇದು ಎಷ್ಟಾಯಿತೋ ಆ ಪ್ರಶ್ನೆ ಬೇರೆ. ಆ ಯೋಜನೆಯನ್ನು ಇವತ್ತಿನದಿವಸ ರಾಜ್ಯದಲ್ಲಿ ಪುನಃ ಜಾರಿಗೆ ತರಬೇಕು. ನಬಾರ್ಡ್‌ನಿಂದ ಶೇಕಡ ೪ ರಿಂದ ೬ರಷ್ಟು ಬಡ್ಡಿ ಇಲ್ಲಿ ಹಣಕಾಸಿನ ಸಮಸ್ಯೆಗಳು ಏನಿವೆ ಅವರಿಗೆ ಕೊಡುತ್ತಾ ಇದ್ದಾರೆ ಆ ಹಣ ರೈತರಿಗೆ ಮುಟ್ಟಬೇಕಾಗಿದ್ದರೆ ಶೇಕಡ ೧೨-೧೪ರಷ್ಟು ಬಡ್ಡಿಯಾಗುತ್ತದೆ. ಯಾವ ಪುರುಷಾರ್ಥಕ್ಕೆ ಒಂದಕ್ಕೆರಡರಷ್ಟು ಬಡ್ಡಿಯಾಗುತ್ತದೆ ಎಂಬುದೇ ಅರ್ಥವಾಗುತ್ತಿಲ್ಲ. ನಬಾರ್ಡ್ ನಿಂದ ಬಂದ ಹಣಕ್ಕೆ ಶೇಕಡ ೬ ರವರೆಗೂ ಬಡ್ಡಿ ಹಾಕುತ್ತಾರೆ, ಇದು ರೈತರಿಗೆ ಮುಟ್ಟಬೇಕಾದರೆ ಮಧ್ಯವರ್ತಿಗಳ ಪಾಲು ಶೇಕಡ ೫-೬ ರಷ್ಟು ಆಗುತ್ತದೆ. ಕೆಲವು ಸಂದರ್ಭದಲ್ಲಿ ಅದಕ್ಕಿಂತ ಹೆಚ್ಚು ಆಗುತ್ತದೆ ಇದು ಏಕೆ? ಈ ಮಧ್ಯವರ್ತಿಗಳಿಂದ ಬೇಕಾಗಿಲ್ಲ. ಇದನ್ನು ನಾವು ಕೇಳುತ್ತಾ ಇಲ್ಲ. ಇವತ್ತು ಅಪೆಕ್ಸ್ ಬ್ಯಾಂಕ್ ಇದೆ, ಅಗ್ರಿಕಲ್ಚರಲ್ ರೂರಲ್ ಡೆವಲಪ್‌ಮೆಂಟ್ ಬ್ಯಾಂಕ್ ಇದೆ, ತಾಲ್ಲೂಕು ಮಟ್ಟದ ಸಹಕಾರಿ ಸಂಸ್ಥೆಗಳಿವೆ, ಜಿಲ್ಲಾ ಮಟ್ಟದ ಸಹಕಾರಿ ಸಂಸ್ಥೆಗಳಿವೆ. ಇವೆಲ್ಲವೂ ಕಾರ್ಯ ನಿರ್ವಹಿಸಬೇಕಾದರೆ ಹಣ ಬೇಕಾಗುತ್ತದೆ. ಅದಕ್ಕೋಸ್ಕರ ಹಿಂದೆ ಇದ್ದ ಸರ್ಕಾರ, ರೈತರು ತಾವು ಮಾಡಿರತಕ್ಕ ಸಾಲವನ್ನು ನಿಗದಿತ ಕಾಲಾವಧಿಯಲ್ಲಿ ವಾಪಸ್ ಕೊಟ್ಟರೆ, ಬಡ್ಡಿ ರಿಯಾಯಿತಿ ಯೋಜನೆಯನ್ನು ಜಾರಿಗೆ ತಂದಿತ್ತು, ಅದನ್ನು ತೆಗೆದು ಹಾಕತಕ್ಕ ಪರಿಸ್ಥಿತಿ ಇದೆ, ಈ ಬಡ್ಡಿ ರಿಯಾಯಿತಿ ಸೌಲಭ್ಯವನ್ನು ತೆಗೆಯಬೇಡಿ, ಇದನ್ನು ಸಾರೋದ್ಧಾರವಾಗಿ ನಡೆಸಿಕೊಂಡು ಬರಬೇಕು. ಹಿಂದಿನ ಸರ್ಕಾರ ಬಡ್ಡಿ ರಿಯಾಯಿತಿಯನ್ನು ಕೊಟ್ಟಿತ್ತು ಅದನ್ನು ನಿಲ್ಲಿಸದೆ ಸಾರೋದ್ಧಾರವಾಗಿ ಮುಂದುವರಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಇನ್ನು ಯಾವ ಯಾವ ಬಾಬಿನಿಂದ ಹಣ ತರುವುದಕ್ಕೆ, ಹಣ ಶೇಖರಣೆ ಮಾಡುವುದಕ್ಕೆ ಸಾಧ್ಯವಿದೆ ಎನ್ನುವಂಥ ಸಲಹೆಗಳನ್ನು ಕೊಡಿ ಎಂದು ಸರ್ಕಾರದವರು ಕೇಳಿದ್ದಾರೆ. ಇದರ ಬಗ್ಗೆ ಹೇಳುತ್ತಾ ಹೋದರೆ, ಎಷ್ಟು ಗಂಟೆಯಾದರೂ ಎಷ್ಟು ದಿವಸ ಬೇಕಾದರೂ ಮಾತನಾಡಬಲ್ಲೆ. ಮುಖ್ಯವಾಗಿ ಸೋರಿಹೋಗತಕ್ಕಂಥ

ಹಣ ಎಷ್ಟಿದೆ, ಯಾವ ಯಾವ ಬಾಬಿನಲ್ಲಿ ಯಾವ ಯಾವ ಇಲಾಖೆಗಳಲ್ಲಿ ಯಾವ ರೀತಿ ಹಣ ಸೋರಿ ಹೋಗುತ್ತಿದೆ ಎಂಬುದನ್ನು ಹೇಳುತ್ತೇನೆ. ನಾವು ವರ್ಷದ ಪ್ರಾರಂಭದಲ್ಲಿದ್ದೇವೆ. ಈಗ ಇಲಾಖೆಗಳ ಬೇಡಿಕೆಗಳು ನಮ್ಮ ಮುಂದೆ ಬರುವುದು ಇದೆ. ಬಂದಾಗ ಪ್ರತಿಯೊಂದು ಇಲಾಖೆಯಲ್ಲಿ, ಅದರಲ್ಲೂ ಪ್ರಮುಖವಾಗಿ ಅಬಕಾರಿ ಇಲಾಖೆಯಲ್ಲಿ ಯಾವರೀತಿ ಸೋರಿ ಹೋಗುತ್ತಿದೆ ಎಂಬುದನ್ನು ಹೇಳುತ್ತೇನೆ, ಈಗ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಬೇಡಿಕೆಗಳು ಸದನದ ಮುಂದೆ ಚರ್ಚೆ ಆಗುವಾಗ ಹಿಂದೆ ಯಾವರೀತಿ ಆಗುತ್ತಿತ್ತು, ಏನು ಆಗುತ್ತಿತ್ತು, ಎಂಬುದನ್ನು ಅಂಕಿಅಂಶಗಳ ಮೂಲಕ ನಾನು ಹೇಳುವವನಿದ್ದೇನೆ ಈಗ ಹೇಳುವುದಿಲ್ಲ. ಸರಕಾರದ ಬೇರೆ ಬೇರೆ ಬಾಬುಗಳಲ್ಲಿ ಹಣ ಸೋರಿ ಹೋಗುತ್ತಿದೆ, ಸೋರಿ ಹೋಗತಕ್ಕಂಥಾದ್ದನ್ನು ನಾನು ಈಗಾಗಲೇ ಹೇಳಿದ್ದೇನೆ. ಈ ಬಗ್ಗೆ ಅನೇಕ ಉದಾಹರಣೆಗಳನ್ನು ಕೊಡಬಲ್ಲೆ. ಸೋರಿ ಹೋಗತಕ್ಕಂಥಾದ್ದನ್ನು ನಿಲ್ಲಿಸಿದರೆ ಒಂದು ಚುಟಕದಲ್ಲಿ ರೈತರ ಸಾಲ ೩೬೦೦ ಕೋಟಿ ರೂಪಾಯಿಗಳ ಹಣ ಭರಿಸಬಹುದು. ಈ ಹಣ ಭರಿಸುವುದಕ್ಕೆ ಕೇಂದ್ರ ಸರಕಾರವೂ ಬೇಡ, ಯಾವ ಸರಕಾರವೂ ಬೇಡ ಕರ್ನಾಟಕ ರಾಜ್ಯ ಸರಕಾರ ಇದನ್ನು ಭರಿಸುವುದಕ್ಕೆ ಸಾಧ್ಯ ಇದೆ. ಅದನ್ನು ಇವರು ಮಾಡಿ ತೋರಿಸಬಹುದು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತಿನ ದಿವಸ ರೈತರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಹೇಳಬೇಕಾದುದು ನನ್ನ ಕರ್ತವ್ಯ. ಈಗ ವಸೂಲಾತಿ ಏನಾಗಿದೆ ಎಂದರೆ, ಕೆಲವು ಜಿಲ್ಲೆಗಳ ಸಹಕಾರ ಸಂಘಗಳಲ್ಲಿ ಬರಬೇಕಾಗಿರತಕ್ಕಂಥ ವಸೂಲಾತಿ ಶೇಕಡ ೪ ರಷ್ಟು, ಶೇಕಡ ೫ ರಷ್ಟು ಆಗಿವೆ, ಬಹುಶಃ ಕೊಡಗು ಜಿಲ್ಲೆಯೊಂದನ್ನು ಬಿಟ್ಟರೆ ಇನ್ನು ಯಾವ ಜಿಲ್ಲೆಯಲ್ಲೂ ಕೂಡಾ ಶೇಕಡ ೧೦–೧೫ ಕ್ಕಿಂತ ಮುಂದೆ ಹೋಗಿಲ್ಲ. ಇದು ಹೋಗದಿದ್ದರೆ ಮುಂದೆ ಕಷ್ಟವಾಗುತ್ತದೆ. ಈಗೇನೋ ನಬಾರ್ಡ್‌ನವರು ಹಣ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಶಾಶ್ವತವಾಗಿ ರೈತರಿಗೆ ಈ ಹಣದ ಅಥವಾ ಸಾಲದ ಸವಲತ್ತು ಇಲ್ಲದಂತಾಗುತ್ತದೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಇವತ್ತು ಕೇಂದ್ರ ಸರಕಾರ ಏನು ಒಪ್ಪಿದೆ ಅದನ್ನಾದರೂ ಜಾರಿಗೆ ತರಬೇಕೆಂದು ಒತ್ತಿ ಹೇಳುತ್ತೇನೆ. ಇಲ್ಲದಿದ್ದರೆ, ರೈತರಿಗೆ ಹಣ ಒದಗಿಸತಕ್ಕಂಥ ವ್ಯವಸ್ಥೆ ಏನಿದೆ ಈ ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದು ಹೋಗುತ್ತದೆ. ನೀವು ಏನು ಮಾಡಿದರೂ, ಪೋಲೀಸರನ್ನು ರೈತರ ಮುಂದೆ ನಿಲ್ಲಿಸಿದರೂ, ಅವರ ಮನೆಗೆ ನುಗ್ಗಿಸಿದರೂ, ವಸೂಲು ಮಾಡುವುದಕ್ಕೆ ಸಾಧ್ಯ ಇಲ್ಲ ರೈತರೂ ಕೂಡಾ ಒಂದು ದೃಢನಿರ್ಧಾರ ಮಾಡಿದ್ದಾರೆ. ರೈತರ ದೃಢನಿರ್ಧಾರವನ್ನು ಬದಲಿಸುವುದಕ್ಕೆ ಖಂಡಿತಾ ಈ ಸರಕಾರಕ್ಕೆ ಸಾಧ್ಯ ಇಲ್ಲ. ಯಾರಾದರೂ, ಯಾವುದೇ ಸರಕಾರ ಬಂದರೂ ಕೂಡಾ ಅದನ್ನು ಮಾಡುವುದಕ್ಕೆ ಸಾಧ್ಯ ಇಲ್ಲ. ಈ ಒಂದು ಪರಿಸ್ಥಿತಿಗೆ ಇವತ್ತಿನ ದಿವಸ ರೈತರು ಬಂದಿರುವ ಕಾರಣದಿಂದ ಏನಾದರೂ ಮಾಡಿ, ಆಗಿದ್ದು ಆಗಲಿ, ನಮ್ಮಲ್ಲಿ ಬಲ ಇದೆ, ನಮ್ಮಲ್ಲಿ ಸಂಖ್ಯಾ ಬಲ ಇದೆ, ಪೋಲೀಸ್ ಬಲ ಇದೆ ಎಂದು ಏನಾದರೂ ಕೂಡಾ ನಾವು ವಸೂಲು ಮಾಡೇ ಮಾಡುತ್ತೇವೆ ಎಂಬ ಮಾತನ್ನು ಹೇಳಿದರೆ ಅನಾಹುತ ಕಾದಿದೆ ; ಸರಕಾರಕ್ಕೂ ಮತ್ತು ರಾಜ್ಯಕ್ಕೂ ಕೂಡಾ ಅನಾಹುತ ಕಾದಿದೆ ಇದೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಇವತ್ತು ಏನು ಕೇಂದ್ರ ಸರಕಾರ ಯೋಜನೆ ಮಾಡಿದೆ, ಆ ಯೋಜನೆ ಪ್ರಕಾರ ಕನಿಷ್ಠ ಅಷ್ಟನ್ನಾದರೂ ಮಾಡಿ. ಅದಕ್ಕಿಂತ ಮುಂದೆ [illegible] ಸಂಪೂರ್ಣವಾಗಿ ಒಪ್ಪಿಗೆಯಾಗಿದೆ ಎಂದು ನಾನು ಹೇಳುವುದಿಲ್ಲ. ಈಗಾಗಲೇ ಹೇಳಿದ್ದೇನೆ. ಅಷ್ಟನ್ನಾದರೂ ಕೂಡಾ ಮಾಡತಕ್ಕ ಮನಸ್ಸನ್ನು ಸರಕಾರ ಮಾಡಬೇಕು. ಮತ್ತು ಬಡ್ಡಿಯ ಬಗ್ಗೆ ಕೂಡಾ ನಾನು ಏನು ಹೇಳಿದ್ದೇನೆ, ಅದಕ್ಕೆ ಹಿಂದೆ ಏನು ರಿಯಾಯಿತಿ ಇತ್ತು, ಅದನ್ನು ಮುಂದುವರಿಸಬೇಕೆಂಬ ಮಾತನ್ನು ಹೇಳಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಮಾನ್ಯ ಉಪಾಧ್ಯಕ್ಷರೆ, ಬಹಳ ಪ್ರಾಮುಖ್ಯವಾದ ವಿಚಾರವನ್ನು ಕಳೆದ ಎರಡು ದಿವಸಗಳಿಂದ ನಾವು ಚರ್ಚೆ ಮಾಡುತ್ತಿದ್ದೇವೆ. ರೈತರ ಸಾಲ ಮನ್ನಾ ಮಾಡುವ ಅಗತ್ಯದ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಕಾರಣ ಏನೆಂದರೆ, ರಾಜ್ಯದ ಮುಖ್ಯಮಂತ್ರಿಗಳೂ ಇದನ್ನು ಒಪ್ಪುತ್ತಾರೆ, ವಿರೋಧ ಪಕ್ಷದಲ್ಲಿ ಕುಳಿತಿರುವವರ ನಮ್ಮ ಬೇಡಿಕೆ ಕೂಡಾ ಅದೇ ಇದೆ. ಅದರ ಜೊತೆಗೆ ಈ ಸದನದ ಹೊರಗೆ ಸಹಸ್ರಾರು ಜನ ರೈತರು ಕಳೆದ ತಿಂಗಳು ೨೪ನೇ ತಾರೀಖು ಈ ತಿಂಗಳ ೪ನೇ ತಾರೀಖು ಒಟ್ಟಾರೆ ರಾಜ್ಯದ ಉದ್ದಗಲಕ್ಕೂ ತಮ್ಮ ಬೇಡಿಕೆಯನ್ನು ಮುಂದಿಟ್ಟು ಜೈಲಿಗೆ ಹೋಗುವವರೆಗೂ ಸಿದ್ಧತೆಯನ್ನು ಮಾಡಿಕೊಂಡಿದ್ದುದು ನಮಗೆಲ್ಲಾ ತಿಳಿದಿರತಕ್ಕಂಥ ವಿಚಾರ. ಒಂದು ವ್ಯತ್ಯಾಸ ಏನು ! ಸಾಲ ಮನ್ನಾ ಮಾಡಬೇಕೆನ್ನುವುದು ವಾದದ ವಸ್ತು ಅಲ್ಲ ಅಂದಾಗ ತೊಂದರೆ ಏನು ಇದೆ ? ಸರ್ಕಾರಕ್ಕೂ ನಮಗೂ ಇರತಕ್ಕಂಥ ವ್ಯತ್ಯಾಸ ಇಷ್ಟೆ. ಮಾನ್ಯ ಮುಖ್ಯಮಂತ್ರಿಗಳು [illegible] ಇಟ್ಟಿದ್ದಾರೆ. [illegible] ಪ್ರಣಾಳಿಕೆಯಲ್ಲಿ ನಾವು ಆ ಬಗ್ಗೆ ಹೇಳಿಲ್ಲ. ನಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೆ [illegible],

ಸರ್ಕಾರಕ್ಕೆ ಈ ಸಾಲ ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇವೆಂದು ನಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ ಎನ್ನುವ ಮಾತನ್ನು ಅವರು ಹೇಳುತ್ತಾರೆ. ಇದರ ಅರ್ಥ ಏನೆಂದರೆ, ಈ ಸಾಲ ಮನ್ನಾ ಮಾಡುವುದನ್ನು ಅವರು ಸಹ ತತ್ವಶ: ಒಪ್ಪಿಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಈ ಹಿಂದೆ ಒಂದು ಮಾತು ಹೇಳಿದ್ದಾರೆ. ಈ ಚುನಾವಣೆ ಪ್ರಣಾಳಿಕೆ ನಮಗೆ ಬೈಬಲ್, ಖುರಾನ್ ಮತ್ತು ಗೀತಾ ಎಂದು ಹೇಳಿದಿರಲ್ಲ ಅದರಲ್ಲಿ ಬರೆದುಕೊಂಡಿದ್ದೇವೆ, ನಾವು ಸಾಲ ಮನ್ನಾ ಮಾಡುತ್ತೇವೆಂದು ಹೇಳಿಲ್ಲ, ನಾವು ಅಧಿಕಾರಕ್ಕೆ ಬಂದರೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ ಎಂದು ಹೇಳಿದ್ದೇವೆ ಎಂದು ಹೇಳಿದ್ದಾರೆ. ಇದೇ ವ್ಯತ್ಯಾಸ ಅವರಿಗೂ ನಮಗೂ ಇರುವಂಥಾದ್ದು. ಪ್ರಿನ್ಸಿಪಲ್ ಕೊಡುತ್ತೇವೆಂದು ಅವರು ಹೇಳಿಲ್ಲ, ಅದು ಬೇರೆ ವಿಚಾರವಾಗುತ್ತದೆ. ಇಷ್ಟೇ ಹೊರತು ಬೇರೇನೂ ಇಲ್ಲ. ಇದರ ಅರ್ಥ ಒಂದೇ...

ಶ್ರೀ ಕೆ. ಹೆಚ್. ರಂಗನಾಥ್.—ಅಷ್ಟು ಭಾರ ಹೊರುವುದಕ್ಕೆ ಕರ್ನಾಟಕ ರಾಜ್ಯಕ್ಕೆ ಶಕ್ತಿ ಇಲ್ಲ ಈಗಾಗಲೇ ಕರ್ನಾಟಕ ರಾಜ್ಯದ ಹಣಕಾಸಿನ ಪರಿಸ್ಥಿತಿ ಪರಿಚಯ ಆಗಿದೆ, ಅದಕ್ಕೆ ಅವರು ಆರೀತಿ ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ.—ನಾನು ಇನ್ನೂ ಭಾಷಣ ಪ್ರಾರಂಭ ಮಾಡಲೇ ಇಲ್ಲ. ತಾವು ಹಳೆಯ ಸಹಕಾರ ಮಂತ್ರಿಗಳು.

ಶ್ರೀ ಕೆ.ಹೆಚ್. ರಂಗನಾಥ್.—ಇದು ರೂಪಾಯಿ, ಪೈಸೆ ಲೆಕ್ಕಾಚಾರ.

ಶ್ರೀ ಡಿ.ಬಿ. ಚಂದ್ರೇಗೌಡ.—ಆದ್ದರಿಂದ ಮೂಲತ: ಸಾಲ ಮನ್ನಾ ಮಾಡುವ ವಿಚಾರದಲ್ಲಿ ಒಟ್ಟಾರೆ ಸದನದ ಏಕಾಭಿಪ್ರಾಯ ಇದೆ. ಈ ವಿಚಾರವನ್ನು ಎಲ್ಲರೂ ಮಾತನಾಡಿರತಕ್ಕಂಥಾದ್ದನ್ನು ನೋಡಿದರೆ ಇದೊಂದು ಏಕಾಭಿಪ್ರಾಯ. ಇದು ಈ ಕಾಲದ ಸಕಾಲಿಕ ಸತ್ಯ ಕೂಡ ಹೌದು. ಇವತ್ತು ರೈತ ಸಾಲ ವಾಪಸ್ಸು ಏತಕ್ಕೆ ಕೊಟ್ಟಿಲ್ಲ, ಎಷ್ಟು ಕೊಟ್ಟಿಲ್ಲ, ಏತಕ್ಕೆ ಕೊಡಲಿಲ್ಲ ಎನ್ನುವ ಪ್ರಶ್ನೆ ಇದೆ. ಮರುಪಾವತಿ ಮಾಡದಿದ್ದರೆ ಮತ್ತೆ ನಮ್ಮ ಮೂಲ ನೀತಿ ಏನು ? ನಾವು ಏನು ಒಪ್ಪಿಕೊಂಡಿದ್ದೇವೆ ? ಇದಕ್ಕೆ ಕಾರಣವೇನು ? ಹೊರಗಡೆ ಇರತಕ್ಕಂಥ ಜನರ ಆಸೆ ಏನು ಇದೆ ಎಂದರೆ, ಹೇಗಾದರೂ ಸಾಲ ಮನ್ನಾ ಆಗುತ್ತದೆ. ಆದ್ದರಿಂದ ನಾವು ಸಾಲ ಕಟ್ಟತಕ್ಕಂಥ ಅವಶ್ಯಕತೆ ಇಲ್ಲ ಎನ್ನುವಂತಹ ನಿರ್ಣಯಕ್ಕೆ ಅವರು ಬಂದಿದ್ದಾರೆ. ಇದು ನನ್ನ ತಪ್ಪಿನಿಂದ ಆಗಿದೆ. ಈ ಹೊರೆಯನ್ನು, ಈ ಜವಾಬ್ದಾರಿಯನ್ನು ರೈತರ ತಲೆ ಮೇಲೆಹಾಕಿ ನಾವು ರಾಜಕಾರಣ ಮಾಡುತ್ತಿದ್ದೇವೆ. ಇದು ಎಲ್ಲಾದರೂ ಒಂದು ಕಡೆ ನಿಲ್ಲಬೇಕು. ಹೇಗೆ ನಿಲ್ಲಬೇಕು ಎನ್ನುವುದನ್ನು ಆಲೋಚನೆ ಮಾಡೋಣ. ಮತ್ತೆ ಸಾಲ ವಸೂಲಾತಿ ಆಗದೇ ಇದ್ದರೆ ಆಗತಕ್ಕಂಥ ಪರಿಣಾಮಗಳು ಏನು ? ಮಾನ್ಯ ರಾಜುರವರನ್ನು ಸಹಕಾರ ಮಂತ್ರಿಗಳನ್ನಾಗಿ ಮಾಡಿದ್ದಾರೆ. ನಾನು ಇದೊಂದು ಗೌರವದ ಹುದ್ದೆ ಎಂದು ಭಾವಿಸಿಲ್ಲ. ಅವರ ಅನೇಕ ವರ್ಷಗಳ ರಾಜಕೀಯ ಅನುಭವಕ್ಕೆ ಯಾರಿಗಾದರೂ ಶಿಕ್ಷೆ ವಿಧಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಆಸೆ ಇದ್ದರೆ ಆ ಫಾಸಿಗೆ ಹಾಕುವ ಶಿಕ್ಷೆಗಿಂತಲೂ ಅತ್ಯಂತ ದುರ್ಬರವಾದ ಶಿಕ್ಷೆಯನ್ನು ಶ್ರೀನಿವಾಸ್ ರಾಜುರವರಿಗೆ ಈ ಖಾತೆಯನ್ನು ಕೊಟ್ಟು ಮಾಡಿದ್ದಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ...

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸ್ವಾಮಿ, ಇದು ಸಂಪೂರ್ಣವಾಗಿ ಜಿಲ್ಲಾ ರಾಜಕೀಯ.

ಶ್ರೀ ಡಿ.ಬಿ. ಚಂದ್ರೇಗೌಡ.—ನನ್ನ ಮಾತಿನ ವ್ಯಾಖ್ಯಾನವನ್ನು ನಾನು ಮುಂದೆ ಹೇಳುತ್ತೇನೆ, ಏತಕ್ಕೆ ಹಾಗೆ ಆಗಿದೆ ಎಂದು ಹೇಳುತ್ತೇನೆ. ಈಗ ರೈತರಿಗೆ ಸಾಲ ಕೊಡತಕ್ಕಂಥ ವ್ಯವಸ್ಥೆ ಏನು ಇದೆ ಅಂದರೆ, ಒಂದು ರಾಷ್ಟ್ರೀಕೃತ ಬ್ಯಾಂಕ್ ಮತ್ತು ಎರಡನೆಯದು ಗ್ರಾಮೀಣ ಬ್ಯಾಂಕ್‌ಗಳಿಂದ ಕೊಡುತ್ತಾರೆ ಈ ಎರಡೂ ಬ್ಯಾಂಕ್‌ಗಳು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರತಕ್ಕಂಥ ಬ್ಯಾಂಕ್‌ಗಳು. ಮತ್ತೊಂದು ಸಹಕಾರ ಬ್ಯಾಂಕ್‌ಗಳು ಈ ಸಹಕಾರ ಬ್ಯಾಂಕ್‌ಗಳಲ್ಲಿ ಎರಡು ಭಾಗ ಇದೆ. ಒಂದು ದೀರ್ಘಾವಧಿ ಸಾಲ ಕೊಡತಕ್ಕಂಥಾದ್ದು ಭೂ ಅಭಿವೃದ್ಧಿ ಬ್ಯಾಂಕ್‌ಗಳಿಂದ. ಮಧ್ಯಮಾವಧಿ ಸಾಲ ಮತ್ತು ಅಲ್ಪಾವಧಿ ಸಾಲ ಕೊಡತಕ್ಕಂಥಾದ್ದು ಅಪೆಕ್ಸ್ ಬ್ಯಾಂಕ್‌ಗಳು ಈ ವ್ಯವಸ್ಥೆಯಿಂದ ಇವತ್ತು ಏನಾಗಿದೆ ಎಂದು ಈಗಿರತಕ್ಕಂಥ ಲೆಕ್ಕವನ್ನು ಸ್ವಲ್ಪ ತೆಗೆದು ನೋಡಿದರೆ ಗೊತ್ತಾಗುತ್ತದೆ.

೨-೫೫ ಪಿ.ಎಂ.

ಅಪೆಕ್ಸ್ ಬ್ಯಾಂಕ್ ವ್ಯಾಪ್ತಿಯಲ್ಲಿ ೩೩ ಸಾವಿರ ಪ್ರೈಮರಿ ಸೊಸೈಟಿಗಳು ಬರುತ್ತವೆ. ಅದಾದ ಮೇಲೆ ಡಿಸ್ಟ್ರಿಕ್ಟ್ ಸಂಸ್ಥೆಗಳು, ಜಿಲ್ಲಾ ಸಂಸ್ಥೆಗಳು ಇವೆ. ಇನ್ನು ಭೂ ಅಭಿವೃದ್ಧಿ ಬ್ಯಾಂಕ್ ವ್ಯಾಪ್ತಿಯಲ್ಲಿ ೧೩೭ ತಾಲ್ಲೂಕು ಅಭಿವೃದ್ಧಿ ಬ್ಯಾಂಕುಗಳು ಇವೆ. ೧೭೫ ತಾಲ್ಲೂಕುಗಳಲ್ಲಿ ೧೭೫ ಭೂ ಅಭಿವೃದ್ಧಿ

ಬ್ಯಾಂಕ್‌ಗಳು ಹಾಗೂ ೨ ಎಕ್ಸ್‌ಟ್ರಾ ಬ್ಯಾಂಕ್‌ಗಳು ಇವೆ. ಒಟ್ಟು ೧೭೭ ಇವೆ. ನಾನು ಇತ್ತೀಚಿನ ವಿವರ ತರಿಸಿ ನೋಡಿದೆ. ಎಲ್ಲಿಗೆ ಬಂದಿದೆ ವಸೂಲಾತಿ ಎಂದು ನೋಡಿದೆ. ದೀರ್ಘಾವಧಿ ಸಾಲಕ್ಕೆ ಸಂಬಂಧಪಟ್ಟ ಹಾಗೆ ಈ ಸಾರಿ ಸುಸ್ತಿ ೪೩.೨೯ ಕೋಟಿ ರೂಪಾಯಿ ತಗಾದೆ ಇದ್ದರೆ, ವಸೂಲಾತಿ ಎಷ್ಟಾಗಿದೆಯೆಂದರೆ, ೨.೯೩ ಕೋಟಿ ರೂಪಾಯಿಗಳು. ಕಳೆದ ಸಾರಿ ಇದೇ ಸಾಲಿಗೆ ಎಷ್ಟಾಗಿತ್ತು ಅಂದರೆ ಅಥವಾ ಈಗಿರತಕ್ಕ ಬಾಕಿ ೪೬.೩೩ ಲಕ್ಷ as on to-day. ಹತ್ತಿರ ಹತ್ತಿರ ೩ ಕೋಟಿ ರೂಪಾಯಿ ವಸೂಲಾತಿ ಆಗಿರುವುದನ್ನು ಬಿಟ್ಟರೆ ಉಳಿದಿದ್ದೆಲ್ಲ ಬಾಕಿ, ೩೦-೪-೮೯ರ ಕೊನೆಗೆ ೯೧.೧೮ ಕೋಟಿ ಯಷ್ಟು ವಸೂಲಾಗಿದೆ. ಅಂದರೆ, ಈ ಸಾರಿ ಶೇಕಡಾವಾರು ೧೮ ಪರ್‌ಸೆಂಟ್ ಹಿಂದಿನ ಸಾರಿ ಅದು ೪೧.೧೭ ಪರ್ಸೆಂಟ್ ೧-೭-೮೯ ರಿಂದ ೩೦-೪-೯೦ರ ಅವಧಿಯಲ್ಲಿ ಒಟ್ಟು ವಸೂಲಿ ೨೦.೧೭ ಕೋಟಿ ಕಳೆದ ವರ್ಷ ಇದೇ ಅವಧಿಗೆ ೩೨.೨೬ ಕೋಟಿ ರೂಪಾಯಿ ವಸೂಲಾಗಿದೆ. ಈ ವರ್ಷ ಅಂದರೆ ೩೦-೬-೧೯೯೦ಕ್ಕೆ ಈ ತಿಂಗಳ ಕೊನೆಗೆ ಈ ವರ್ಷ ವಸೂಲಾತಿ ದೃಷ್ಟಿಯಿಂದ ಕೊನೆಗೊಳ್ಳುತ್ತದೆ. ಈ ವರ್ಷದ ಅಖೈರಿಗೆ ಶೇಕಡಾ ೭೫ರಷ್ಟು ವಸೂಲಾಗದಿದ್ದರೆ ನಮ್ಮ ಭೂ ಅಭಿವೃದ್ಧಿ ಬ್ಯಾಂಕ್‌ಗಳು ನಬಾರ್ಡ್ ಸಂಸ್ಥೆಯ ಸಾಲದ ವ್ಯಾಪ್ತಿಯಿಂದ ಹೊರಗುಳಿಯುತ್ತವೆ. ಪೂರ್ಣ ಪ್ರಮಾಣದ ಲಾಭ ಪಡೆಯುವುದಕ್ಕಾಗುವುದಿಲ್ಲ. ಶೇಕಡಾ ೪೦ಕ್ಕಿಂತ ಕಡಿಮೆ ವಸೂಲಾದರೆ ಅಂತಹ ಕೇಂದ್ರದ ಅಭಿವೃದ್ಧಿ ಬ್ಯಾಂಕ್‌ನ್ನು ನಮ್ಮ ಸಹಕಾರಿ ಭಾಷೆಯಲ್ಲಿ ಡೆಡ್ ಬ್ಯಾಂಕ್ ಎಂದು ಕರೆಯುತ್ತಾರೆ. ಅರ್ಥಾತ್, ಯಾವ ಹಣವನ್ನೂ ನಬಾರ್ಡ್ ಸಂಸ್ಥೆಯಿಂದ ಪಡೆಯುವುದಕ್ಕೂ ಭೂ ಅಭಿವೃದ್ಧಿ ಬ್ಯಾಂಕ್ ಅನರ್ಹವಾಗುತ್ತದೆ ಅರ್ಥಾತ್ ನಮ್ಮ ೧೭೭ ತಾಲ್ಲೂಕುಗಳಲ್ಲಿ ಭೂ ಅಭಿವೃದ್ಧಿ ಬ್ಯಾಂಕ್ ಸಂಸ್ಥೆಗಳು ಕೆಲಸ ಮಾಡುತ್ತಿವೆಯೋ ಅವುಗಳೆಲ್ಲಾ ಒಟ್ಟಾರೆ ಸ್ಥಗಿತಗೊಳ್ಳುತ್ತವೆ, ಇದು ದೀರ್ಘಾವಧಿ ಸಾಲದಲ್ಲಿ ಇನ್ನು ಅಲ್ಪಾವಧಿ ಸಾಲ ಮತ್ತು ಮಧ್ಯಮಾವಧಿ ಸಾಲದ ಸ್ಥಿತಿ ಏನು ? ಹಿಂದಿನ ಚುನಾವಣೆ ಒಳಗೆ ಜನ ನಮ್ಮನ್ನು ನಂಬಲಿಲ್ಲ, ಮಾನ್ಯ ವೀರೇಂದ್ರ ಪಾಟೀಲರನ್ನು ನಂಬಿದರು. ಕಾಂಗ್ರೆಸ್ ಪಕ್ಷವನ್ನು ಎಷ್ಟು ಮಟ್ಟಿಗೆ ಜನ ನಂಬಿದ್ದಾರೆಂದರೆ, ಇದು ಈ ವಸೂಲಾತಿಯನ್ನು ನೋಡಿದರೆ ಗೊತ್ತಾಗುತ್ತದೆ. ರಾಜ್ಯದ ಯಾವ ಭಾಗದಲ್ಲಿ ಅತ್ಯಂತ ಕಡಿಮೆ ವಸೂಲಾತಿ ಆಗಿರುವುದೆಂದರೆ, ಶೇಕಡಾ ೧.೦೩ ಗುಲ್ಬರ್ಗಾ ಜಿಲ್ಲೆಯಲ್ಲಿ ಆಗಿದೆ. ಇಷ್ಟು ದೂರಕ್ಕೆ ಮುಖ್ಯ ಮಂತ್ರಿಗಳನ್ನು ಜನ ನಂಬಿದ್ದಾರೆ. ಅತ್ಯಂತ ಹೆಚ್ಚು ವಸೂಲಾತಿ ಆಗಿರತಕ್ಕಂಥ ಜಿಲ್ಲೆ ಎಂದರೆ ಶೇಕಡಾ ೭೭ರಷ್ಟು ಕೊಡಗು ಜಿಲ್ಲೆಯಲ್ಲಿ ಆಗಿದೆ. ಕನಿಷ್ಟ ವಸೂಲಾತಿ ಎಂದರೆ ಮಾನ್ಯ ಮುಖ್ಯ ಮಂತ್ರಿಗಳ ಜಿಲ್ಲೆಯಾದಂಥ ಗುಲ್ಬರ್ಗಾ ಜಿಲ್ಲೆಯಾಗಿದೆ. ಕಾರಣ, ಅಲ್ಲಿನ ರೈತರುಗಳಿಗೆ ಮುಖ್ಯ ಮಂತ್ರಿಗಳ ಮೇಲೆ ಅಷ್ಟು ವಿಶ್ವಾಸ ಇದೆ. ಅದನ್ನು ಪ್ರತಿಧ್ವನಿ ಮಾಡಿದ್ದಾರೆ ಗುಲ್ಬರ್ಗಾ ಜಿಲ್ಲೆಯಲ್ಲಿ. ಅದಕ್ಕೆ ಇವರು ಸ್ಪಂದಿಸಬೇಕೋ ಬೇಡವೋ ? ಇದು ನನ್ನ ಮೂಲಭೂತ ಪ್ರಶ್ನೆ. ವಸೂಲಾತಿ ಬಹಳ ಇಂಟರೆಸ್ಟಿಂಗ್ ಆಗಿದೆ. ಶೇಕಡಾ ೫ ರಿಂದ ೧೦ ರಷ್ಟು ವಸೂಲಾತಿ ಆಗಿರತಕ್ಕಂಥಾದ್ದು ಎಷ್ಟು ಇದೆ ಎಂದು ವಿವರ ನೋಡಿದರೆ, ಶೇಕಡಾವಾರು ಒಟ್ಟಾರೆ ವಸೂಲಾತಿ ಆಗಿರುವುದು ೧೨ ಪರ್‌ಸೆಂಟ್ ಅಪೆಕ್ಸ್ ಬ್ಯಾಂಕಿನದು. ಅದರಲ್ಲಿ ಬಹುತೇಕ ವಸೂಲಾತಿ ಬಂದಿರತಕ್ಕದ್ದು ಹಾಗೂ ಎಲ್ಲೆಲ್ಲಿ ಎಷ್ಟು ಬಂದಿದೆ ಎಂದರೆ, ಶೇಕಡಾ ೫ ರಿಂದ ೧೦ ರವರೆಗೆ ಬಂದಿರತಕ್ಕ ಜಿಲ್ಲೆಗಳು ಯಾವುವೆಂದರೆ,

ಮಂಡ್ಯ ಕೊಡಗು, ಬೆಳಗಾಂ, ಬೀದರ್, ಚಿಕ್ಕಮಂಗಳೂರು ಮತ್ತು ಸೌತ್‌ಕೆನರಾ ಇವು ಶೇಕಡ ಐದರ ಒಳಗಡೆ ಇರತಕ್ಕಂಥ ಜಿಲ್ಲೆಗಳು. ಇದರಲ್ಲಿ ಮೊದಲನೆಯ ಸ್ಥಾನ ಗುಲ್ಬರ್ಗ ಇದೆ, ಶೇಕಡಾವಾರು ೧.೦೩ ಧಾರವಾಡ ೨ನೇ ಸ್ಥಾನ ೧.೦೫, ರಾಯಚೂರು ೨.೧೬, ಶಿವಮೊಗ್ಗ ೩.೩೧, ಬೆಂಗಳೂರು ಜಿಲ್ಲೆ ೩.೫೫, ಮೈಸೂರು ಜಿಲ್ಲೆ ೩.೦೭ ಹೀಗೆ ಒಟ್ಟಾರೆ ಶೇಕಡ ೫ಕ್ಕಿಂತ ಕಡಿಮೆ ಈ ಜಿಲ್ಲೆಗಳಲ್ಲಿದೆ. ಒಟ್ಟಾರೆ less than 5% 8 ಜಿಲ್ಲೆಗಳಿವೆ less than 10% 5 ಜಿಲ್ಲೆಗಳಲ್ಲಿವೆ. ಇದರ ಒಟ್ಟು ಸಾರಾಂಶ ಏನು ಎಂದರೆ ಶೇಕಡ ೧೨ರಷ್ಟು ವಸೂಲಾತಿಯಾಗಿದೆಯೆಂದು ನೀವು ಸಾರ್ವತ್ರಿಕವಾಗಿ ಸದನದಲ್ಲಿ ಹೇಳಿಬಿಟ್ಟರೆ ವಸೂಲಾತಿಯಾದಂತಹ ಜಿಲ್ಲೆಗಳು ಯಾವುವು ಮತ್ತು ಅವುಗಳ ಪರಿಸ್ಥಿತಿ ಏನು ಎಂದು ಹೇಳಿದ್ದೇನೆ, ಬಹುತೇಕ ವಸೂಲಾತಿ ಎಲ್ಲಿಯಾಗಿದೆ ಅಂದರೆ, ವಾಣಿಜ್ಯ ಬೆಳೆಗಳಿಗಾಗಿ ಏನು ಸಾಲ ತೆಗೆದುಕೊಂಡಿದ್ದರು ಅದು ವಸೂಲಾಗಿದೆ. ವಾಣಿಜ್ಯ ಎನ್ನುವಂತಹ ಅರ್ಥದಲ್ಲಿ ಕಾಫಿ ಇರಬಹುದು, ಅಡಿಕೆ ಇರಬಹುದು ಏಲಕ್ಕಿ ಇರಬಹುದು, ಇಂಥಾದ್ದಕ್ಕೆ ತೆಗೆದುಕೊಂಡಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಶೇಕಡ ೭೭ ರಷ್ಟು ವಸೂಲಾತಿಯಾಗಿದೆಯೆಂದರೆ ಬಹುತೇಕ ಅದು ಕಾಫಿ ಬೆಳೆಗೆ ಕೊಟ್ಟಂತಹ ಸಾಲ ಇರಬಹುದು. ಹಾಗೆ ಮಂಡ್ಯ ಜಿಲ್ಲೆಯಲ್ಲಿ ವಸೂಲಾತಿ ಹೆಚ್ಚಾಗಿದೆಯೆಂದರೆ, ಬಹುತೇಕ ಅದು ಕಬ್ಬಿಗೆ ತೆಗೆದುಕೊಂಡಂಥ ಸಾಲ ಇರಬಹುದು. ಬೀದರ್ ಜಿಲ್ಲೆಯಲ್ಲಿ ಏಕೆ ವಸೂಲಾತಿ ಬಂದಿದೆಯೆಂದರೆ, ಅದು ಕಬ್ಬಿಗೆ ತೆಗೆದುಕೊಂಡ ಸಾಲ ಇರಬಹುದು. ಆದರೆ ನಿಜವಾಗಿ ವಾಣಿಜ್ಯ ಬೆಳೆಗಳನ್ನು ಹೊರತುಪಡಿಸಿ ರೈತರ ಹಣ ಎಷ್ಟು ವಸೂಲಾತಿಯಾಗಿದೆ ಅಥವಾ ಸಾಲ ಎಷ್ಟು ಮರು ಪಾವತಿಯಾಗಿದೆಯೆಂಬುದನ್ನು ನೋಡಿದರೆ ನನ್ನ ಲೆಕ್ಕದಲ್ಲಿ ಇದು ಶೇಕಡ ೫ಕ್ಕಿಂತ ಕಡಿಮೆ ಇದೆ. ಜೂನ್ ೩೦ಕ್ಕೆ ವಸೂಲಾತಿ ದೃಷ್ಟಿಯಿಂದ ಈ

ವರ್ಷ ಮುಗಿಯುತ್ತದೆ. ಜುಲೈ ಒಂದನೇ ತಾರೀಖಿನಿಂದ ಹೊಸ ಸಾಲದ ವ್ಯವಸ್ಥೆ ಮಾಡಬೇಕು, ಇದು ಈಗಿರತಕ್ಕಂಥ ಒಂದು ಸ್ಥಿತಿ. ಇನ್ನು ಸಹಕಾರಿ ಸಂಸ್ಥೆಗಳಲ್ಲಿ ಕಳೆದ ಸಾರಿ ೨೩೫ ಕೋಟಿ ರೂಪಾಯಿಯ ಯೋಜನೆಯನ್ನು ಅಪೆಕ್ಸ್ ಲೆವೆಲ್‌ನಲ್ಲಿ ಹಾಕಿಕೊಂಡಿದ್ದರು, ಈಗ ಓವರ್ ಡ್ಯೂ ಎಷ್ಟೆಂದರೆ ಅಪೆಕ್ಸ್‌ನಿಂದ ೨೩೫ ಕೋಟಿ, ಎಲ್. ಡಿ. ಬ್ಯಾಂಕುಗಳಿಂದ ೯೧.೨೨ ಕೋಟಿ ಅಂದರೆ ಒಟ್ಟು ೩೨೬ ಕೋಟಿ ಓವರ್ ಡ್ಯೂ ಇದೆ. ಇಷ್ಟು ಓವರ್ ಡ್ಯೂ ನೀವು ಇಟ್ಟುಕೊಂಡು ಸಹಕಾರಿ ಸಂಸ್ಥೆಗಳಲ್ಲಿ ೨೩ ಸಾವಿರ ಪ್ರೈಮರಿ ಸೊಸೈಟಿಗಳು, ಜಿಲ್ಲಾ ಬ್ಯಾಂಕುಗಳು ಹಾಗೂ ಅಪೆಕ್ಸ್ ಬ್ಯಾಂಕುಗಳಲ್ಲಿ ಸುಮಾರು ೫೦ ಸಾವಿರಕ್ಕೂ ಮಿಕ್ಕ ನೌಕರವರ್ಗ ಇದೆ, ಅಂದರೆ ೫೦ ಸಾವಿರಕ್ಕೂ ಹೆಚ್ಚು ಜನ ನೌಕರರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ನಾವು ಇದೇ ರೀತಿ ಸಾಲ ಮನ್ನಾದ ವಿಚಾರವನ್ನು ಚರ್ಚೆಯ ವಸ್ತುವನ್ನಾಗಿ ಇಟ್ಟುಕೊಂಡು ನಿಖರವಾದಂಥ ನಿರ್ಧಾರವನ್ನು ತೆಗೆದುಕೊಳ್ಳದೆ ಇದ್ದರೆ ಯಾರು ಈ ೫೦ ಸಾವಿರ ನೌಕರರ ಜವಾಬ್ದಾರಿಯನ್ನು ಹೊರಬೇಕು ? ಸರ್ಕಾರ ಏನಾದರೂ ಅವರಿಗೆ ಸಬ್ಸಿಡಿ ಕೊಡುತ್ತದೆಯೆ, ಅಥವಾ ೫೦ ಸಾವಿರ ಜನ ಪುನಃ ಬೆಂಗಳೂರಿಗೆ ಬಂದು ವಿಧಾನ ಸೌಧದ ಮುಂದೆ ಮತ್ತೆ ಧರಣಿ ಹೂಡಬೇಕೆ? ಒಂದು ಕಡೆ ನೌಕರಿ ಕಳೆದುಕೊಳ್ಳತಕ್ಕಂಥಾದ್ದು, ಇನ್ನೊಂದು ಕಡೆ, ವಸೂಲಾತಿ ಇಲ್ಲದೆ ಸಹಕಾರಿ ಸಂಸ್ಥೆಗಳು ಸ್ಥಗಿತಗೊಳ್ಳತಕ್ಕಂಥದ್ದು, ಇದರಿಂದ ಉದ್ಭವಿಸಬಹುದಾದ ಅತ್ಯಂತ ದುಷ್ಟವಾದ ಪ್ರವೃತ್ತಿ ಏನೆಂದರೆ, ರೈತರಿಗೆ ಮರು ಸಾಲ ಸಿಗದೇ ಇರುವುದು ಇವೆಲ್ಲಕ್ಕೂ ಕಾರಣ ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಸಾಲ ಮನ್ನಾ ಅಗತ್ಯವಿದೆಯೆಂದು ನಾವು ಮೂಲತಃ ಒಪ್ಪಿಕೊಳ್ಳುತ್ತೇವೆ, ಆದರೆ ನಾವು ನಿರ್ಧಾರ ಮಾಡುತ್ತಿಲ್ಲ. ನಾವು ನಿರ್ಧಾರ ಮಾಡದೇ ಇರುವುದಕ್ಕೆ ಕಾರಣ, ಮುಖ್ಯಮಂತ್ರಿಗಳಿಗೆ ತಾಂತ್ರಿಕ ಕಾರಣ ನಾವು ಹೇಳಿದರೆ ಪ್ರತಿಪಕ್ಷದವರು ಬರೀ ವಾದ ಮಾಡುತ್ತಾರೆಂದು ಹೇಳುತ್ತಾರೆ. ನಾನು ಇವತ್ತು ಈ ಸಭೆಯ ಮೂಲಕ ಸ್ಪಷ್ಟಪಡಿಸುತ್ತೇನೆ. ಈ ಸಾಲ ಮನ್ನಾ ವಿಚಾರವನ್ನು ದೀರ್ಘವಾಗಿ ಚರ್ಚೆಮಾಡಿ ಈ ಸಮಸ್ಯೆಯನ್ನು ಜೀವಂತವಾಗಿ ಇಟ್ಟು ಅಲ್ಲಿ ರಾಜಕೀಯವನ್ನು ಮಾಡಬೇಕು ಎಂಬತಕ್ಕಂಥ ಇಚ್ಛೆ ಇಲ್ಲ. ಇದನ್ನು ನಾವು ಸ್ಪಷ್ಟವಾಗಿ ಹೇಳಬೇಕಾಗಿದೆ. ಅದಕ್ಕಾಗಿಯೇ ಹೊಸ ಸರ್ಕಾರ ಬಂದು, ಹೊಸ ಶಾಸನಸಭೆ ಸೇರಿದಾಗಲೂ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದರೂ ಕೂಡ ನಾವು ನಮ್ಮ ವ್ಯಾಪ್ತಿಯನ್ನು ಮೀರಿ ಹೋಗಲಿಲ್ಲ. ಎರಡನೆಯಸಾರಿ ಮುಖ್ಯಮಂತ್ರಿಗಳು ಹೇಳಿದಾಗಲೂ ಕೂಡ ನಾವು ನಮ್ಮ ವ್ಯಾಪ್ತಿಯನ್ನು ಮೀರಿ ಹೋಗಲಿಲ್ಲ. ಕಾರಣವೇನು ಯಾವುದೇ ಸರ್ಕಾರ ಬರಲಿ, ಅದಕ್ಕೆ ಒಂದು ರೀಜನಬಲ್ ಸಮಯ ಬೇಕಾಗುವುದು. ಆ ಸಮಯವನ್ನು ಕೊಡಬೇಕು ಎಂಬ ಸದಿಚ್ಛೆಯಿಂದ ನಾವು ಮಾಡಿದ್ದೇವೆ, ಈಗ ಆರು ತಿಂಗಳು ಕಳೆದಿದೆ. ೬ ತಿಂಗಳು ಕಳೆದ ಮೇಲೂ ಕೂಡ ಮುಖ್ಯಮಂತ್ರಿಗಳು ನಿರ್ಧಾರ ಮಾಡುವುದಿಲ್ಲ ಎಂದರೆ ಆಗ ನಾವು ಏನು ಮಾಡಬೇಕು ಎಂದು ನಾವು ನಿಮ್ಮ ತೀರ್ಮಾನವನ್ನು ನೋಡಿ ಮಾಡಬೇಕಾಗುತ್ತದೆ. ನಾನು ಅದಕ್ಕಾಗಿಯೇ ಹೇಳಿದೆ. ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡುವ ಅಗತ್ಯವಿಲ್ಲ ಎಂದು ಈಗ ಮಾಡಬೇಕಾದದ್ದು ಏನೆಂದರೆ, ದುಡ್ಡು ಎಲ್ಲಿಂದ ತರುವುದು ಅನ್ನೋದಲ್ಲವೇ ? ಸ್ವಾಮಿ, ಇದನ್ನು ಹೆಮ್ಮೆಯಿಂದ ಹೇಳುತ್ತೇನೆ. ನಮ್ಮ ಪತಿಯಿಂದ ಅರ್ಧ ಭಾಗವನ್ನು ಕೊಡುವ ತೀರ್ಮಾನವನ್ನು ಕೇಂದ್ರ ತೆಗೆದುಕೊಂಡಿದೆ ನಿನ್ನೆ ನಾವು ಚರ್ಚೆ ಮಾಡುವಾಗ ಕೆಲವು ವಿಷಯಗಳು ಕ್ಲಿಯರಾಗಿರಲಿಲ್ಲ. ಇಲ್ಲಿ ಒಂದು ಕಡೆ ಏನು ಹೇಳಲಾಗಿದೆಯೆಂದರೆ,

> "Agricultural and rural debt relief scheme, 1990. The Scheme shall be called Agricultural and Rural Debt Relief Scheme, 1990. It shall come into force with effect from 15th May, 1990. It shall apply to all eligible loans of public sector and regional rural banks as defined hereafter. Explanation: In so far as banks in the co-operative sectors are concerned scheme with a similar may be framed and put into operation by the State Government".

Kindly prepare a scheme and see how it could be put into operation. ಆದರೆ ಇದುವರೆಗೂ ನೀವು ಸ್ಕೀಮು ತಯಾರು ಮಾಡಲಿಲ್ಲ ಅಥವಾ ೧೦ ಸಾವಿರ ರೂಪಾಯಿಯೊಳಗೆ ಸಾಲ ಮಾಡಿರುವವರು ಯಾರ್ಯಾರು ಎಂದು ಲಿಸ್ಟನ್ನೂ ತಯಾರು ಮಾಡಲಿಲ್ಲ, ನಿನ್ನೆವರೆಗೂ ೧೦ ಸಾವಿರ ಸಾಲ ಮಾಡಿರುವ ಯಾವ ರೈತನ ಸಾಲ ಮನ್ನಾ ಆಗಬೇಕು ಎಂದಿದ್ದ ದ್ವಂದ್ವ ಶಂಕೆಗಳಿಗೆ ಇವತ್ತು ಕೇಂದ್ರ ಸ್ಪಷ್ಟೀಕರಣ ಕೊಟ್ಟಿದೆ ಅದರಲ್ಲಿ ಡೆಫಿನಿಷನ್ ೨ಡಿಗೆ

"Borrower means an individual farmer or an artisan who had borrowed a loan or loans from one or more banks the principles of which do not exceed Rs. 10,000"

"do not exceed 10,000"

ಎಂದು ಇದೆ.

ಇವತ್ತು, ಬಂದಿರುವ ಪತ್ರಿಕಾ ವರದಿ ಪ್ರಕಾರ ೧೦ ಸಾವಿರದೊಳಗೆ ಮಾಡಲಾಗಿರುವ ಸಾಲವನ್ನು ಮನ್ನಾ ಮಾಡಬೇಕು. ಇದು ಕ್ಲಿಯರಾದ ಭಾಗವಾಯಿತು. ಜೊತೆಗೆ ಇದರ ಲಾಭವನ್ನು ರಾಜ್ಯ ಸರ್ಕಾರ ಪಡೆದುಕೊಳ್ಳುತ್ತದೆಯೇ ಇಲ್ಲವೇ ಅನ್ನುವ ಪ್ರಶ್ನೆ ಈಗ ಇದೆ. ಈ ಸ್ಕೀಮನ್ನು ರಾಜ್ಯ ಸರ್ಕಾರ ಇನ್‌ಪ್ರಿನ್ಸಿಪಲ್ ಒಪ್ಪುತ್ತದೆಯೋ ಇಲ್ಲವೇ? ನಾವು ಒಪ್ಪಿಕೊಳ್ಳಬೇಕು ಎಂದು ಹೇಳುತ್ತಿದ್ದೇವೆ ಇದರ ಪರವಾಗಿ ನಮ್ಮ ನಾಡಿನ ರೈತರ ಪರವಾಗಿ ವಾದ ಮಾಡಲು ನಾವು ಬರುತ್ತೇವೆ. ಹಿಂದೆ ನೀವು ಕೇಂದ್ರ ಸರ್ಕಾರವನ್ನು ಒಪ್ಪಿಸಲು ನಮ್ಮನ್ನೆಲ್ಲ ಬನ್ನಿ ಎಂದಿದ್ದರಲ್ಲ ಈಗ ಸಮಯ ಪ್ರಶಸ್ತವಾಗಿದೆ, ಹೋಗೋಣ. ಆದರೆ ಮೊದಲು ನೀವು ಸ್ಕೀಮನ್ನು ತಯಾರು ಮಾಡಿ. ಯಾವ ಸ್ಕೀಮ್ ಒಪ್ಪಿಕೊಂಡರೆ ಎಷ್ಟು ನಮಗೆ ತಗಲುತ್ತದೆ. ಎಷ್ಟು ಉಳಿಸಬಹುದು ಎಂಬುದನ್ನೆಲ್ಲ ವರ್ಕ್‌ಔಟ್ ಮಾಡಿ. ಉತ್ತರ ಭಾರತದಲ್ಲಿ ಗುಜರಾತ್ ಸರ್ಕಾರ ೪೩೫ ಕೋಟಿ ರೂಪಾಯಿಗಳ ಸಾಲ ಮಜಾ ಮಾಡುತ್ತದೆಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ಹಾಗೆಯೇ ಉತ್ತರಪ್ರದೇಶ ಸರ್ಕಾರ ಕೇಂದ್ರದ ಸ್ಕೀಮನ್ನು ಒಪ್ಪಿಕೊಂಡಿದೆಯೆಂದು ಬಹಿರಂಗವಾಗಿ ಹೇಳಿದ್ದಾರೆ, ಬಿಹಾರ ಸರ್ಕಾರ ಕೂಡ ಒಪ್ಪಿಕೊಂಡಿದೆ ಈ ಮಾಹಿತಿಯೆಲ್ಲ ನನಗಿಂತ ನಿಮ್ಮ ಬಳಿ ಹೆಚ್ಚಾಗಿದೆ. ನಿನ್ನೆ ನೀವು ಹೇಳಿದಂತೆ, ನಮ್ಮ ಸರ್ಕಾರಕ್ಕೆ ಸಾಲ ಮನ್ನಾ ಮಾಡುವುದರಿಂದ ತಗಲುವ ಹೊರೆ ಎಷ್ಟು, ಕೇಂದ್ರದ ನೆರವು ಸಿಗದಿದ್ದರೆ ಏನು ಮಾಡಬೇಕು ಎಂದು ಆಲೋಚನೆ ಮಾಡೋಣ. ನನ್ನ ಲೆಕ್ಕದ ಪ್ರಕಾರ ಅದು ಸರಿಯೆಂದು ಹೇಳುವುದಿಲ್ಲ. ಈಗಿನ ಇತಿಮಿತಿಯೊಳಗೆ ಅದು ರಾಜ್ಯ ಸರ್ಕಾರಕ್ಕೆ ೧೨೦ ಕೋಟಿಗಿಂತ ಹೆಚ್ಚು ಭಾರ ಬೀಳುವುದಿಲ್ಲ. ಆದರ ಅರ್ಧ ಭಾಗವನ್ನಾದರೂ ನಾವು ಕೊಡಲು ಸಿದ್ಧವಿಲ್ಲದಿದ್ದರೆ ಸಹಕಾರ ಸಂಘಗಳ ಮೂಲ ಸಮಸ್ಯೆಯನ್ನು ಬಿಡಿಸುವುದಕ್ಕಾಗುವುದಿಲ್ಲ. ಆದ್ದರಿಂದ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ಇನ್ನು ಒಂದೆರಡು ತಿಂಗಳಲ್ಲಿ ನೀವು ಈ ಸಮಸ್ಯೆಯಿಂದ ಬಿಡಿಸಿಕೊಳ್ಳದಿದ್ದರೆ ೫೦–೬೦ ಸಾವಿರ ಜನ ಸಹಕಾರ ಸಂಘಗಳಲ್ಲಿ ಕೆಲಸಮಾಡುವ ನೌಕರರ ಅತ್ಯಂತ ದೊಡ್ಡ ಜವಾಬ್ದಾರಿಯನ್ನು ತಾವು ಹೊತ್ತುಕೊಳ್ಳಬೇಕಾಗುತ್ತದೆ. ಅವರನ್ನು ಬೀದಿಯಲ್ಲಿ ಬಿಡುವುದಕ್ಕೆ ಆಗುವುದಿಲ್ಲ. ಸಹಕಾರ ಸಂಘಗಳಿಂದಲೇ ಅವರು ಬದುಕುತ್ತಿದ್ದಾರೆ. ಅದೃಷ್ಟಕ್ಕೆ ಈ ಸಾರಿಯ ಮುಂಗಾರೂ ಚೆನ್ನಾಗಿದೆ. ಜೂನ್ ತಿಂಗಳಿಂದ ರೈತ ಕೆಲಸ ಮಾಡುತ್ತಾನೆ. ಇನ್ನೂ ನೀವು ಹಠವಾದಿತನವನ್ನು ಮುಂದುವರಿಸಿದರೆ ಏನೂ ಮಾಡಲು ಸಾಧ್ಯವಿಲ್ಲ ನಮಗೆ ತೋಂದರೆ ಇದೆ. ಸಹಕಾರ ಸಂಘಗಳಿಗೆ ಸಾಲ ಪಾವತಿ ಮಾಡಿ ಎಂದು ನೀವು ಹೇಳಿದರೆ ನಮ್ಮೆಲ್ಲರಿಗಿಂತ ರೈತರು ನಿಮ್ಮ ಮೇಲೇ ನಂಬಿಕೊಂಡಿದ್ದಾರೆ. ಏಕೆಂದರೆ, ರಾಜ್ಯದಲ್ಲೇ ಅತ್ಯಂತ ಕನಿಷ್ಟ ಪ್ರಮಾಣದ ಸಹಕಾರ ಸಂಘಗಳ ಸಾಲ ವಸೂಲಾಗಿರುದು ಗುಲ್ಬರ್ಗ ಜಿಲ್ಲೆಯಲ್ಲಿ ಅಲ್ಲಿ ಶೇಕಡ ೧.೦೩ ಮಾತ್ರ, ಉಳಿದ ಕಡೆಯೆಲ್ಲ ೬೦–೭೦ ಪರ್ಸೆಂಟ್ ಕಲೆಕ್ಷನ್ ಆಗಿದೆ. ಆದ್ದರಿಂದ ಈ ವಿಶ್ವಾಸಕ್ಕೆ ಧಕ್ಕೆ ಬರದಂತೆ ನಡೆದುಕೊಳ್ಳಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ದುಡ್ಡಿಗೆ ಏನು ಮಾಡುವುದು ಎಂದು ನೀವು ಕೇಳುತ್ತೀರಿ. ಸ್ವಾಮಿ, ಮನಸಿದ್ದರೆ ಮಾರ್ಗ ಬೇಕಾದಷ್ಟಿದೆ. ಒಂದು ಅಂಕಿ ಅಂಶವನ್ನು ನೋಡಿ, ಒಂದು ನಿಮಿಷ ಸ್ತಬ್ಧನಾಗಿ ಹೋದೆ, ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎಂದು. ಬೆಂಗಳೂರು ಮತ್ತು ಸುತ್ತಮುತ್ತಲ ಗ್ರಾಮೀಣ ಪ್ರದೇಶಗಳ ಅಬ್ಕಾರಿ ಹರಾಜು ಒಂದೇ ೮ ಕೋಟಿಗೂ ಮೀರಿದ್ದು ಅರ್ಥಾತ್ ಬೆಂಗಳೂರು, ಅದರ ಸುತ್ತಮುತ್ತಲಿನಿಂದ ೧೦೦ ಕೋಟಿ ಅಬ್ಕಾರಿ ತೆರಿಗೆ ಬರುತ್ತದೆಂದಾಯಿತು. ಬಹುಶಃ ಅಬ್ಕಾರಿ ಉತ್ಪಾದನೆಯೇ ೪೨೦ ಕೋಟಿಯನ್ನು ಮೀರಬಹುದೇನೋ. ಇದು ಯಾರ ಹಣ? ಬಡ ರೈತನಿಂದ ಪಡೆದುಕೊಂಡ ಹಣ. ಶ್ರೀಮಂತರು ಕೊಟ್ಟಿದ್ದಲ್ಲ, ಐಎಂಎಫ್ ಎಲ್ ನಿಂದ ಬಂದದ್ದಲ್ಲ. ಶರಾಬು ಬಾಬ್ತಿನಿಂದ ಬಹುತೇಕ ಬಂದಿರುವ ಜಿಲ್ಲಾವಾರು ಲೆಕ್ಕ ತೆಗೆದುಕೊಂಡರೆ ಹೆಚ್ಚು ರೈತರೇ ಇರುವ ಮಂಡ್ಯ ಜಿಲ್ಲೆ ಮೂರನೇದೋ, ಎರಡನೇದೊ ಬರುತ್ತದೆ. ಆದ್ದರಿಂದ ಇದರಲ್ಲಿ ಸ್ವಲ್ಪ ಹಣವನ್ನಾದರೂ ಬಡ ರೈತರಿಗಾಗಿ ತೆಗೆದಿಡುವುದಕ್ಕೆ ಪ್ರಯತ್ನ ಮಾಡಿ. ಇದು ಪಾಪದ ಹಣ ಎಂದು ಎಲ್ಲರಿಗೂ ಗೊತ್ತು ಸ್ವಲ್ಪ ಮಟ್ಟಿಗಾದರೂ ಪುಣ್ಯದ ಕೆಲಸ ಮಾಡೋಣ.

ಶ್ರೀ ಎಂ. ಮಹಾದೇವ್.—ಪಾಪದ ಹಣವನ್ನು ಸಾಲ ತೀರಿಕೆಗೆ ಖರ್ಚು ಮಾಡಬೇಕೋ ಅಥವಾ ನೀರಾವರಿಗಾಗಿ ವಿನಿಯೋಗಿಸಬೇಕೋ ಹೇಳಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಅದನ್ನು ಹೇಗೆ ವಿನಿಯೋಗಿಸಬೇಕೆಂಬುದು ನಿಮಗೆ ಬಿಟ್ಟಿದ್ದು. ರಾಜ್ಯ ಆಳುವ ಅಧಿಕಾರ ನಿಮಗೆ ಕೊಡಲ್ಪಟ್ಟಿದೆ.

ಶ್ರೀ ವಾಟಾಳ್ ನಾಗರಾಜ್.—ಇದರಲ್ಲಿ ಪಾಪಾನೂ ಒಂದೇ ಪುಣ್ಯಾನೂ ಒಂದೇ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಹಾದೇವ್ ಅವರು ಆ ಮಾತು ಅವರ ಹಳ್ಳೀಲಿ ಹೇಳಿ ಬಿಟ್ಟು ಇಲ್ಲಿಗೆ ವಾಪಸ್ ಬರಲಿ ನೋಡೋಣ.

ಶ್ರೀ ಡಿ. ಬಿ. ಚಂದ್ರೇಗೌಡ.—ಆದ್ದರಿಂದ ಸ್ವಲ್ಪ ಆಲೋಚನೆ ಮಾಡೋಣ. ಈಗ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ನಮಗೇ ಕನ್‌ಫರ್ಮ್ ಮಾಡಿ ಎಂದು ಸಾಗುವಳಿದಾರರು ಹತ್ತಾರು ವರ್ಷಗಳಿಂದ ಹೇಳುತ್ತಿದ್ದಾರೆ. ಮಾನ್ಯ ಹುಚ್ಚಮಾಸ್ತಿಗೌಡರು ಸಚಿವರಾಗಿದ್ದ ಕಾಲಕ್ಕೇ ಒಂದು ಲೆಕ್ಕ ಮಾಡಿದ್ದರು. ನಾವೆಲ್ಲ ಯಾವುದೋ ಒಂದು ಮಾನಸಿಕ ರೋಗಕ್ಕೆ ಸಿಕ್ಕಿಹಾಕಿಕೊಂಡಿದ್ದೇವೆ. ಇದು ಸರಿಸುಮಾರು ೫೦ ಸಾವಿರ ಎಕರೆ ಆಗಬಹುದು. ಅವರು ಕಂದಾಯ ಕೊಡುವುದಿಲ್ಲ ಅಥವಾ ಅಗ್ರಿಕಲ್ಚರಲ್ ಇನ್‌ಕಮ್ ಟ್ಯಾಕ್ಸ್ ಲೆಕ್ಕಕ್ಕೂ ಸಿಗುವುದಿಲ್ಲ ಅಥವಾ ಇನ್‌ಕಮ್ ಟ್ಯಾಕ್ಸ್ ಲೆಕ್ಕಕ್ಕೂ ಸಿಗುವುದಿಲ್ಲ, ನೀವೂ ಬಿಡುವುದಿಲ್ಲ, ಕಳೆದ ಹಲವಾರು ವರ್ಷಗಳಿಂದ ಹಾಗೆಯೇ ಸಮಸ್ಯೆ ಉಳಿದಿದೆ. ಇದನ್ನು ಕನ್‌ಫರ್ಮ್ ಮಾಡುವುದರಿಂದ ೧೨೦ ಕೋಟಿ ಬರುತ್ತದೆ. ವಾಣಿಜ್ಯ ಬೆಳೆ ಬೆಳೆಯುವವರು ಒತ್ತುವರಿ ಮಾಡಿರುವುದರಿಂದಲೂ ಸಾಕಷ್ಟು ಬರುತ್ತದೆ. ಇದರ ಲೆಕ್ಕ ಮಾಡಬಹುದು. ತಾವೇ ಹೇಳಿದ್ದೀರಿ, ನಾವು ದುಂದು ವೆಚ್ಚವನ್ನು ಕಡಿಮೆ ಮಾಡಿದ್ದೇವೆ, ಸರಳವಾದ ಜೀವನ ಮಾಡುತ್ತಿದ್ದೇವೆಂದು. ಮಂತ್ರಿ ಗಳು ವ್ಯವಹಾರಕ್ಕಾಗಿ ಅಥವಾ ಮನೆಗೆ ಸುಣ್ಣ ಬಣ್ಣಕ್ಕೆ ಖರ್ಚು ಮಾಡಿದ್ದಾರಲ್ಲಾ, ಅದೆಲ್ಲಾ ಬರೀ ಶಾಸನಸಭೆಯ ಮಾತಾಗಿ ಉಳಿದಿದೆ. ಡಿಟೇಲ್ಸ್‌ಗೆ ನಾನು ಹೋಗುವುದಿಲ್ಲ. ಯಾರು ಯಾರು ಎಷ್ಟೆಷ್ಟು ಖರ್ಚು ಮಾಡಿದ್ದಾರೆ ಎಂದು ಅದೆಲ್ಲಾ ಲೆಕ್ಕ ಬರುತ್ತದೆ ಈಗ ಚರ್ಚೆ ಬೇಡ. ಅದು ನಿಮಗೆ ಗೊತ್ತಿದೆಯೋ ಇಲ್ಲವೋ ? ನಿಮ್ಮ ತೆರೆಮರೆಯಲ್ಲಿ ಬೇಕಾದಷ್ಟು ನಡೆಯುತ್ತಿದೆ. ಖರ್ಚನ್ನು ಕಡಿಮೆ ಮಾಡುತ್ತೇವೆ ಎಂದು ಹೇಳಿದ್ದೀರಿ, ಸಂತೋಷ. ಈ ಸಾರಿ ಬರೀ ವರ್ಗಾವಣೆಗೆ ಎಂಭತ್ತು ಕೋಟಿ ರೂಪಾಯಿಗಳಿಗಿಂತ ಮೀರಿ ಭತ್ಯ ಕೊಡಬೇಕಾಗಬಹುದು ಎನ್ನತಕ್ಕಂಥದ್ದು ಒಂದು. ಇದರ ಬಗ್ಗೆ ಮಾನ್ಯ ಸದಸ್ಯರೊಬ್ಬರು ಹೇಳಿದರು ಇಷ್ಟು ದೊಡ್ಡ ಪ್ರಮಾಣದ ಹಣ ಕೊಟ್ಟು ವರ್ಗ ಮಾಡತಕ್ಕಂಥ ಪ್ರಮೇಯ ಏನಿತ್ತು ? ಈ ವರ್ಷ ನಿಲ್ಲಿಸಿ ಒಂದು ವರ್ಷ ವರ್ಗ ಮಾಡದಿದ್ದರೆ ಸಾಮ್ರಾಜ್ಯ ಹೋಗುತ್ತಿತ್ತೇ ? ತೀರಾ ಅನಿವಾರ್ಯ ಎಂದು ಹೇಳಿದರೆ ಮಾಡೋಣ. ಅಲ್ಲಿದ್ದ ಅಧಿಕಾರಿ ಅಲ್ಲಿಯೇ ಇರುತ್ತಾನೆ. ಇಲ್ಲಿರುವ ಅಧಿಕಾರಿ ಇಲ್ಲಿಯೇ ಇರುತ್ತಾನೆ. ಇದರಿಂದಾಗಿ ತಮಗೆ ಅತ್ಯಂತ ದೊಡ್ಡ ಅಪಕೀರ್ತಿಯೂ ಬಂದಿದೆ. ಸಾರ್ವಜನಿಕ ಹಣ ಕೂಡಾ ಈಗ ವೆಚ್ಚವಾಗುತ್ತಿದೆ. ಮೇಲಾಗಿ ಆಡಳಿತದಲ್ಲಿ ಶಿಥಿಲತೆ ಬಂದಿದೆ ಆಡಳಿತದ ಮುಖ್ಯಸ್ಥರಿದ್ದಾರಲ್ಲಾ, ಅವರಿಗೆ ಏನು ಮಾಡಬೇಕು ಎಂದು ತಿಳಿದಿಲ್ಲ, ಆ ರೀತಿಯ ಪರಿಸ್ಥಿತಿಯಾಗಿದೆ. ಜವಾಬ್ದಾರಿ ಮಾತ್ರ ಅವರ ಮೇಲೆ ಹಾಕುತ್ತೇವೆ. ಕೆಳಗಡೆ ಇರುವ ಜವಾನನ್ನು ಕೂಡಾ ಟ್ರಾನ್ಸ್‌ಫರ್ ಮಾಡುವುದಕ್ಕೆ ಆ ಅಧಿಕಾರಿಗೆ ಅಧಿಕಾರ ಇಲ್ಲ.

ಶ್ರೀ ಎಂ. ಮಹದೇವ್.—ಇದಕ್ಕಿಂತಲೂ ದೊಡ್ಡ ಪ್ರಮಾಣದಲ್ಲಿ ವರ್ಗಾವಣೆ ಮಾಡಿದಂಥ ಮುಖ್ಯಮಂತ್ರಿಗಳು ಇರಲಿಲ್ಲವೇ ?

ಶ್ರೀ ಡಿ. ಬಿ. ಚಂದ್ರೇಗೌಡ.—ಲೆಕ್ಕ ತೆಗೆದುಕೊಂಡು ನೋಡಿ.

(ಗೊಂದಲ)

ಶ್ರೀ ಎಂ. ಮಹದೇವ್.—ಹಿಂದೆ ಬೆಳಿಗ್ಗೆ ಒಂದು, ಮಧ್ಯಾಹ್ನ ಒಂದು, ಸಾಯಂಕಾಲ ಒಂದು, ಈ ರೀತಿಯಲ್ಲೆಲ್ಲಾ ಟ್ರಾನ್ಸ್‌ಫರ್ ಆಗಿದೆ, ಇತಿಹಾಸ ತೆಗೆದು ನೋಡಿ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ನೀವು ನಮಗೂ ಮೀರಿ ಹೋಗಿದ್ದೀರಿ.

ಶ್ರೀ ಜಿ. ರಾಜುಗೌಡ.—೧೯೮೭–೮೮ನೇ ಇಸವಿಯಲ್ಲಿ ಎಷ್ಟು ವರ್ಗಾವಣೆ ಯಾಗಿದೆ ಎನ್ನುವುದನ್ನು ನೋಡಿ.

(ಗೊಂದಲ)

ಉಪಾಧ್ಯಕ್ಷರು.—ಚರ್ಚೆ ನಡೆಯುತ್ತಿರುವುದು ಸಾಲ ಮನ್ನಾ ಮಾಡುವ ಬಗ್ಗೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ನನ್ನದೊಂದು ಕ್ರಿಯಾಲೋಪ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅವರು ವರ್ಗಾವಣೆ ಮಾಡಿದ್ದರೂ ಬುದ್ಧಿವಂತಿಕೆಯಿಂದ ಮಾಡಿದ್ದರು. ಬಯಲಿಗೆ ಬಂದಿರಲಿಲ್ಲ. ನೀವು ಬಯಲಿಗೆ ಬಂದಿದ್ದೀರಿ.

(ಗೊಂದಲ)

ಉಪಾಧ್ಯಕ್ಷರು.—ವಾಟಾಳ್ ನಾಗರಾಜ್‌ರವರು ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಈ ವರ್ಗಾವರ್ಗಿ ಮಾಡುವುದರಲ್ಲಿ...

ಉಪಾಧ್ಯಕ್ಷರು.—ಚರ್ಚೆ ನಡೆಯುತ್ತಿರುವುದು ಸಾಲ ಮನ್ನಾದ ಬಗ್ಗೆ. ವರ್ಗಾವರ್ಗಿ ಎಂದು ಏತಕ್ಕೆ ತೆಗೆಯುತ್ತೀರಿ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕು. ಈ ವರ್ಗಾವರ್ಗಿ ಮಾಡುವುದರಲ್ಲಿ ನಮ್ಮ ಸಮಸ್ಯೆ ಏನಾಗಿದೆ ಎಂದರೆ, ನಮ್ಮಂಥವರು ಇಲ್ಲಿ ಕುಳಿತಿರುವುದು ಬಹಳ ಕಷ್ಟ. ಜನತಾದಳದವರು ಹಿಂದೆ ಸರ್ಕಾರವನ್ನು ನಡೆಸಿದ್ದರು.

ಉಪಾಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿ ಬೇರೆ ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ.—ಒಂದು ನಿಮಿಷ. ತಮ್ಮ ಗಮನಕ್ಕೆ ಈ ವಿಷಯವನ್ನು ತರುತ್ತಿದ್ದೇನೆ. ಇವರು ಹಿಂದೆ ಸರ್ಕಾರ ನಡೆಸಿದವರು. ಅವರು ಆದರ ಹಿಂದೆ ಸರ್ಕಾರವನ್ನು ನಡೆಸಿದವರು. ಇವರಿಬ್ಬರೂ ಬದಲಾವಣೆ ಆಗುತ್ತಾರೆ. ನಾವು ಮತ್ತು ನಮ್ಮ ಯಡಿಯೂರಪ್ಪನವರು, ನಂಜುಂಡಸ್ವಾಮಿಯವರು, ಪಟೇಲರು ಇಲ್ಲಿ ಕುಳಿತುಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಏಕೆಂದರೆ ಇವರನ್ನು ವಿರೋಧಪಕ್ಷದವರು ಎನ್ನಬೇಕೇ, ಅವರನ್ನು ಸರ್ಕಾರ ಎನ್ನಬೇಕೆ? ಅವರು ಏನಾದರೂ ಹೇಳಿದರೆ ಅಲ್ಲಿ ಸರ್ ಎಂದು ಏಳುತ್ತಾರೆ. ವರ್ಗಾವರ್ಗಿಯಲ್ಲಿ ಇಬ್ಬರೂ ಒಂದೇ. ಈ ಸರ್ಕಾರದವರು ಸ್ವಲ್ಪ ಜಾಸ್ತಿ ಮಾಡಿದ್ದಾರೆ. ಕಾರಣವಿಷ್ಟೇ. ಆರೂವರೆ ವರ್ಷಗಳಿಂದ ಯಾರನ್ನು ವರ್ಗಾವಣೆ ಮಾಡಿರಲಿಲ್ಲ. ಗಂಭೀರವಾಗಿ ಎಲ್ಲೆಲ್ಲಿ ಇದ್ದರೋ ಅಲ್ಲಲ್ಲಿಯೇ ಇದ್ದರು.

ಶ್ರೀ ಎಲ್. ಆರ್. ಶಿವರಾಮೇಗೌಡ.—ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ, ಒಂದು ಆಯೋಗವನ್ನು ರಚನೆ ಮಾಡಲಿ. ೧೯೮೩-೧೯೯೯ರವರೆಗೆ ಯಾರ್‍ಯಾರು ಎಷ್ಟೆಷ್ಟು ವರ್ಗ ಮಾಡಿದ್ದಾರೆ ಎಂದು ಗೊತ್ತಾಗುವುದಕ್ಕೆ ಒಂದು ಆಯೋಗವನ್ನು ರಚನೆ ಮಾಡಲಿ.

ಶ್ರೀ ಆರ್. ವಿ. ದೇಶಪಾಂಡೆ.—ಮಾಡಲಿ.

(ಗೊಂದಲ)

ಶ್ರೀ ಡಿ. ಬಿ ಚಂದ್ರೇಗೌಡ.—ಮಾನ್ಯ ಸದಸ್ಯರುಗಳಾದ ರಾಜುಗೌಡ ಮತ್ತು ಮಹದೇವ್ ಅವರು ಹೇಳಿದರು. ಆ ಕಾಲಕ್ಕೆ ವರ್ಗ ಮಾಡಿದಾಗ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ಹೇಗೆ ಎಂದು ನಾವು ನಿಮ್ಮನ್ನು ಕೇಳಿರಲಿಲ್ಲ. ಈಗ ಕೇಳಿದ್ದೀರಿ ಎಂದು ಸಲಹೆ ಮಾಡುತ್ತಿದ್ದೇವೆ. ಬೇಕಾದರೆ ಒಪ್ಪಿಕೊಳ್ಳಿ. ಬೇಡದಿದ್ದರೆ ಬಿಡಿ. ಆ ಕಾಲಕ್ಕೆ ಸಂಪನ್ಮೂಲವನ್ನು ರೂಡಿಸುವುದು ಹೇಗೆ ಎಂದು ಸಲಹೆಯನ್ನು ಕೇಳಿರಲಿಲ್ಲ. ಈಗ ಸಲಹೆಯನ್ನು ಕೇಳಿರುವುದರಿಂದ ಈ ರೀತಿ ಹೇಳಿದ್ದೇವೆ.

ಶ್ರೀ ಜಿ ರಾಜುಗೌಡ.—ನೀವು ಟ್ರೆಜರಿಯನ್ನು ಕ್ಲೋಸ್ ಮಾಡಿ ಖಜಾನೆಯನ್ನು ಬರಿದು ಮಾಡಿದ್ದೀರಲ್ಲಾ, ಅದಕ್ಕೋಸ್ಕರ ನಾವು ನಿಮ್ಮನ್ನು ಕೇಳುತ್ತಿರುವುದು.

ಶ್ರೀ ಡಿ. ಬಿ. ಚಂದ್ರೇಗೌಡ.—ಇದು ಟ್ರೆಜರಿ ಅಂದರೆ ವೀರಪ್ಪನ್ ಟ್ರೆಜರಿ ಅಲ್ಲ...

(ಗೊಂದಲ)

ಶ್ರೀ ಎಂ ಮಹದೇವ್.—ಹಿಂದಿನ ಸರ್ಕಾರಕ್ಕೂ ಈ ಸರ್ಕಾರಕ್ಕೂ ಎರಡೇ ವ್ಯತ್ಯಾಸ, ಒಂದು ಮೌಲ್ಯಾಧಾರಿತ ಟ್ರಾನ್ಸ್‌ಫರ್, ನಮ್ಮ ಹತ್ತಿರ ಅದು ಇಲ್ಲ...

(ಗೊಂದಲ)

ಉಪಾಧ್ಯಕ್ಷರು.—ಟ್ರಜರೀದು ಬೇಡ, ಸಾಲ ಮನ್ನಾದ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್.—ಸಾಲ ವ್ಯವಸ್ಥಾ ಮಾಡುವ ವಿಚಾರ ಇಲ್ಲದಿದ್ದರೆ ಇಲ್ಲ ಎಂದು ಸ್ಪಷ್ಟವಾಗಿ ಹೇಳಿ.

ಶ್ರೀ ಡಿ. ಬಿ. ಚಂದ್ರೇಗೌಡ.—ನನಗೆ ಅರ್ಥ ಆಗದೇ ಇರುವುದು ಏನು ಅಂದರೆ ಇಲ್ಲಿ ಹಿರಿಯ ಸದಸ್ಯರುಗಳು ಇದ್ದಾರೆ, ಇಬ್ಬರು ಅನುಭವಿಗಳು ಇದ್ದಾರೆ ಈಗ ಏನು ಪ್ರಶ್ನೆ ಅಂದರೆ, ಯಾವುದೆ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳು ಇವತ್ತು ಎಷ್ಟೇ ಪ್ರಭಾವಿಯಾಗಿ ಇದ್ದರೂ ಸಹ ಈ ಶಾಸನ ಸಭೆಯ ಅನುಮತಿ ಕೊಡದೇ ಒಂದು ರೂಪಾಯಿ ಸಹ ಖರ್ಚು ಮಾಡುವುದಕ್ಕೆ ಅಧಿಕಾರ ಇಲ್ಲ. ಯಾವ ಸರ್ಕಾರವೂ ಸಹ ಟ್ರೆಜರಿಯನ್ನು ಭರ್ತಿ ಮಾಡಿಟ್ಟು ಹೋಗಿದೆ, ಖಾಲಿ ಮಾಡಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದಾಯ ಕಾಲಕ್ಕೆ ಬರುತ್ತದೆ, ಖರ್ಚು ಮಾಡುತ್ತೇವೆ, ಅದನ್ನೇ ಆಯ ಹಾಗೂ ವ್ಯಯ ಎಂದು ಹೇಳುತ್ತೇವೆ. ಬೇಸಿಕ್ ಪ್ರಿನ್ಸಿಪಲ್ಸ್ ಗೊತ್ತಿಲ್ಲದೇ ಹೋದರೆ ಹೇಗೆ ?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ.—ಟ್ರೆಜರಿ ಖಾಲಿ ಆಗಿದೆ.

(ಗೊಂದಲ)

ಶ್ರೀ ಜಿ. ರಾಜೂಗೌಡ.—ನಿಮ್ಮ ಕಾಲದಲ್ಲಿ ೨೦ ರೂಪಾಯಿನ ಚೆಕ್ ಸಹ ಬೌನ್ಸ್ ಆಗಿದೆ. ..

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್.—ನಿನ್ನೆ ದಿವಸ ಮುಖ್ಯಮಂತ್ರಿಗಳು ಹೇಳಿದ ಮಾತಿನಲ್ಲೇ ಹೇಳಬೇಕಾದರೆ, ರಾಜ್ಯದ ಅಭಿವೃದ್ಧಿ ಕೆಲಸಗಳನ್ನು, ಬಡವರ ಪರವಾಗಿ, ಜನಪರ ಕೆಲಸಗಳನ್ನು ಮಾಡಿದ್ದಕ್ಕೆ ಟ್ರೆಜರಿ ಖಾಲಿಯಾಗಿದೆ ಎಂದು ಹೇಳುವುದಲ್ಲ, ನಿನ್ನೆ ಮುಖ್ಯಮಂತ್ರಿಗಳು ಹೇಳಿದ ಮಾತನ್ನು ಈಗ ಸ್ಪಷ್ಟಪಡಿಸುತ್ತಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನನಗೆ ಮುಖ್ಯವಾಗಿ ಅನಿಸುವುದು ಏನು ಅಂದರೆ, ಈ ಸಲಹೆಗಳ ಜೊತೆಗೆ......

ಶ್ರೀ ಕೆ. ಹೆಚ್. ಹನುಮೇಗೌಡ.—ಈ ರಾಜ್ಯದಲ್ಲಿ ೭ ವರ್ಷ ನಿಮ್ಮ ಅಧಿಕಾರ ನಡೆಯಿತಲ್ಲ, ಬಹಳ ಅಭಿವೃದ್ಧಿ ಕೆಲಸ ಆಯಿತು, ಏನು ಹಾಲಿನ ಹೊಳೆಯನ್ನೇ ಹರಿಸಿದ್ದೀರಿ, ಈ ದೇಶದ ರೈತರು ದಡ್ಡರು, ಕಟ್ಟೆಯನ್ನು ಹಾಕಿಕೊಳ್ಳಲಿಲ್ಲ, ಎಲ್ಲಾ ಅರಬ್ಬೀ ಸಮುದ್ರ ಹಾಗೂ ಬಂಗಾಳಕೊಲ್ಲಿಗೆ ಹೋಯಿತು, ಎಂತಹ ಅನಾಹುತ ಆಯಿತು. ದೇಶ ದರೋಡೆ ಆಯಿತು ಎನ್ನುವುದು ದೇಶದ ಜನರಿಗೇ ಗೊತ್ತಿದೆ. ಆದರೂ ಸಹ ನಾವು ಸರಿ ಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತೀರಲ್ಲ, ಏಕೆ ಇಷ್ಟು ಆತ್ಮವಂಚನೆ ಮಾಡಿಕೊಳ್ಳುತ್ತೀರಿ ? ಇರುವುದನ್ನು ಒಪ್ಪಿಕೊಳ್ಳಿ......

ಶ್ರೀ ಸಿ. ಬೈರೇಗೌಡ.—ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಹನುಮೇಗೌಡರು ಹೇಳಿದ ಮಾತನ್ನು ಬಹಳ ಸಾರಿ ಇಲ್ಲಿ ಹೇಳಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ.—ನೀವು ಸಹ ಪದೇಪದೇ ಹೇಳುತ್ತಿರುತ್ತೀರಿ. ನೀವು ಮಾತನಾಡುವಾಗ ನಾನು ಕುಳಿತಿದ್ದೇನೆ. ತಪ್ಪು ಮಾಡಿದ್ದರೆ ತಪ್ಪು ಎಂದು ಹೇಳಿ. ಕರೆಕ್ಟಾಗಿ ಮಾಡಿ ಎಂದು ಹೇಳಿ, ಮಾಡಿದ್ದೇವೆ, ಮಾಡಿದ್ದೇವೆ ಎಂದರೆ ಏನು ಮಾಡಿದ್ದೀರಿ ? ದೇಶ ಕೊಳ್ಳೆ ಹೋಯಿತು, ದಟ್ಟ ದರಿದ್ರ ಆಗಿ ಹೋಯಿತು, ಬ್ಯಾಂಕ್ ಎಲ್ಲ ಖಾಲಿ ಆಯಿತು. ಹೇಳುವುದಕ್ಕೆ ನಾಚಿಕೆ ಆಗುವುದಿಲ್ಲವೇ ? ಪದೇ ಪದೇ ಎಷ್ಟು ಭಾರಿ ಹೇಳುತ್ತಿರುತ್ತೀರಿ ?

(ಗೊಂದಲ)

ಉಪಾಧ್ಯಕ್ಷರು.—ಯಡಿಯೂರಪ್ಪನವರೇ, ದಯವಿಟ್ಟು ಇಬ್ಬರೂ ಕುಳಿತುಕೊಳ್ಳಿ. ಅವರು ಮಾತನಾಡಬೇಕು.

ಶ್ರೀ ಕೆ. ಹೆಚ್. ಹನುಮೇಗೌಡ.—ಅವರು ಹೇಳತಕ್ಕ ಕೆಲವು ಮಾತುಗಳನ್ನು ನಾವು ತಡೆಯುವುದಕ್ಕೆ ಆಗುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಈ ಭಾಷೆ ನನಗೂ ಬರುತ್ತದೆ. ಯಾರ್ಯಾರು ಅಪರಾಧ ಮಾಡಿದ್ದಾರೆ, ಅವರನ್ನು ಶಿಕ್ಷಿಸಿ... ನನಗೆ ಏಕೆ ಹೇಳುತ್ತೀರಿ ?

(ಗೊಂದಲ)

ಶ್ರೀ ಕೆ. ಹೆಚ್. ಹನುಮೇಗೌಡ.—ಮಾಡಬಾರದ್ದೆಲ್ಲ ಮಾಡಿದ್ದೀರ, ಮತ್ತೆ ಬಂದು ಹೇಳುತ್ತಾ ಕುಳಿತುಕೊಳ್ಳುತ್ತೀರಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಅದೇ ಕಾರಣಕ್ಕಾಗಿಯೇ ನೀವು ಮಾಡಬಾರದ್ದನ್ನು ಮಾಡಿದ್ದರಿಂದಲೇ ನಿಮ್ಮನ್ನು ದೆಹಲಿಯಿಂದ ಕಿತ್ತು ಹಾಕಿದ್ದಾರೆ.

(ಗೊಂದಲ)

ಶ್ರೀ ಕೆ. ಬೈರೇಗೌಡ.—ಬೋಫರ್ಸ್‌ನಲ್ಲಿ ದರೋಡೆಯಾಗಿದೆ, ಸಬ್‌ಮೆರೀನ್‌ನಲ್ಲಿ ದರೋಡೆ ಆಗಿದೆ....

(ಗೊಂದಲ)

SRI D. B. CHANDRE GOWDA.—There is a limit for this,

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಹಾಗಿದ್ದರೆ ಸರ್ಕಾರ ನಿಮ್ಮ ಕೈಯಲ್ಲಿ ಇದೆ, ವಿಚಾರ ಮಾಡಿ. ಅಪರಾಧಿಗಳನ್ನು ಹ್ಯಾಂಗ್ ಮಾಡಿ, ಏನಿದು ಹೊಲಸು. This is not the way.

ಶ್ರೀ ಬಿ. ಹೆಚ್. ಬನ್ನಿಕೋಡ್.—ಸಾಲ ಮನ್ನಾ ಮಾಡುವುದಕ್ಕೆ ಆಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿ. ಏಕೆ ಈ ತಂಟೆ ಮಾಡುತ್ತೀರಿ ?

ಉಪಾಧ್ಯಕ್ಷರು.—ಹನುಮೇಗೌಡರೇ, ದಯವಿಟ್ಟು ಕುಳಿತುಕೊಳ್ಳಿ......

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮ್ಮಿಂದ ನಾವು ಕಲಿಯಬೇಕಾಗಿಲ್ಲ......

ಶ್ರೀ ಕೆ. ಹೆಚ್. ಹನುಮೇಗೌಡ.—ನಿಮ್ಮಿಂದಲೂ ಕಲಿಯಬೇಕಾಗಿಲ್ಲ......

SRI D. B. CHANDRE GOWDA.—Please sit down, who are you to say that ?

(ಗೊಂದಲ)

ಉಪಾಧ್ಯಕ್ಷರು.—ಹನುಮೇಗೌಡರೇ, ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಚಂದ್ರೇಗೌಡರು ಮಾತನಾಡುತ್ತಿದ್ದಾರೆ ...

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಇವರು ರಾಜ್ಯ ಸರ್ಕಾರ ಹಾಳು ಮಾಡಿದರು. ಅವರು ಬೋಫೋರ್ಸ್ ಮುಖಾಂತರ ಕೇಂದ್ರ ಸರ್ಕಾರ ಹಾಳು ಮಾಡಿದರು.

ಉಪಾಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು.—ಬೋಫೋರ್ಸ್‌ನಿಂದ ಕೇಂದ್ರದ ದರೋಡೆ ನೀವು ಮಾಡಿದಿರಿ ಗೊತ್ತೇ

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ದೇಶ ಹಾಳು ಮಾಡಿದಿರಿ ಎಂದು ಹೇಳುತ್ತಾ ಇದ್ದಾರೆ, ದೇಶ ಹಾಳು ಮಾಡಿದವರು ಯಾರು ?

ಶ್ರೀ ವೀರೇಂದ್ರ ಪಾಟೀಲ್.—ಗೊಂದಲಮಯ ವಾತಾವರಣ ನಿರ್ಮಾಣವಾಗಿದ್ದು ನಿಜವಾಗಿಯೂ ದುರದೃಷ್ಟಕರ. ಏಕೆಂದರೆ, ಒಂದು ಗಂಭೀರ ಸಮಸ್ಯೆ ಬಗ್ಗೆ ನಾವು ಚರ್ಚೆ ಮಾಡುತ್ತಾ ಇದ್ದೇವೆ. ಆದರೆ ವಾತಾವರಣ ಈ ರೀತಿ ಕಲುಷಿತವಾಗುವುದಕ್ಕೆ ಎಲ್ಲಿಂದಲಾದರೂ ಪ್ರಚೋದನೆ ಬಂದಾಗ ಈ ಪರಿಸ್ಥಿತಿ ಆಗುತ್ತದೆ. ಅದಕ್ಕಾಗಿ ಯಾರೇ ವಿಚಾರಗಳನ್ನು ವ್ಯಕ್ತ ಮಾಡುವ ಮುಂಚೆ ಪ್ರಚೋದನೆಗೆ ಅವಕಾಶ ಕೊಡಬಾರದು. ಬಹುಶಃ ಮಾನ್ಯ ವಿರೋಧಪಕ್ಷದ ನಾಯಕರು ಈ ವರ್ಗಾವರ್ಗಿಯಲ್ಲಿ ನೀವು ಬೇಕಾದಷ್ಟು ಹಣ, 10 ಕೋಟಿ ರೂಪಾಯಿ ಸುರಿಯುತ್ತಾ ಇದ್ದೀರಿ ಎಂದು ಪ್ರಾರಂಭ ಮಾಡಿದರು. ಬಹುಶಃ ವರ್ಗಾವಣೆ ಮಾಡುವುದನ್ನು ನಿಲ್ಲಿಸಿದರೆ ರೈತರ ಸಾಲ ಮನ್ನಾ ಮಾಡುವುದಕ್ಕೆ ಸಾಧ್ಯವಾಗಿತ್ತು. ಅಂದರೆ ನಾನು ಒಪ್ಪಿಕೊಳ್ಳುತ್ತೇನೆ. ನಾನು ಹೇಳುವುದು ಸಲಹೆ. ಬಹುಶಃ ನಿನ್ನೆ ವಿರೋಧಪಕ್ಷದ ಬಿ.ಜೆ.ಪಿ. ನಾಯಕರಾದಂಥ ಯಡಿಯೂರಪ್ಪನವರು ಸಲಹೆ ಕೊಟ್ಟರು. ಅವರು ಸಲಹೆ ಕೊಟ್ಟಿದ್ದುದು ಏನೆಂದರೆ. ನಿಮಗೆ ಅಬ್ಕಾರಿಯಲ್ಲಿ ಬರುತ್ತದೆ. ಎಕ್ಸೈಜಿನಲ್ಲಿ ಬರುತ್ತದೆ, ಅದರಲ್ಲಿ ಸ್ವಲ್ಪ ತೆಗೆದಿಡಿರಿ, ಇಲ್ಲದೇ ಹೋದರೆ ರಿಸರ್ವ್ ಬ್ಯಾಂಕ್‌ನಿಂದ ತೆಗೆದುಕೊಳ್ಳಿ. ಇಲ್ಲದೇಹೋದರೆ. ಕೇಂದ್ರಸರ್ಕಾರಕ್ಕೆ ಕೇಳೋಣ ಎಂದು ಹೇಳಿದರು, ನಿನ್ನೆ ಬೆಳಿಗ್ಗೆ ಸುಮಾರು ಎರಡು-ಎರಡೂವರೆ

ಗಂಟೆವರೆಗೂ ಇದರ ಬಗ್ಗೆ ಚರ್ಚೆಮಾಡಿ, ಏನೋ ಈ ಸರ್ಕಾರ ಮಹಾಪರಾಧ ಮಾಡಿದೆ ಎನ್ನುವಂಥ ವಾತಾವರಣ ನಿರ್ಮಾಣವಾಯಿತು. ಇವತ್ತು ಮಾನ್ಯ ವಿರೋಧಪಕ್ಷದ ನಾಯಕರು ವರ್ಗಾವರ್ಗಿಯಲ್ಲಿ ನೀವು ೧೦ ಕೋಟಿ ರೂಪಾಯಿ ಹಾಳು ಮಾಡಿದಿರಿ, ಅದೇ ದುಡ್ಡು ನೀವು ಹಾಕಬೇಕು ಎಂದರು.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಹಾಗೆ ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಪ್ರಚೋದನೆಗೆ ಒಂದು ಕಿಡಿ ಎದ್ದಾಗ ಭಗ್ ಎಂದು ಹತ್ತುತ್ತದೆ ಅದು ಸ್ವಾಭಾವಿಕ. ಏಕೆಂದರೆ, ಬಹುಶಃ ನಿಮ್ಮ ಕಾಲಕ್ಕೆ ಎಲ್ಲಾ ಸರಿಯಾಗಿತ್ತು ಎನ್ನುವಂಥ ವಾತಾವರಣ ಇದ್ದಿದ್ದರೆ, ಎರಡನೆಯವರಿಗೆ ಬುದ್ಧಿವಾದ ಹೇಳುವಂಥ ಅಧಿಕಾರ ನಿಮಗೆ ಬರುತ್ತದೆ. ನಿಮ್ಮ ಕಾಲಕ್ಕೆ ಏನಾಗಿದೆ ಅದನ್ನು ನಾನು ಈಗ ಹೇಳುವುದಕ್ಕೆ ಹೊರಟರೆ ತಿಪ್ಪೆ ಕೆದಕಿದ ಹಾಗೆ ಆಗುತ್ತದೆ. ಅದನ್ನು ಹೇಳುವ ಪರಿಸ್ಥಿತಿಯಲ್ಲಿ ಹೇಳೋಣ ಹೇಳಬಾರದು ಎಂದು ಇಲ್ಲ. ನಮ್ಮ ಬಗ್ಗೆ ನೀವು ಹೇಳಿ, ನಿಮ್ಮ ಬಗ್ಗೆ ನಾವು ಹೇಳೋಣ. ಆದರೆ ಹೇಳುವ ಕಾಲದಲ್ಲಿ ಹೇಳಬೇಕು ಮಾತ್ರ ಅಂತಹ ಸಮಸ್ಯೆ ಬಂದಾಗ ಹೇಳಬೇಕು. ರೈತರ ಸಮಸ್ಯೆ ಬಗ್ಗೆ ನಾವು ಚರ್ಚೆ ಮಾಡುತ್ತಾ ಇದ್ದೇವೆ. ಆದರೆ ಮಧ್ಯದಲ್ಲಿ ವರ್ಗಾವರ್ಗಿ ವಿಷಯವನ್ನು ತಂದು ಪ್ರಸ್ತಾಪ ಮಾಡಿದಾಗ, ಸ್ವಾಭಾವಿಕವಾಗಿ ಕಿಡಿ ನಿಮ್ಮಿಂದ ಹಾರಿದ ಹಾಗೆ ಆಯಿತು. ಆದರೂ ಇವತ್ತು ನಾನು ಸದನಕ್ಕೆ ಅಪೀಲ್ ಮಾಡಿಕೊಳ್ಳುತ್ತಾ ಇದ್ದೇನೆ. ಇಲ್ಲಿಯವರೆಗೂ ಏನು ಆಗಿದೆಯೋ ಅದಕ್ಕೆ ನಾವು ಫುಲ್‌ಸ್ಟಾಪ್ ಹಾಕಿ ಇವತ್ತು ದೀರ್ಘವಾಗಿ ಈ ವಿಚಾರವನ್ನು ಚರ್ಚೆ ಮಾಡೋಣ. ಚರ್ಚೆಗೆ ಹೆಚ್ಚು ಅವಕಾಶವಿಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ, ಊಟದ ಸಮಯಕ್ಕಿಂತ ಮೊದಲು ಹೇಳಿದ್ದೀರಿ. ಸಾಲ ಮನ್ನಾ ಆಗಬೇಕು, ರೈತರಿಗೆ ಅನುಕೂಲ ಮಾಡಿಕೊಡಬೇಕು, ರೈತರು ಕಷ್ಟದಲ್ಲಿದ್ದಾರೆ, ರೈತರು ಶೋಷಣೆಗೆ ಒಳಗಾಗಿದ್ದಾರೆ ಇದರ ಬಗ್ಗೆ ವಾದ ಮಾಡುವವರು ಯಾರೂ ಇಲ್ಲ. ಈ ಮನೆಯಲ್ಲಿ ಸಾಮಾನ್ಯವಾಗಿ ಎಲ್ಲರೂ ರೈತರ ಪಕ್ಕದಲ್ಲಿದ್ದಾರೆ. ಆದರೆ ಪ್ರಶ್ನೆ ಏನೆಂದರೆ, ಇದನ್ನು ಹೇಗೆ ಮಾಡಬೇಕು ಎನ್ನುವುದರ ಬಗ್ಗೆ ನಾವು ರಚನಾತ್ಮಕವಾಗಿ ವಿಚಾರಮಾಡಬೇಕು ಎನ್ನುವಂಥ ಮಾತನ್ನು ಹೇಳಿದ್ದೇನೆ. ಬಹುಶಃ ನಾನು ಇರಲಿಲ್ಲ, ಕ್ಷಮಿಸಬೇಕು, ನಾನು ಬರುವುದಕ್ಕೆ ಸ್ವಲ್ಪ ತಡವಾಯಿತು. ಮಾನ್ಯ ವಿರೋಧ ಪಕ್ಷದ ನಾಯಕರು ಅವೆಲ್ಲಾ ಹೇಳುವುದು ಬಿಡಿ ಅದನ್ನು ಯಾವ ರೀತಿಯಿಂದ ಮಾಡಬೇಕು. ಸರ್ಕಾರದಲ್ಲಿ ಸೋರುತ್ತಿವೆ ಅದನ್ನು ನೀವು ಸರಿ ಮಾಡಿರಿ ಅಂದರೆ ಎಷ್ಟೋ ಸರ್ಕಾರಗಳಿದ್ದಾಗ ಅಂದರೆ ಸರ್ಕಾರ ಹುಟ್ಟಿದಂದಿನಿಂದ ಹೇಳಿಕೊಂಡೇ ಬಂದಿದ್ದೇವೆ. ವಿರೋಧಪಕ್ಷದವರು ಸೋರುತ್ತದೆ, ಸೋರುತ್ತದೆ ಎಂದು ಹೇಳುತ್ತಾರೆ. ಸೋರುವುದನ್ನು ಆರು ತಿಂಗಳಲ್ಲಿ ಮುಚ್ಚುವುದಕ್ಕೆ ಆಗುವಹಾಗಿಲ್ಲ. ಎಕ್ಸೈಜ್‌ನಲ್ಲಿ ಎಷ್ಟು ಸೋರುತ್ತಿತ್ತು ಎನ್ನುವಂಥಾದ್ದು ಈ ಸಾರಿ ಬಂದಿರುವಂಥ ಲಾಭದಿಂದ ನಮಗೆ ಗೊತ್ತಾಗುತ್ತದೆ. ಅದರಲ್ಲಿ ಸೋರುತ್ತಿತ್ತೋ ಇಲ್ಲವೋ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಯಾವ ಎಕ್ಸೈಜ್ ಬಾಬಿನಲ್ಲಿ ಈ ಒಂದು ಬೆಂಗಳೂರು ಸಿಟಿಯಲ್ಲಿ ಒಂದು ಕೋಟಿ ೮೩ ಲಕ್ಷ ರೂಪಾಯಿ ಪ್ರತಿ ವರ್ಷ ಬರುತ್ತಾ ಇತ್ತು. ಬಹುಶಃ ಅದೇ ಕಂಟ್ರಾಕ್ಟರೇ ಇವತ್ತು ೬ ಕೋಟಿ ೮೦ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ನಾನು ಹೇಳುವುದೇನೆಂದರೆ, ಇದನ್ನು ಯಾವುದೋ ಮನೆಯಿಂದ ತಂದು ಕೊಡುತ್ತಾ ಇರಲಿಲ್ಲ. ಅಂದರೆ ಎಕ್ಸೈಜ್‌ನಲ್ಲಿ ಎಷ್ಟು ಹಣ ಸೋರಿ, ಟ್ರೆಜರಿಗೆ ಹೋಗುವುದು ಯಾರ್ಯಾರ ಜೇಬಿಗೆ ಹೋಗುತ್ತಿತ್ತು ಎನ್ನುವಂಥಾದ್ದನ್ನು ತಾವು ಊಹೆ ಮಾಡಬಹುದು. ಬಹುಶಃ ವಿರೋಧಪಕ್ಷದ ನಾಯಕರು ಎಕ್ಸೈಜ್‌ನಲ್ಲಿ ೪೦೦ ಕೋಟಿ ಬರುತ್ತದೆ ಎಂದು ಹೇಳಿದರು. ನಿಮಗೂ ಗೊತ್ತಾಗುತ್ತದೆ. ನಮಗೂ ಗೊತ್ತಾಗುತ್ತದೆ ಬಹುಶಃ ಮಾನ್ಯ ಹಣಕಾಸಿನ ಮಂತ್ರಿಗಳು ಎಕ್ಸೈಜ್‌ನಲ್ಲಿ ಈ ಸಲ ಎಷ್ಟು ಬರುತ್ತದೆ ಎನ್ನುವಂಥಾದ್ದನ್ನು ಹೇಳುತ್ತಾರೆ.

೩.೨೫ ಪಿ. ಎಂ.

ಹೆಂಡದಿಂದ ೬೦ ಕೋಟಿ ರೂಪಾಯಿ ನಮಗೆ ಬರುವುದು ಹೋಯಿತು, ಅದನ್ನು ಲೆಕ್ಕಕ್ಕೆ ತೆಗೆದು ಕೊಳ್ಳಬೇಕಾಗುತ್ತದೆ. ಅದರಲ್ಲಿ ಎಷ್ಟು ಬರುತ್ತದೆ ಎನ್ನುವುದನ್ನು ನೋಡೋಣ. ಎಕ್ಸೈಜ್‌ನಿಂದ ಬರುವಂಥಾದ್ದನ್ನು ಯಾವುದಕ್ಕೂ ಉಪಯೋಗ ಮಾಡುವುದು ಬೇಡ ಎಲ್ಲಾ ಸಾಲ ಮನ್ನಾ ಮಾಡುವುದಕ್ಕೆ ಹಾಕೋಣ ಎಂದು ಸದನ ಒಪ್ಪುವುದಾದರೆ, ನನ್ನ ಅಡ್ಡಿ ಏನೂ ಇಲ್ಲ. ಆದರೆ ಅದು ರಚನಾತ್ಮಕ ಸಲಹೆ ಆಗುತ್ತದೊ ಎನ್ನುವಂಥಾದನ್ನು ವಿಚಾರ ಮಾಡಬೇಕು ಎಕ್ಸೈಜ್‌ನಲ್ಲಿ ಮೊದಲು ಎಷ್ಟು ಸೋರುತ್ತಿತ್ತು, ಅದಕ್ಕೆ ಸಾಕ್ಷಿ ಇದೆಯೋ ಇಲ್ಲವೋ ತಾವೇ ವಿಚಾರ ಮಾಡಿ. ಒಂದೇ ಒಂದು ಅರಾಕ್ ಐಟಂನಲ್ಲಿ ಸುಮಾರು ೧೫೦, ೨೬೦ ಕೋಟಿ ರೂಪಾಯಿ ಖಜಾನೆಗೆ ಹೆಚ್ಚು ಬರುತ್ತದೆ ಅಂದರೆ ಪ್ರತಿ ವರ್ಷ ಈ ಹಣ ಎಲ್ಲಿ ಹೋಗುತ್ತಿತ್ತು, ಯಾರ ಜೇಬಿಗೆ ಹೋಗುತ್ತಿತ್ತು, ಎಲ್ಲಿ ಉಳಿಯುತ್ತಿತ್ತು ಇದನ್ನು ನಾವು ನೀವು ಚರ್ಚೆ ಮಾಡಬೇಕಾಗಿಲ್ಲ, ಜನತೆ ಊಹೆ ಮಾಡುತ್ತಾರೆ. ಅದು ಬೇರೆ ಮಾತು

It is not applicable to the loan given to the farmers in 1989-90 ಇದು ಅಪ್ಲಿಕೇಬಲ್ ಆಗುವುದಿಲ್ಲ. ನಾನು ಅಂಕಿಸಂಖ್ಯೆಗಳನ್ನು ಕೊಡುತ್ತೇನೆ. ೧೯೮೯–೯೦ನೇ ಸಾಲಿನಲ್ಲಿ ಸಹಕಾರ ಕ್ಷೇತ್ರದ ಮುಖಾಂತರ ರೈತರಿಗೆ ೧೮೬ ರಿಂದ ೧೯೦ ಕೋಟಿ ರೂಪಾಯಿ ಸಾಲವನ್ನು ಹಂಚ ಲಾಗಿದೆ. ಈ ದುಡ್ಡು ವಸೂಲು ಮಾಡಬೇಕೋ ಬೇಡವೋ? ಈ ಯೋಜನೆಗೂ ಮತ್ತು ಆ ದುಡ್ಡಿಗೂ ಸಂಬಂಧ ಇಲ್ಲ, ಇದು ಸ್ಪಷ್ಟವಾಗಿದೆ. ನಿನ್ನೆ ಮಾನ್ಯ ಏಕಾಂತಯ್ಯನವರು ಮಾತನಾಡುವಾಗ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಬಿ.ಜೆ.ಪಿ. ನಾಯಕರು ಹೇಳಿದರು. ಕಟಾವು ಇಲ್ಲ. ಪಟಾವು ಇಲ್ಲ, ಏನೂ ಇಲ್ಲ, ೨ನೇ ಅಕ್ಟೋಬರ್ ೧೯೮೯ರವರೆಗೆ ಯಾವುದೇ ರೀತಿಯ ಡ್ಯೂ ಇರಲಿ, ಓವರ್ ಡ್ಯೂ ಇರಲಿ, ಔಟ್‌ಸ್ಟಾಂಡಿಂಗ್ ಇರಲಿ, ಇರಲಾರದೇ ಹೋಗಲಿ ಎಲ್ಲಾ ಮನ್ನಾ ಮಾಡಬೇಕೆಂದು ಅವರು ಹೇಳಿದ್ದಾರೆ. ಆದರೆ, ತಾವು ತಮ್ಮ ನಿಲುವನ್ನು ಹೇಳಬೇಕು. ೧೯೮೯–೯೦ನೇ ಸಾಲಿನಲ್ಲಿ ಕೊಟ್ಟಿರುವ ೧೮೬ ಕೋಟಿ ರೂಪಾಯಿ ಸಾಲವನ್ನು ವಸೂಲು ಮಾಡಬೇಕೋ. ಮಾಡಬಾರದೋ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳಿದರೆ, ಮುಂದೆ ನಾವು ಯಾವುದೇ ಯೋಜನೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಮುಖ್ಯಮಂತ್ರಿಗಳು ತಡವಾಗಿ ಬಂದಿದ್ದರಿಂದ ನಾನು ಹೇಗೆ ಪ್ರಾರಂಭ ಮಾಡಿದೆ ಎನ್ನುವುದು ತಮಗೆ ಗೊತ್ತಾಗಲಿಲ್ಲ. ಸಾಲ ಮನ್ನಾ ವಿಚಾರ ಇವತ್ತು ಚರ್ಚೆಯ ವಸ್ತುವಾಗಿ ಉಳಿದಿಲ್ಲ. ಸದನದ ಎಲ್ಲ ಸದಸ್ಯರು ಮುಖ್ಯಮಂತ್ರಿಗಳನ್ನೂ ಒಳಗೊಂಡು ಎಲ್ಲರೂ ಒಪ್ಪಿಕೊಂಡಿದ್ದಾರೆ. ಒಂದು ತಾಂತ್ರಿಕ ಪ್ರಶ್ನೆಯನ್ನು ತೆಗೆದಿದ್ದೀರಿ. ಏನೆಂದರೆ, ನಮ್ಮ ಸರ್ಕಾರ ಆಡಳಿತಕ್ಕೆ ಬಂದರೆ, ಸಾಲ ಮನ್ನಾ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇವೆಂದು ತಿಳಿಸಿದ್ದೇವೆಂದು ಹೇಳಿದ್ದಾರೆ. ಅದನ್ನೇ ನಾನು ಪ್ರಾರಂಭದಲ್ಲಿ ಹೇಳಿದ್ದುದು.

(ಮಾನ್ಯ ಸದಸ್ಯರಾದ ಬಿ. ಸ್ವಾಮಿರಾವ್ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಾನು ವರ್ಗಾವರ್ಗಿ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದು ಏಕೆಂದರೆ, ೮೩ ಕೋಟಿ ರೂಪಾಯಿಗಳ ಹಣವನ್ನು ವರ್ಗಾವಣೆಗೆ ಸಂಬಂಧಪಟ್ಟಂತೆ ಟಿ.ಎ.ಡಿ.ಎ. ರೂಪದಲ್ಲಿ ಕೊಡಬೇಕಾಗಿ ಬಂದಿದೆ. ಇದು ಅಗತ್ಯವೇ ಎಂದು ಅಷ್ಟೇ ಪ್ರಶ್ನೆ ಮಾಡಿದ್ದೆ ಹೊರತು ನಿಮ್ಮ ಸರ್ಕಾರ ಕೆಟ್ಟಿದೆ. ನಮ್ಮ ಸರ್ಕಾರ ದೇವೇಂದ್ರ ಲೋಕದಿಂದ ಇಳಿದುಬಂದು ಸತ್ಯ ಹರಿಶ್ಚಂದ್ರ ಸಾಮ್ರಾಜ್ಯ ಮಾಡಿದ ಎಂದು ಹೇಳಲಿಲ್ಲ. ಒಂದೊಂದು ಸಾರಿ ಕೆಲವು ಸದಸ್ಯರುಗಳಿಗೆ ತಾವು ಹೇಳಿದ್ದೆಲ್ಲಾ ನಡೆಯುತ್ತದೆ, ಎಂದು ಆಗಿಬಿಟ್ಟರೆ, ಶಾಸನ ಸಭೆ ನಡೆಸುವುದಕ್ಕಾಗುವುದಿಲ್ಲ, ಅದಕ್ಕೆ ಬೇರೆ ವೇದಿಕೆ ಮಾಡೋಣ, ಅಲ್ಲಿ ಚರ್ಚೆ ಮಾಡೋಣ, ಆದರೆ ಕೆಲವು ಸದಸ್ಯರನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಸಭಾನಾಯಕರಿಗೆ ಹೇಳುತ್ತೇನೆ. ತಾವು ಟೆಲೆಕ್ಸ್ ಮೂಲಕ ತಿಳಿದುಕೊಳ್ಳುವುದಕ್ಕೆ ಸಾಧ್ಯವಿದ್ದರೆ ದೆಹಲಿಗೆ ಕಾಂಟಾಕ್ಟ್ ಮಾಡಿ ಮಾತನಾಡಿ, ನಾನು ಅಂದು ಕೊಂಡಿರುವ ಪ್ರಕಾರ ಇವತ್ತು ಪ್ರಜಾವಾಣಿ ಮತ್ತಿತರ ಪತ್ರಿಕೆಗಳಲ್ಲಿ ಬಂದಿರುವ ಪ್ರಕಾರ, ಈಗ ತಾನೇ ಕೆಲವರಿಂದ ಅಸರ್ಟೈನ್ ಮಾಡಿಕೊಂಡ ಪ್ರಕಾರ, ಬಹಳ ಸ್ಪಷ್ಟವಾಗಿರುವಂಥಾದ್ದು ೧೯೮೯ರ ಅಕ್ಟೋಬರ್ ೨ರವರೆಗೆ ಬಾಕಿ ಇರುವ ೧೦,೦೦೦ ರೂಪಾಯಿಗಳವರೆಗಿನ ಸಾಲಕ್ಕೆ ಸಾಲ ಮನ್ನಾ ಸೌಲಭ್ಯ ಎಂದು ಅಧಿಕೃತ ಪ್ರಕಟಣೆಯೊಂದು ಇದು ತಿಳಿಸಿದೆ, ಎಂದು ಇದೆ. ಇದರ ಉದ್ದೇಶ ಏನೆಂದರೆ, ಮೊದಲು, ಅವೊತ್ತು ಡಿಫಾಲ್ಟರ್ ಆಗಿದ್ದರೆ, ಅಂತಹವರಿಗೆ ಅನ್ವಯವಾಗುವುದಿಲ್ಲ ಎಂದು ಇತ್ತು ಎಲ್ಲರೂ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ಕನ್‌ವಿನ್ಸ್ ಮಾಡಿದ ಮೇಲೆ ಅವೊತ್ತು ಯಾರು ಸಾಲಗಾರರಾಗಿದ್ದಾರೆ ಅವರೆಲ್ಲರಿಗೂ ಅನ್ವಯವಾಗುತ್ತದೆ ಎನ್ನುವಂಥಾದ್ದನ್ನು ಕೇಂದ್ರಸರ್ಕಾರ ಸ್ಪಷ್ಟಪಡಿಸಿದೆ ಎಂದು ನಾನು ಅಂದುಕೊಂಡಿದ್ದೇನೆ. ದಯಮಾಡಿ ಇದರ ಬಗ್ಗೆ ಒಂದು ಕ್ಲಾರಿಫಿಕೇಷನ್ ಕೊಡಬೇಕು. ಎರಡನೆಯದು, ಮಾನ್ಯ ಸಭಾ ನಾಯಕರಲ್ಲಿ ವಿನಂತಿಮಾಡಿಕೊಳ್ಳುವುದು ಏನೆಂದರೆ, ತಾವು ಹೇಳುವ ಅಭಿಪ್ರಾಯದ ಪ್ರಕಾರ ಅವೊತ್ತು ಬಾಕಿದಾರನಾಗಿರುವವನಿಗೆ ಇದು ಅನ್ವಯವಾಗು ತ್ತದೆ ಎಂದು ಕೇಂದ್ರಸರ್ಕಾರ ಹೇಳುವುದಾದರೆ, ನಾನು ತಮ್ಮಲ್ಲಿ ಅಲ್ಲದೆ ಇನ್ನು ಯಾರನ್ನು ಕೇಳಲಿ. ಎರಡನೇ ನವೆಂಬರ್ ೧೯೮೯ಕ್ಕೆ ಬಾಕಿದಾರ ಎನ್ನುವುದು ನಿಮ್ಮ ದೃಷ್ಟಿಯಿಂದ ಡಿಫಾಲ್ಟರ್ ಆಗಿರುವವನಿಗೆ ಅನ್ವಯವಾಗುತ್ತದೆ ಎನ್ನುವುದಾದರೆ ನಮ್ಮ ರಾಜ್ಯದಲ್ಲಿ ಆ ರೀತಿ ಎಷ್ಟು ಪರಸೆಂಟ್ ರೈತರಿಗೆ ಅನುಕೂಲ ವಾಗುತ್ತದೆ, ನಮ್ಮ ಸರ್ಕಾರದ ಬೊಕ್ಕಸದಿಂದ ಎಷ್ಟು ಕೊಡಬೇಕಾಗುತ್ತದೆ ಎಂದು ದಯಮಾಡಿ ಅಂಕಿಅಂಶಗಳನ್ನು ಹೇಳಿದರೆ ಚರ್ಚೆ ಮಾಡಲಿಕ್ಕೆ ಅನುಕೂಲವಾಗುತ್ತದೆ. ನನ್ನ ಅಭಿಪ್ರಾಯದ ಪ್ರಕಾರ ನೂರಕ್ಕೆ ಇಬ್ಬರು, ರೈತರಿಗೆ ಅನ್ವಯವಾಗುವುದಿಲ್ಲ. ಆದ್ದರಿಂದ, ಇದರ ಬಗ್ಗೆ ಚರ್ಚೆ ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ, ಅದಕ್ಕೋಸ್ಕರ ತಾವು ಫಿಗರ್ಸ್ ಹೇಳಿ ಎಂದು ಕೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಇವೊತ್ತು ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದನ್ನು ನಾನು ಬಹುಶಃ ಉತ್ತರದಲ್ಲಿ ಹೇಳಬೇಕೆಂದು ಇದ್ದೆ. ಮಧ್ಯದಲ್ಲಿ ಕೇಳಿದ್ದೀರಿ. ಅದಕ್ಕೆ ಹೇಳಲೇ

ಬೇಕಾಗುತ್ತದೆ. ಕೇಂದ್ರದಿಂದ ಹೊಸ್ಸೆ ಹೊಸ್ಸೆ ಯೋಜನೆ ಬಂದಿದೆ. ಅದನ್ನು ಕಾಪಿ ಮಾಡಿ ನಿಮ್ಮ ಕಡೆ ಕಳುಹಿಸಿದ್ದೇವೆ. ಮತ್ತು ಈ ಯೋಜನೆ ಬಗ್ಗೆ ಏನಾದರೂ ಸಂಶಯಗಳು ಇದ್ದರೆ, ಕ್ಲಾರಿಫಿಕೇಷನ್ ಬೇಕಾದಾಗ, ನಮ್ಮ ಅಧಿಕಾರಿಗಳನ್ನು ಅವರು ಕರೆಯಿಸಿದ್ದರು. ನಮ್ಮ ಅಧಿಕಾರಿಗಳು ಹೋನ್ನೆ ಐದಾರು ದಿವಸಗಳ ಮೊದಲು ಹೋಗಿ ಚರ್ಚೆ ಮಾಡಿಕೊಂಡು ಬಂದಿದ್ದಾರೆ, ಅವರು ಕ್ಲಾರಿಫಿಕೇಷನ್ ಹೇಳಿ ಬಂದಿದ್ದಾರೆ, ಡಿಸ್‌ಕಷನ್ ಆಗಿದೆ, ಅವರು ಸ್ಪಷ್ಟವಾಗಿ ಹೇಳಿರುವಂಥಾದ್ದು ಏನು ಅಂದರೆ, ಮನ್ನಾ ಮಾಡುವ ಪ್ರಶ್ನೆ ಬರೀ ಓವರ್ ಡ್ಯೂ ಇರುವ ಸಾಲಕ್ಕೆ ಬರುತ್ತದೆಯೇ ಹೊರತಾಗಿ ಉಳಿದಿರುವುದಕ್ಕೆ ಬರುವುದಿಲ್ಲ ಅನ್ನುವಂಥಾದ್ದು. ಅವರು ಹೇಳಿದ್ದಾರೆ. ಅದು ಈ ಯೋಜನೆಯಲ್ಲಿ ಬಂದು ಬಿಟ್ಟಿದೆ. ನೀವು ಇವೊತ್ತು. ಬೆಳಿಗ್ಗೆ ಏನು ಪತ್ರಿಕೆಯಲ್ಲಿ ಬಂದಿದೆ ಎನ್ನುವುದನ್ನು ಹೇಳಿದಿರಿ ನಾನು ಬೆಳಿಗ್ಗೆ ಪತ್ರಿಕೆಯನ್ನು ಓದಿದ್ದೇನೆ. ಅಲ್ಲಿಂದ ಏನೂ ಬಂದಿಲ್ಲ. ಪತ್ರಿಕೆಯಲ್ಲಿ ಬಂದಿದ್ದರ ಮೇಲೆ ನಾವು ನಿರ್ಬರವಾಗಿ ಏನೂ ಚರ್ಚೆ ಮಾಡಲಿಕ್ಕೆ ಆಗುವುದಿಲ್ಲ. ಬೆಳಿಗ್ಗೆ ಪತ್ರಿಕೆಯಲ್ಲಿ ಬಂದಿರುವಂಥಾದ್ದು ಏನೆಂದರೆ ಈ ಯೋಜನೆ ಅವರು ಏನು ನಿರೂಪಣೆ ಮಾಡಿದ್ದರು ಈ ಯೋಜನೆಯಲ್ಲಿ ಸಾಲ ೧೦ ಸಾವಿರಕ್ಕೂ ಮಿಕ್ಕಿರಬಾರದು, ೧೦ ಸಾವಿರಕ್ಕೂ ಮೀಕ್ಕಿದ್ದರೆ ಈ ಯೋಜನೆ ಅನ್ವಯವಾಗುವುದಿಲ್ಲ ಎನ್ನುವ ಪರಿಸ್ಥಿತಿ ಇತ್ತು. ಇವೊತ್ತು ಯು.ಎನ್.ಐ. ರಿಪೋರ್ಟ್ ಬಂದ ಪ್ರಕಾರ ಸಾಲ ಎಷ್ಟೇ ಇದ್ದರೂ ಈ ಯೋಜನೆ ಅನ್ವಯವಾಗುತ್ತದೆ ಎಂದು ಅಷ್ಟು ಹೇಳಿದ್ದಾರೆಯೇ ಹೊರತು ಡಿಫಾಲ್ಟರ್ ಪ್ರಶ್ನೆಯಲ್ಲಿ ಅವರು ಯಾವುದೂ ರಿಲ್ಯಾಕ್ಸೇಷನ್ ತೋರಿಸಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ೨ನೇ ಅಕ್ಟೋಬರ್ ೧೯೮೯ಕ್ಕೆ ಡಿಫಾಲ್ಟರ್ ಕಂಡೀಷನ್ ಏನು ಇತ್ತು, ಸೆಕೆಂಡ್ ಅಕ್ಟೋಬರ್ ೧೯೮೯ಕ್ಕೆ ಡಿಫಾಲ್ಟರ್ ಇರಬೇಕು. ಮತ್ತು ಆ ಸಾಲ ಹತ್ತು ಸಾವಿರ ರೂಪಾಯಿಗಳಿಗೆ ಮೀರಿರಬಾರದು. ಈ ಎರಡು ಕಂಡಿಷನ್ ಇತ್ತು. ಈಗ ಒಂದು ಕಂಡೀಷನ್ ಅವರು ರಿಲ್ಯಾಕ್ಸ್ ಮಾಡಿದ್ದಾರೆ. ಸಾಲ ಎಷ್ಟೇ ಇರಬಹುದು, ಅವೊತ್ತು ಡಿಫಾಲ್ಟರ್ ಇದ್ದರೆ ಎಲ್ಲಾ ಬಿಟ್ಟು ಬಿಡೋಣ. ಎಂದು ಒಪ್ಪಿಕೊಂಡಿದ್ದಾರೆಂದು ಪತ್ರಿಕೆಯಲ್ಲಿ ಓದಿದ್ದೇನೆ. ಆದರೆ ಸೆಕೆಂಡ್ ಅಕ್ಟೋಬರ್ ೧೯೮೯ಕ್ಕೆ ಡಿಫಾಲ್ಟರ್ ಆಗಿರಬೇಕು. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ. ೧೯೮೯-೯೦ರಲ್ಲಿ, ರೈತರು ಏನು ಸಾಲ ಪಡೆದಿದ್ದಾರೆ ಅದು ಡ್ಯೂ ಆಗುವ ಹಾಗೆ ಇಲ್ಲ, ಸೆಕೆಂಡ್ ಅಕ್ಟೋಬರ್ ೧೯೮೯ಕ್ಕೆ ಡಿಫಾಲ್ಟರ್ ಆಗುವ ಪ್ರಶ್ನೆಯೇ ಇಲ್ಲ. ಅದಕ್ಕಾಗಿ ಒಂದು ಸ್ಕೀಮ್ ಏನಿದೆ ೧೯೮೯-೯೦ಕ್ಕೆ ರೈತ ಏನು ಸಾಲ ಪಡೆದಿದ್ದಾನೆ ಅಂದಮೇಲೆ ನೀವು ಅದಕ್ಕೆ ಅಪ್ಲೈ ಆಗುತ್ತದೆ. ಅದು ಅಪ್ಲೈ ಆಗುವುದಿಲ್ಲ ಅಂದ ಮೇಲೆ ನಾವು ರಿಕವರಿ ಮಾಡಿ ಎಂದು ಹೇಳುತ್ತೇವೆ. ರಿಕವರಿ ಮಾಡಿ ಬಿಡಲಾರದೇ ಹೋದರೆ ಮುಂದಿನ ವರ್ಷದ ಸಾಲವನ್ನು ಅವರು ಕೊಡುವುದಕ್ಕೆ ತಯಾರು ಇಲ್ಲ. ಅದು ಅಪ್ಲೈ ಆಗಲಿ, ಬಿಡಲಿ, ನಮ್ಮ ಸ್ಟ್ಯಾಂಡ್ ಏನೆಂದರೆ ಅಪ್ಲೈ ಮಾಡಿರಿ ಎಂದು ಹೇಳುವುದು ಅದು ಬೇರೆ. ಈಗ ನೀವು ಹೇಳುವುದು ಬೇರೆ. ಇವೊತ್ತು ವಿರೋಧಪಕ್ಷದ ನಾಯಕರ ಸರ್ಕಾರವೇ ಕೇಂದ್ರದಲ್ಲಿದೆ. ಇದು ಅವರ ಸರ್ಕಾರ ಮಾಡಿರುವ ಯೋಜನೆ. ಅವರ ಪಕ್ಷದ ಸರ್ಕಾರದವರು ೧೯೮೯-೯೦ರ ಸಾಲ ವಸೂಲು ಮಾಡಿರಿ ಎಂದು ಕಟ್ಟಪ್ಪಣೆ ಹಾಕಿದ್ದಾರೆ. ಅದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನನಗೂ ಕೂಡ ಈ ವಿಚಾರದಲ್ಲಿ ದ್ವಂದ್ವ ಇಲ್ಲ. ಸ್ಪಷ್ಟವಾಗಿ ಕೇಂದ್ರಸರ್ಕಾರ ಏನು ಸ್ಕೀಮು ತಯಾರು ಮಾಡಿದೆ ಅದನ್ನು ಅಕ್ಷರಶಃ ತಾವು ಒಪ್ಪಿಕೊಳ್ಳಿ. ಉಳಿದಿರ ತಕ್ಕಂತಾದುದರ ಬಗ್ಗೆ ಚರ್ಚೆ ಮಾಡಬೇಕೆಂದು ತಾವು ಆಲೋಚನೆ ಮಾಡಿ. ನಿಮ್ಮ ಜೊತೆಗೆ ನಾವು ಇದ್ದೇವೆ ಎಂದು ಪ್ರಾರಂಭದಲ್ಲಿ ಹೇಳಿದ್ದೇನೆ.

ಕೇಂದ್ರ ಸರ್ಕಾರದ ಯೋಜನೆಯಿಂದ ಎಷ್ಟು ಲಾಭ ಬರುತ್ತದೆ ಅದನ್ನು ಪಡೆಯುವುದಕ್ಕೆ ಪ್ರಯತ್ನ ಮಾಡೋಣ, ಮತ್ತೆ ಉಳಿದುದನ್ನು ಪಡೆಯಲು ಚರ್ಚೆ ಮಾಡೋಣ. ಈ ಸ್ಕೀಮ್‌ನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧವಾಗದಿದ್ದರೆ ದ್ವಂದ್ವಗಳಾಗುತ್ತದೆ. ೧೯೮೩ರಿಂದ ೧೯೮೭-೮೮ರ ವರೆಗೆ ಸುಮಾರು ೧೬೦ ಕೋಟಿಯಷ್ಟು ಬಡ್ಡಿ ಮನ್ನಾ ಮತ್ತು ಸಬ್ಸಿಡಿ ಏನು ಕೊಟ್ಟಿತ್ತು ಆ ಸ್ಕೀಂ ಏನಿದೆ ಶೇಕಡ ೭ರಷ್ಟು ಕೊಡತಕ್ಕಂಥಾದ್ದು ಇದು ಅಂತಿಮ ಎಂದು ಹೇಳೋಣ. ಸಣ್ಣ ಮತ್ತು ಅತೀ ಸಣ್ಣ ರೈತರು ಹಾಗೂ ಆರ್ಟಿಸಾನ್ಸ್‌ಗೆ ಬಡ್ಡಿಯಲ್ಲಿ ರಿಯಾಯಿತಿಯನ್ನು ಕೊಡುತ್ತೇವೆಂದು ತಾವು ತಮ್ಮ ಆಯವ್ಯಯದಲ್ಲಿ ಪ್ರತಿಪಾದನೆ ಮಾಡಿದ್ದೀರಿ. ಇದಕ್ಕೆ ನಬಾರ್ಡ್‌ನವರು ಅಬ್ಜೆಕ್ಷನ್ ಹಾಕಿದರು. ಯಾವ ರೂಪದಲ್ಲಿ ರಿಯಾಯಿತಿ ಕೊಡಬೇಕೆಂಬ ಬಗ್ಗೆ ಹೊಸ ಸ್ಕೀಮ್ ಅನ್ನು ತಯಾರು ಮಾಡುತ್ತಿದ್ದೀರಿ, ಸಂತೋಷ. ರೈತರಿಗೆ ಯಾವುದಾದರೂ ಒಂದು ರೂಪದಲ್ಲಿ ಲಾಭ ಸಿಗುವುದಾದರೆ ಅದಕ್ಕೆ ನಮ್ಮ ವಿರೋಧವಂತೂ ಇಲ್ಲ. ಮತ್ತೊಂದು ದೊಡ್ಡ ಸಮಸ್ಯೆ ಇದೆ. ಸೊಸೈಟಿಗಳ ಚುನಾವಣೆಗಳಾಗುತ್ತವೆಂದು ತಾವು ಆಗಲೇ ಹೇಳಿದ್ದೀರಿ. ಪ್ರೈಮರಿ ಲೆವೆಲ್‌ನಲ್ಲಿ ಜೂನ್‌ನಲ್ಲಿ, ತಾಲ್ಲೂಕ್

ಲೆವೆಲ್‌ಗೆ ಜುಲೈನಲ್ಲಿ, ಡಿಸ್ಟ್ರಿಕ್ಟ್ ಲೆವೆಲ್‌ಗೆ ಆಗಸ್ಟ್‌ನಲ್ಲಿ, ಅಪೆಕ್ಸ್ ಲೆವೆಲ್‌ಗೆ ಸೆಪ್ಟೆಂಬರ್ ತಿಂಗಳಲ್ಲಿ ಚುನಾವಣೆಗಳಾಗುತ್ತವೆ ಎಂದು ಹೇಳಿದ್ದೀರಿ. ಆದರೆ ಸಹಕಾರಿ ಸಂಸ್ಥೆಗಳ ಕಾಯಿದೆಯ ವ್ಯಾಪ್ತಿಯೊಳಗೆ ಮಾಡುವುದಾದರೆ ಚುನಾವಣೆಗೆ ಎಷ್ಟು ಸೊಸೈಟಿಗಳು ಸಿಗುತ್ತವೆ ಎಂಬುದು ನನಗಂತೂ ಗೊತ್ತಿಲ್ಲ. ಯಾವ ಸೊಸೈಟಿಗಳೂ ಸಿಕ್ಕದೇ ಇರಬಹುದು. ಎಲ್ಲವೂ ಡಿಫಾಲ್ಟರ್ ಆಗಿವೆ, ಮತದಾರರು ಕೂಡ ಡಿಫಾಲ್ಟರ್ ಆಗಿದ್ದಾರೆ. ಇದರಿಂದಾಗಿ ಚುನಾವಣೆಗಳು ನಡೆಯುವುದಕ್ಕೆ ಆಗುವುದಿಲ್ಲ. ಪ್ರತ್ಯೇಕವಾಗಿ ಕೂಡ ಮತವನ್ನು ಕೊಡುವುದಕ್ಕಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಚುನಾವಣೆಯನ್ನು ನಡೆಸುವುದಕ್ಕಾಗುವುದಿಲ್ಲ. ನಾನು ತಮ್ಮಲ್ಲಿ ಸಲಹೆ ಮಾಡುತ್ತೇನೆ. ಮಲೆನಾಡು ಪ್ರದೇಶದಲ್ಲಿ ಈಗಾಗಲೇ ಮಳೆ ಪ್ರಾರಂಭವಾಗಿದೆ. ಅಂಥಾದ್ದರಲ್ಲಿ ಚುನಾವಣೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಚುನಾವಣೆಗಳನ್ನು ಅಕ್ಟೋಬರ್, ನವೆಂಬರ್, ಡಿಸೆಂಬರ್‌ಗೆ ಪೋಸ್ಟ್‌ಪೋನ್ ಮಾಡುವುದಕ್ಕೆ ಸಾಧ್ಯವಿದೆಯೋ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗಿರತಕ್ಕಂತಹ ಸ್ಥಿತಿಯಿಂದ ತಪ್ಪಿಸಿಕೊಳ್ಳಬೇಕೆನ್ನುವುದಾದರೆ ಅಕ್ಟೋಬರ್ ೨, ೧೯೮೯ರಂದು ಯಾವ ಸ್ಕೀಮನ್ನು ನೀಡಿದ್ದಾರೆ, ಆ ಒಟ್ಟು ಸ್ಕೀಮ್ ಅನ್ನು ಒಪ್ಪಿಕೊಂಡು ಅದರಿಂದ ಲಾಭ ಪಡೆಯುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡೋಣ. ಸಹಕಾರಿ ಸಂಸ್ಥೆಗಳು ಮುಚ್ಚಿ ಬೀಳುವುದರಿಂದಾಗಿ, ೫೦-೬೦ ಸಾವಿರ ಜನ ನೌಕರರು ಏನು ಇದ್ದಾರೆ ಅವರು ನೌಕರಿ ಕಳೆದುಕೊಳ್ಳತಕ್ಕಂತಹ ಸ್ಥಿತಿ ಬಂದು ಮತ್ತೊಂದು ವಾತಾವರಣ ಸೃಷ್ಟಿಯಾಗುವಂತಹ ಪರಿಸ್ಥಿತಿ ಇದೆ, ಅದನ್ನು ತಪ್ಪಿಸಬೇಕಾದರೆ, ತಾವು ಏನಾದರೂ ಒಂದು ನಿರ್ಧಾರವನ್ನು ಮಾಡಬೇಕು, ಇವತ್ತು ನೀವು ಈ ಮಾತನ್ನು ಹೇಳಬೇಕೆಂದು ಹೇಳಿ ನಾನು ತಮ್ಮಲ್ಲಿ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ (ಹಿರೇಕೆರೂರು).—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಸುದೀರ್ಘವಾಗಿ ಅನೇಕ ಬಾರಿ ಚರ್ಚೆ ಮಾಡಿದ್ದೇವೆ. ನಿನ್ನೆ ಇವತ್ತು ಸಹ ಚರ್ಚೆಯಾಗಿದೆ. ನಾನು ಕೆಲವೊಂದು ವಿಚಾರಗಳನ್ನು ಈ ಸಭೆಯ ಮುಂದಿಡಲಿಕ್ಕೆ ಇಚ್ಛಿಸುತ್ತೇನೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸಾಲ ಮನ್ನಾ ಮಾಡುವುದು ಅವಶ್ಯಕತೆ ಇದೆ ಎನ್ನುವ ಮಾತನ್ನು ಪದೇ ಪದೇ ಹೇಳಿದ್ದಾರೆ. ಈ ಸದನವೂ ಸಹ ಈ ವಿಚಾರವನ್ನು ಒಪ್ಪಿದೆ. ಸಾಲ ಮನ್ನಾದ ಬಗ್ಗೆ ಸಲಹೆಗಳನ್ನು ಮಾತ್ರ ಹೇಳಿ ಎನ್ನುವ ಮಾತನ್ನು ಈಗಾಗಲೇ ಹೇಳಿದ್ದಾರೆ. ಇವತ್ತಿನ ದಿವಸ ರೈತರ ಸಾಲ ಮನ್ನಾ ಆಗತಕ್ಕಂಥಾದ್ದು ಅವಶ್ಯ ಇಲ್ಲವೆಂದು ಅನೇಕ ಸ್ನೇಹಿತರ ಅಭಿಪ್ರಾಯ ಇದೆ ಎಂದು ನಾನು ಭಾವಿಸಿದ್ದೇನೆ. ರೈತರ ಸಾಲವನ್ನು ಮನ್ನಾ ಮಾಡಿದರೆ ಸರ್ಕಾರ ಉಳಿಯುವುದಿಲ್ಲ, ರಾಷ್ಟ್ರ ಉಳಿಯುವುದಿಲ್ಲ ಎನ್ನುವ ಅಭಿಪ್ರಾಯ ಅನೇಕ ಅಧಿಕಾರಿಗಳಿಗೆ ಹಾಗೂ ಶಾಸನ ಸಭೆಯ ಹಾಗೂ ಪಾರ್ಲಿಮೆಂಟ್ ಸದಸ್ಯರಿಗೆ ಇರಬಹುದು. ಆದರೆ ನನ್ನ ಅಭಿಪ್ರಾಯದಲ್ಲಿ ಈ ರೈತರ ಸಾಲವನ್ನು ಮನ್ನಾ ಮಾಡಿದರೆ ರೈತರಿಗೆ ಉಪಕಾರ ಮಾಡಿದಂತಾಗುವುದಿಲ್ಲ. ಈ ರಾಜ್ಯದ ಅಭಿವೃದ್ಧಿಯಾಗಬೇಕಾದರೆ ಅನೇಕ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಮಾಡಬೇಕಾದರೆ ಹಣ ಬೇಕು, ಸಾಲ ಸೋಟು ಆದರೆ ಅಭಿವೃದ್ಧಿ ಮಾಡುವುದು ಹೇಗೆ ಎನ್ನುವಂತಹ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಅದೇ ಮಾತನ್ನು, ಅದೇ ಅರ್ಥದಲ್ಲಿ ಹೇಳಬೇಕಾದರೆ ನಮ್ಮ ಭಾರತ ದೇಶದಲ್ಲಿ ಪ್ರಜಾಪ್ರಭುತ್ವ ಬಂದು ೪೨ ವರ್ಷಗಳು ಕಳೆದರೂ ಸಹಿತ ಇದೇ ವಿಚಾರವನ್ನು ಇಟ್ಟುಕೊಂಡು ರಾಷ್ಟ್ರ ಮಟ್ಟದ ಮತ್ತು ರಾಜ್ಯಮಟ್ಟದಲ್ಲಿ ಅಧಿಕಾರ ನಡೆಸಿದಂತಹವರು ರೈತರ ಬಗ್ಗೆ ಯಾವುದೇ ಚಿಂತನೆಯನ್ನು ಮಾಡಲಿಲ್ಲ. ಬೆಳೆಯನ್ನು ಬೆಳೆಯತಕ್ಕ ಬೆಳೆಗಾರರ ಬಗ್ಗೆ ಯೋಚನೆಯನ್ನೇ ಮಾಡಲಿಲ್ಲ. ರಾಷ್ಟ್ರದಲ್ಲಿ ಹಸಿರು ಕ್ರಾಂತಿ ಯಾವ ರೀತಿ ಆಗಬೇಕು, ಕೃಷಿ ಉತ್ಪಾದನೆಯನ್ನು ಯಾವ ರೀತಿ ಹೆಚ್ಚು ಮಾಡಬೇಕು, ದೇಶದಲ್ಲಿ ಒಪ್ಪೊತ್ತು ಊಟಕ್ಕೂ ಗತಿ ಇಲ್ಲದವರಿಗೆ ಅನ್ನವನ್ನು ಕೊಡಬೇಕಾದರೆ ಪಂಚವಾರ್ಷಿಕ ಯೋಜನೆಯಲ್ಲಿ ಯಾವುದಕ್ಕೆ ಹೆಚ್ಚಿನ ಮಹತ್ವ ಕೊಡಬೇಕು, ಬೆಳೆಯನ್ನು ಬೆಳೆಯತಕ್ಕ ಬೆಳೆಗಾರನಿಗೆ ಯಾವ ರೀತಿ ಪ್ರೋತ್ಸಾಹ ನೀಡಬೇಕೆಂಬ ಬಗ್ಗೆ ಯೋಚನೆಯನ್ನೇ ಮಾಡಲಿಲ್ಲ. ಇದರಿಂದಾಗಿ ಕೃಷಿ ಉತ್ಪಾದನೆಯನ್ನು ಮಾಡತಕ್ಕ ರೈತನ ಪರಿಸ್ಥಿತಿ ಏನಾಯಿತು ಎಂದರೆ, ಅವನ ಬೆಳೆಗೆ ತಕ್ಕ ವೈಜ್ಞಾನಿಕ ಬೆಲೆ ಸಿಕ್ಕಲಿಲ್ಲ, ಸಾಲ ಮರುಪಾವತಿ ಮಾಡುವಂಥ ಆರ್ಥಿಕ ಸ್ಥಿತಿ ರೈತನಿಗೆ ಬರಲಿಲ್ಲ. ಈಗ ರೈತನಿಗೆ ಸರಬರಾಜು ಮಾಡುತ್ತಿರುವ ಬೀಜ, ಗೊಬ್ಬರಗಳ ಧಾರಣೆಯನ್ನು ನೋಡಿದರೆ ಒಂದಕ್ಕೆ ಹತ್ತರಷ್ಟು ಬೆಲೆ ಹೆಚ್ಚಾಗಿದೆ. ಆದರೆ ಅವನು ಅಷ್ಟೆಲ್ಲಾ ಖರ್ಚುಮಾಡಿ ಬೆಳೆದಂಥ ಮಾಲಿಗೆ ಮಾರುಕಟ್ಟೆಯಲ್ಲಿ ಒಂದಕ್ಕೆ ಎರಡರಷ್ಟು ಕೂಡ ಬೆಲೆ ಹೆಚ್ಚಾಗಿಲ್ಲ. ರೈತನ ಬೆಳೆಗೆ ವೈಜ್ಞಾನಿಕ ಬೆಲೆ ಸಿಕ್ಕುತ್ತಿಲ್ಲವೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದವರೂ, ಜನತೆ ಕೂಡ ಇದನ್ನು ಒಪ್ಪಿದ್ದಾರೆ. ಇವತ್ತು ಪ್ರಜಾಪ್ರಭುತ್ವದಲ್ಲಿ

ರೈತನ ಶೋಷಣೆಯಾಗುತ್ತಿದೆ. ಇವಕ್ಕೆಲ್ಲಾ ಕಾರಣ ಕಳೆದ ೪೨ ವರ್ಷಗಳಿಂದ ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಯಾವ ಜನರೂ ಕೂಡ ಕೃಷಿ ಬೆಳೆಗಾರರ ಬಗ್ಗೆ ಯೋಚನೆಯನ್ನೇ ಮಾಡದಿದ್ದುದರಿಂದಾಗಿ ಇವತ್ತು ರೈತ ಸಾಲಗಾರನಾಗಿದ್ದಾನೆ, ರೈತ ದಿವಾಳಿತನದ ಅಂಚಿನಲ್ಲಿದ್ದಾನೆ ಎಂಬುದನ್ನು ನಾವೆಲ್ಲರೂ ಮನಗಂಡಿದ್ದೇವೆ. ಆದಕ್ಕಾಗಿ ಇವತ್ತು ಸಾಲ ಮನ್ನಾ ಮಾಡತಕ್ಕಂಥಾದ್ದು ಅನಿವಾರ್ಯವಾಗಿದೆ. ಕಳೆದ ೪೨ ವರ್ಷಗಳಿಂದಲೂ ಅಧಿಕಾರಕ್ಕೆ ಬಂದವರು ಯಾರೂ ಕೂಡ ಅವನ ಬಗ್ಗೆ ಯೋಚನೆಯನ್ನು ಮಾಡದಿದ್ದರೂ, ಕೊಡಬೇಕಾದ ಸೌಲಭ್ಯಗಳನ್ನು ಕೊಡದಿದ್ದರೂ, ಪ್ರಕೃತಿಯ ವಿಕೋಪದಿಂದ ಅತಿವೃಷ್ಟಿ ಅನಾವೃಷ್ಟಿ ತಲೆದೋರಿದರೂ ಆತನಿಗೆ ಯಾವುದೇ ಪರಿಹಾರವನ್ನೂ ಕೊಡಲಿಲ್ಲ. ಇವತ್ತು ಅವನ ಬೆಳೆಗೆ ಯೋಗ್ಯ ಬೆಲೆ ಸಿಗದೇ ಇದ್ದರೂ ಸಹ ಪರಿಹಾರವನ್ನು ಕೊಡುವಂಥ ಯೋಜನೆಯನ್ನೇ ಹಾಕಿಕೊಳ್ಳಲಿಲ್ಲ. ರಾಜ್ಯಮಟ್ಟದಲ್ಲಾಗಲಿ, ರಾಷ್ಟ್ರಮಟ್ಟದಲ್ಲಾಗಲಿ ಎಲ್ಲಿಯವರೆಗೆ ರೈತನು ಬೆಳೆದಂಥ ಮಾಲಿಗೆ ವೈಜ್ಞಾನಿಕ ಬೆಲೆ ಸಿಕ್ಕುವುದಿಲ್ಲ. ವೈಜ್ಞಾನಿಕ ಬೆಲೆಯನ್ನು ದೊರಕಿಸುವ ಬಗ್ಗೆ ಯೋಜನೆಯನ್ನು ಹಾಕಿಕೊಳ್ಳುವುದಿಲ್ಲ ಅದುವರೆಗೂ ಈ ದೇಶದ ರೈತನ ಉದ್ಧಾರವಾಗುವುದಿಲ್ಲ. ರೈತನು ಹೆಚ್ಚು ಬೆಳೆಯನ್ನು ಬೆಳೆಯಬೇಕೆಂದು ಹೇಳುತ್ತೇವೆ, ಆದರೆ ಇವತ್ತು ಅವನು ಸಾಲಗಾರನಾಗಿದ್ದಾನೆ. ಇದಕ್ಕೆ ಕಾರಣ ಸರ್ಕಾರ. ಅದು ರಾಜ್ಯ ಸರ್ಕಾರವಿರಬಹುದು, ಕೇಂದ್ರ ಸರ್ಕಾರವಿರಬಹುದು ನಮ್ಮ ಭಾರತ ದೇಶದಲ್ಲಿ ಕೃಷಿ ಬೆಳೆಗಾರರ ಬಗ್ಗೆ ಕಳಕಳಿಯನ್ನು ಯಾವ ಸರ್ಕಾರವೂ ಹೊಂದಿರಲಿಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದರೆ ಈಗ ಕೇಂದ್ರದಲ್ಲಿ ಬಂದಿರತಕ್ಕ ಸರ್ಕಾರ ತನಗೆ ಎಷ್ಟೇ ಆರ್ಥಿಕ ತೊಂದರೆ ಇದ್ದರೂ ಕೂಡ ಸಧ್ಯದ ಪರಿಸ್ಥಿತಿಯಲ್ಲಿ ರೈತರಿಗಿರತಕ್ಕ ಆರ್ಥಿಕ ದುಸ್ಥಿತಿಯನ್ನು ಮನಗಂಡು, ರೈತರಿಗಾಗಿರತಕ್ಕ ಆರ್ಥಿಕ ಅನ್ಯಾಯವನ್ನು ಸರಿಪಡಿಸುವುದಕ್ಕೆ ತಾನೇ ಮುಂದೆ ಬಂದಿದೆ ನಿನ್ನೆಯ ದಿವಸ ಗುಜರಾತಿನಲ್ಲಿ ೪೦೦ ಕೋಟಿ ರೂಪಾಯಿಗಳ ರೈತರ ಸಾಲವನ್ನು ಮನ್ನಾ ಮಾಡಲು ಘೋಷಣೆಯನ್ನು ಮಾಡಿದೆ, ಕೇವಲ ಗುಜರಾತೇ ಅಲ್ಲದೆ, ದೇಶದಲ್ಲಿ ಇನ್ನೂ ಅನೇಕ ರಾಜ್ಯಗಳು ಈ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಯೋಜನೆಗಳನ್ನು ಹಾಕಿಕೊಂಡಿವೆ. ನಮ್ಮ ಕರ್ನಾಟಕದಲ್ಲಿಯೂ ಕೂಡ ಹಿಂದೆ ಇದ್ದಂಥ ಸರ್ಕಾರ ರೈತರಿಗೆ ಕಡಿಮೆ ಬಡ್ಡಿದರದ ಸಾಲದ ಯೋಜನೆಯನ್ನು ಹಾಕಿಕೊಂಡಿತ್ತು. ಬಡ್ಡಿ ಮನ್ನಾ ಮಾಡುವ ಯೋಜನೆಯನ್ನು ಹಾಕಿಕೊಂಡಿತ್ತು. ಆದರೆ ಆಗ ಇದ್ದಂಥ ಕೇಂದ್ರ ಸರ್ಕಾರ ಈ ನೀತಿಗೆ ವಿರುದ್ಧವಾಗಿತ್ತು. ಬಡ್ಡಿಯನ್ನು ಮನ್ನಾ ಮಾಡಬಾರದು, ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡಬಾರದು. ಅದಕ್ಕೆ ನಮ್ಮ ಸಹಾಯ ಇಲ್ಲವೆಂದರೂ ಸಹ ಹಿಂದಿನ ಸರ್ಕಾರ ಸುಸ್ತಿ ಬಡ್ಡಿಯನ್ನು ಪೂರ್ಣ ಮನ್ನಾ ಮಾಡಿ ರೈತರ ಸಹಾಯಕ್ಕೆ ಬಂದಿತ್ತು. ಆಗ ಕೇಂದ್ರ ಇದಕ್ಕೆ ವಿರೋಧವಾಗಿದ್ದು ರೈತರಿಗೆ ಯಾವ ಸಹಾಯವನ್ನೂ ಮಾಡಲಿಲ್ಲ. ಅಂತಹ ಕಠಿಣ ಪರಿಸ್ಥಿತಿಯಲ್ಲೂ ಸಹ ಹಿಂದಿನ ರಾಜ್ಯ ಸರ್ಕಾರದವರು ರೈತರ ಪರವಾಗಿ ಯೋಜನೆಗಳನ್ನು ಜಾರಿಗೆ ತಂದಿದ್ದರು. ಇವತ್ತಿನ ಕೇಂದ್ರ ಸರ್ಕಾರ ತಾನಾಗಿ ರೈತರ ಸಹಾಯಕ್ಕೆ ಬಂದು ರಾಷ್ಟ್ರೀಕರಣ ಬ್ಯಾಂಕುಗಳ ಉಳಿದ ಕಮರ್ಷಿಯಲ್ ಬ್ಯಾಂಕ್‌ಗಳ ೧೦ ಸಾವಿರ ರೂಪಾಯಿಗಳ ವರೆಗಿನ ರೈತರ ಸಾಲವನ್ನು ಕೇಂದ್ರ ಸರ್ಕಾರ ತಾನೇ ಮನ್ನಾ ಮಾಡಿ ಹಣವನ್ನು ಭರಿಸಲಿಕ್ಕೆ ಸಿದ್ಧವಾಗಿದೆ. ಸಹಕಾರಿ ಸಂಘ ಸಂಸ್ಥೆಗಳ, ಬ್ಯಾಂಕಿನ ಸಾಲದಲ್ಲಿ ನೂರಕ್ಕೆ ಅಂದರೆ ಶೇಕಡ ೫೦ ಭಾಗವನ್ನು ರಾಜ್ಯ ಸರ್ಕಾರ ಉಳಿದ ೫೦ ಭಾಗವನ್ನು ಕೇಂದ್ರ ಸರ್ಕಾರ ಭರಿಸಬೇಕೆಂಬ ಒಂದು ಯೋಜನೆಯನ್ನು ಇವತ್ತು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಮುಂದಿಟ್ಟಿದೆ.

ಈ ಯೋಜನೆಗೆ ಹಣದ ಕೊರತೆ ಇದೆ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಆದಕ್ಕೆ ನಾನು ಹೇಳುವ ಒಂದು ವಿಚಾರ ಏನೆಂದರೆ, ರಾಷ್ಟ್ರದಲ್ಲಿ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರ ಸಮಗ್ರ ದೇಶದ ನಾಗರೀಕರು. ಇವತ್ತು ರೈತರು ಸಮಗ್ರ ದೇಶದ ಜನತೆ ಇದು ಆಗಲೇಬೇಕೆಂದು ಒಪ್ಪಿರುವಾಗ, ಮಾನ್ಯ ಮುಖ್ಯಮಂತ್ರಿಗಳು ಇದನ್ನು ಯಾವ ರೀತಿ ಪರಿಹಾರ ಮಾಡುವುದು ಅಂದರೆ, ಇದು ಅಷ್ಟೊಂದು ಸಮಯೋಚಿತವಲ್ಲ, ಸರಿಯಲ್ಲ, ರೈತರ ಪರವಾಗಿ ವಿಚಾರ ಇಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಇದು ಯಾವ ರೀತಿ ಆಗುತ್ತದೆಂದರೆ, ಕೇಂದ್ರ ಸರ್ಕಾರ ತನ್ನ ಪ್ರಣಾಳಿಕೆಯಲ್ಲಿ ಸಾಲ ಮನ್ನಾ ಮಾಡುತ್ತೇವೆಂದು ಹೇಳಿತ್ತು, ಆದ್ದರಿಂದ ಕೇಂದ್ರ ಸರ್ಕಾರ ಸಾಲ ಮನ್ನಾ ಮಾಡಬೇಕು. ಅದು ಬೈಬಲ್, ಅದನ್ನು ಕೇಂದ್ರ ಸರ್ಕಾರ ಪಾಲಿಸಲೇಬೇಕು ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಹೇಳುತ್ತಿದ್ದಾರೆ. ಇವತ್ತು ರಾಜ್ಯದ ಜನತೆಗೆ ನೇರವಾಗಿ ಜವಾಬ್ದಾರರಾಗಿರತಕ್ಕಂಥವರು ಈ ಸದನ ಇಲ್ಲಿಯ ಸರ್ಕಾರ ಇಲ್ಲಿಯ ಮುಖ್ಯಮಂತ್ರಿಗಳೇ ವಿನಃ ಕೇಂದ್ರ ಸರ್ಕಾರ ನೇರವಾಗಿ ಜವಾಬ್ದಾರರಲ್ಲ. ಇಡೀ ರಾಷ್ಟ್ರದ ಒಂದು ಆಡಳಿತವನ್ನು ನೋಡತಕ್ಕಂಥ ಕೇಂದ್ರ ಸರ್ಕಾರ ಇಡೀ ದೇಶವನ್ನೇ ಸಮಾನವಾಗಿ ಕಾಣಬೇಕಾಗುತ್ತದೆ. ರಾಜ್ಯದ ಸಂಪೂರ್ಣ ಜವಾಬ್ದಾರಿಯನ್ನು ಈ ಸರ್ಕಾರ ಹೊರತ್ತಿರಬೇಕಾಗುತ್ತದೆ. ಆ ಜವಾಬ್ದಾರಿ ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಇವತ್ತು ಮನೆಯ ಯಜಮಾನಕೆ ಆದವನು ಮನೆಯಲ್ಲಿ ಆರ್ಥಿಕ ಪರಿಸ್ಥಿತಿ ಏನೇ

ಇರಬಹುದು ಮನೆಯ ಯಜಮಾನಿಕೆಯನ್ನು ಮಾಡತಕ್ಕಂಥ ಅಣ್ಣ ಇವತ್ತು ಅನಾರೋಗ್ಯದಿಂದ ಬಳಲುತ್ತಿರುವ ಒಬ್ಬ ತಮ್ಮ ಆಪರೇಷನ್‌ಗೆ ಹೋಗಲಿಕ್ಕೆ ಹಣ ಬೇಕೆಂದು ಕೇಳಿದರೆ ಇಲ್ಲವೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ಎಂಥ ಕಠಿಣ ಪರಿಸ್ಥಿತಿ ಬಂದಾಗಲೂ ಹಣವನ್ನು ಅನುಕೂಲ ಮಾಡಿಕೊಟ್ಟು ಅವನ ಆರೋಗ್ಯವನ್ನು ಕಾಪಾಡಲಿಕ್ಕೆ ಮಾಡುವಂಥ ಜವಾಬ್ದಾರಿ ಇರುತ್ತದೆ. ಅದೇ ರೀತಿಯಲ್ಲಿ ರಾಜ್ಯದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಸರ್ಕಾರ ಮಾನ್ಯ ಮುಖ್ಯಮಂತ್ರಿಗಳು ಹಣದ ಕೊರತೆ ಇದೆ ಎನ್ನುವ ಮಾತನ್ನು ಮುಂದಿಡದೆ ರೈತರಿಗೆ ಆಗಿರತಕ್ಕಂಥ ಶೋಷಣೆಯನ್ನು ಅನ್ಯಾಯವನ್ನು ದೂರ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಈಗಾಗಲೇ ಅನೇಕ ಸ್ನೇಹಿತರು ಸಲಹೆ ಮಾಡಿದ್ದಾರೆ. ಅನುಭವ ಇರಬಹುದು, ಇನ್ನೊಂದು ಬೇರೆ ರೀತಿಯಲ್ಲಿರಬಹುದು. ಅನಿವಾರ್ಯವಾಗಿ ಈ ಒಂದು ಯೋಜನೆಯನ್ನು ರಾಜ್ಯ ಸರ್ಕಾರದವರು ಸಂಪೂರ್ಣವಾಗಿ ಸದುಪಯೋಗ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಸಹಕಾರಿ ಸಂಘ ಸಂಸ್ಥೆಗಳ ದುರ್ಗತಿಗೆ ಕಾರಣ, ಈ ಒಂದು ಸಾಲ ಮನ್ನಾ ಯೋಜನೆಯಿಂದ ಹಣ ವಸೂಲಾಗಿಲ್ಲ ಎನ್ನುವುದು. ಅಲ್ಲಿ ಕೆಲಸ ಮಾಡತಕ್ಕಂಥ ಸಹಕಾರಿ ಸಂಘದ ನೌಕರರು ಇವತ್ತು ರಾಜಧಾನಿಗೆ ಧಾವಿಸಿದರು. ಅವರಿಗೆ ಸಂಬಳವಿಲ್ಲವೆಂದು ಹೇಳಿದರು, ಆಗ ಸತ್ಯಾಗ್ರಹ ಮಾಡಿದರು. ಈ ಸದನದಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡಿದಾಗ ಈ ಘನ ಸರ್ಕಾರ ಸಹಕಾರಿ ಸಂಘಗಳ ನೌಕರರ ಪಗಾರಕ್ಕೂ ನಮಗೂ ಸಂಬಂಧವಿಲ್ಲವೆನ್ನುವ ಮಾತನ್ನು ಹೇಳಿ ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿತು. ಇವತ್ತು ಸಹಕಾರಿ ಸಂಘಗಳು ದಿವಾಳಿಯಾಗಿವೆ. ಸಹಕಾರಿ ಆಂದೋಳನ ಎಲ್ಲಿಯವರೆಗೆ ಸಕ್ಸಸ್ ಆಗುವುದಿಲ್ಲವೋ, ಸಹಕಾರಿ ಆಂದೋಳನ ಪ್ರಗತಿ ಹೊಂದುವುದಿಲ್ಲವೋ, ಅಲ್ಲಿಯವರೆಗೂ ಪ್ರಜಾಪ್ರಭುತ್ವ ಮುಂದುವರಿಯಲಿಕ್ಕೆ ಕಷ್ಟವಾಗುತ್ತದೆ. ಈ ದಿಸೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಯಾವ ನೆಪವನ್ನೂ ಮುಂದು ಮಾಡದೆ ದಯವಿಟ್ಟು ಕೇಂದ್ರ ಸರ್ಕಾರದಿಂದ ಬರತಕ್ಕಂಥ ಈ ಒಂದು ಯೋಜನೆಯನ್ನು ಸದುಪಯೋಗ ಮಾಡಿಕೊಳ್ಳಬೇಕು. ೪೨ ವರ್ಷಗಳವರೆಗೆ ರಾಷ್ಟ್ರದ ಅಭಿವೃದ್ಧಿಗಾಗಿ ರೈತರ ಮೇಲೆ ಆಗಿರತಕ್ಕ ಶೋಷಣೆಗೋಸ್ಕರವಾಗಿ ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಯಾವುದೇ ಒಂದು ಆರ್ಥಿಕ ಅಭಿವೃದ್ಧಿಯ ಕೆಲಸಗಳನ್ನು ಬಿಟ್ಟು, ಸಂಪತ್ತನ್ನು ಉತ್ಪಾದನೆ ಮಾಡತಕ್ಕಂಥ ಯೋಜನೆಗಳನ್ನು ಬಿಟ್ಟು ಉಳಿದ ಎಲ್ಲಾ ಯೋಜನೆಗಳನ್ನು. ಅಭಿವೃದ್ಧಿ ಕೆಲಸಗಳನ್ನು ಬಂದ್ ಇಟ್ಟರೂ ಅಡ್ಡಿ ಇಲ್ಲ, ಈ ಒಂದು ವರ್ಷದವರೆಗೆ ಆಗ ರೈತರ ಸಾಲ ಮನ್ನಾ ಆಗಬೇಕು ಎನ್ನುವ ಸಲಹೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಮಾಡುತ್ತಾ ಇದ್ದೇನೆ. ೪೨ ವರ್ಷಗಳ ಕಾಲ ರಾಷ್ಟ್ರದ ಅಭಿವೃದ್ಧಿಗಾಗಿ ರೈತರ ಶೋಷಣೆಯಾಗಿದೆ. ರೈತರನ್ನು ಸರ್ಕಾರದ ಅಪ್ರತ್ಯಕ್ಷವಾಗಿ, ಪ್ರತ್ಯಕ್ಷವಾಗಿ ಶೋಷಣೆಯನ್ನು ಮಾಡಿ ತಾನು ಮಾಡಬೇಕಾದಂಥ ಅಭಿವೃದ್ಧಿ ಕೆಲಸಗಳನ್ನು ಹೆಚ್ಚು ಮಾಡಬೇಕೆನ್ನುವ ದೃಷ್ಟಿಯಿಂದ ವ್ಯವಸಾಯಗಾರರನ್ನು ಅಲಕ್ಷ್ಯ ಮಾಡಿದೆ. ಒಂದು ವರ್ಷಕ್ಕೆ ಅಭಿವೃದ್ಧಿ ಕೆಲಸಗಳು ನಿಂತರೆ ಯಾವುದೇ ಅನ್ಯಾಯವಾಗುವುದಿಲ್ಲ. ೪೦ ವರ್ಷಗಳಿಂದ ಅಭಿವೃದ್ಧಿಯಾಗದಿರತಕ್ಕಂಥದನ್ನು ಒಂದು ವರ್ಷದಲ್ಲಿಯೇ ಸಂಪೂರ್ಣವಾಗಿ ಅಭಿವೃದ್ಧಿ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ರಾಜ್ಯದ ಆರ್ಥಿಕ ಪ್ರಗತಿಗೆ ಅನುಕೂಲವಾಗಿರತಕ್ಕಂಥ ಯೋಜನೆಗಳನ್ನು ಹೊರತುಪಡಿಸಿ ಉಳಿದ ಯೋಜನೆಗಳನ್ನು ಒಂದು ವರ್ಷ ಕಾಲ ಬಂದ್ ಇಟ್ಟರೂ ಅಡ್ಡಿಯಿಲ್ಲ. ರೈತರ ಸಾಲವನ್ನು ಮನ್ನಾ ಮಾಡಿ ನಮ್ಮ ಸರ್ಕಾರದವರು ರೈತರ ಒಂದು ಋಣವನ್ನು ತೀರಿಸಬೇಕೆಂದು ಹೇಳಿ ಸದನದ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಈ ಒಂದು ಯೋಜನೆ ಬಗ್ಗೆ ಮುಖ್ಯಮಂತ್ರಿಗಳಲ್ಲಿ ಹಿಂದೆ ಇದ್ದ ವಿಚಾರ ಇವತ್ತು ಇಲ್ಲ, ಸ್ವಲ್ಪ ಮಟ್ಟಿಗೆ ಬದಲಾಯಿಸಿದ್ದಾರೆ, ಇನ್ನೂ ಹೆಚ್ಚಿನ ಬದಲಾವಣೆ ಮಾಡಿ ರೈತರ ಪರವಾದಂಥ ಒಂದು ವಿಚಾರವನ್ನು ಸದನದ ಮುಂದೆ ತರುತ್ತಾರೆಂಬ ಆತ್ಮ ವಿಶ್ವಾಸವನ್ನು ನಾವು ತಾಳಲಿಕ್ಕೆ ಅವರ ವಿಚಾರದಿಂದ ಸಾಧ್ಯವಾಗುತ್ತಿದೆ. ಏಕೆಂದರೆ, ಅವರು ಸಲಹೆಗಳನ್ನು ಕೇಳುತ್ತಿದ್ದಾರೆ, ಯೋಜನೆಗಳನ್ನು ರೂಪಿಸಬೇಕೆಂಬ ವಿಚಾರ ಇದೆ. ಕೇಂದ್ರ ಸರ್ಕಾರದ ಯೋಜನೆ ಅಷ್ಟೇ ಅಲ್ಲ, ರೈತರಿಗೆ ಹೆಚ್ಚಿನ ಸೌಲಭ್ಯ ಸಿಗುವ ರೀತಿಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಕೇಂದ್ರ ಸರ್ಕಾರಕ್ಕೆ ನಮ್ಮ ರಾಜ್ಯದ ರೈತರಿಗೆ ಹೆಚ್ಚು ಸೌಲಭ್ಯ ಸಿಗುವ ರೀತಿಯಲ್ಲಿ ಈ ಸದನದ ಮೂಲಕ ಒತ್ತಾಯಿಸಬೇಕೆಂದು ಹೇಳುತ್ತಾ, ಮಾನ್ಯ ಮುಖ್ಯಮಂತ್ರಿಗಳಿಂದ ರೈತರ ಪರವಾದಂಥ ಘೋಷಣೆ ಬರಲಿ ಎಂದು ಆಶಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).— ಮಾನ್ಯ ಅಧ್ಯಕ್ಷರೆ, ವಿಧಾನಸಭೆಗೆ ನಾನು ಬರುವುದಕ್ಕೆ ಪ್ರಾರಂಭವಾದ ದಿನದಿಂದ ಈ ದಿನದ ತನಕ ರೈತರ ಸಾಲ ಮನ್ನಾದ ಬಗ್ಗೆ ಪ್ರಸ್ತಾಪವಾಗದೆ

ಇರುವ ದಿನವೇ ಇಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಾಲ ಮನ್ನಾ ಆಗಬೇಕೆಂದು ಎಲ್ಲಾ ಪಕ್ಷಗಳ ಅಪೇಕ್ಷೆ ಇದೆ, ಈ ಶಾಸನ ಸಭೆಯ ಪ್ರತಿಯೊಬ್ಬ ಸದಸ್ಯರ ಅಪೇಕ್ಷೆ ಇದೆ. ಆದರೆ ಸಾಲ ಮನ್ನಾ ಆಗಬೇಕೆಂಬ ವಿಚಾರದ ಬಗ್ಗೆ, ಅನೇಕ ತೊಂದರೆಗಳು ಇವೆ ಎಂಬ ಅಂಶವನ್ನು ಮೊದಲೇ ಮುಖ್ಯಮಂತ್ರಿಗಳು ಈ ಸಾಲ ಮನ್ನಾದ ಬಗ್ಗೆ ಪ್ರಸ್ತಾಪವಾದ ಸಂದರ್ಭದಲ್ಲಿ ತಿಳಿಸಿದ ಗಿನಿಂದಲೂ ಕೂಡ ಭಾರತೀಯ ಜನತಾ ಪಕ್ಷ. ಸದನದ ಒಳಗಡೆ ಮತ್ತು ಹೊರಗಡೆ ಹೋರಾಟಗಳನ್ನು ಮಾಡುತ್ತಿರುವುದನ್ನು ಇಡೀ ರಾಜ್ಯದ ಜನರು ಗಮನಿಸುತ್ತಿದ್ದಾರೆ. ಸದನದ ಒಳಗೆ ಸಭಾ ತ್ಯಾಗ, ಧರಣಿ ಆಗುತ್ತಿದ್ದರೆ ಸಭೆಯ ಹೊರಗೆ ವಿಧಾನಸೌಧವನ್ನು ಮುತ್ತಿಗೆ ಹಾಕುತ್ತೇವೆಂದು ೪೦-೫೦ ಸಾವಿರ ರೈತರು ಬಂದದ್ದನ್ನು ತಾವು ಗಮನಿಸಿದ್ದೀರಿ. ಈ ದೃಷ್ಟಿಯಲ್ಲಿ ನಿನ್ನೆ ಈ ಚರ್ಚೆ ನಡೆದ ಸಂದರ್ಭಕ್ಕೂ ಮತ್ತು ಇವತ್ತು ಚರ್ಚೆ ನಡೆಯುವ ಸಂದರ್ಭಕ್ಕೂ ಅನೇಕ ವ್ಯತ್ಯಾಸಗಳಾಗಿರುವುದನ್ನು ನಾವು ಗಮನಿಸಿದ್ದೇವೆ. ೨-೧೦-೮೯ರವರೆಗೆ ಹತ್ತು ಸಾವಿರ ರೂಪಾಯಿಗಳವರೆಗೆ ಸಾಲ ಬಾಕಿ ಇರುವ ರೈತರಿಗೆ ಮಾತ್ರ ಈ ಸೌಲಭ್ಯದ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ ಕೇಂದ್ರ ಸರ್ಕಾರ ಎಷ್ಟೇ ಸಾಲ ಇದ್ದರೂ ಹತ್ತು ಸಾವಿರ ರೂಪಾಯಿಗಳವರೆಗೆ ಮನ್ನಾ ಆಗಬೇಕೆಂಬ ಅಂಶವನ್ನು ಸ್ಪಷ್ಟ ಮಾಡಿದೆ. ಈಗಾಗಲೇ ಅನೇಕ ರಾಜ್ಯ ಸರ್ಕಾರಗಳು ಈ ಸಾಲ ಮನ್ನಾದ ಬಗ್ಗೆ ನಿರ್ಣಯಗಳನ್ನು ಕೂಡ ತೆಗೆದು ಕೊಂಡಿರುವುದನ್ನು ಗಮನಿಸಿದ್ದೇವೆ. ಗುಜರಾತ್ ಸರ್ಕಾರ ೧೫-೫-೯೦ರವರೆಗೆ ೪೩೫.೨೩ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡುವ ಬಗ್ಗೆ ನಿರ್ಣಯ ತೆಗೆದುಕೊಂಡಿರುವುದರಿಂದ ೯ ಲಕ್ಷ ರೈತರಿಗೆ ಇದರ ಅನುಕೂಲವಾಗುತ್ತಿದೆ. ಅಖಿಲ ಭಾರತ ಬಿಜೆಪಿ ಅಧ್ಯಕ್ಷರಾದ ಲಾಲ್‌ಕೃಷ್ಣ ಅಡ್ವಾನಿಯವರ ಹತ್ತಿರ ಪ್ರಸ್ತಾಪ ಮಾಡಿದಾಗ ಮಧ್ಯಪ್ರದೇಶ್, ರಾಜಾಸ್ಥಾನ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಕೂಡ ಸಾಲ ಮನ್ನಾ ಮಾಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಿರುವ ಅಂಶ ತಮ್ಮ ಗಮನಕ್ಕೆ ಬಂದಿದೆ. ಕೇಂದ್ರ ಎಷ್ಟು ಕೊಡುತ್ತದೆಂದು ಎನ್ನುವ ಅಂಶವನ್ನು ಮಧ್ಯ ಪ್ರದೇಶ ಸರ್ಕಾರ ಗಮನಿಸದೆ ಹಾಲಿ ಬಾಕಿ ಇರುವ ೪೯೦ ಕೋಟಿ ರೂಪಾಯಿಗಳಲ್ಲಿ ಕೇವಲ ೮೩ ಕೋಟಿ ರೂಪಾಯಿಗಳಷ್ಟು ಮಾತ್ರ ಕೇಂದ್ರ ಸರ್ಕಾರ ಕೊಟ್ಟರೂ ಉಳಿದ ೪೦೭ ಕೋಟಿ ರೂಪಾಯಿಗಳಷ್ಟು ಮಧ್ಯಪ್ರದೇಶ ಸರ್ಕಾರ ಮನ್ನಾ ಮಾಡುವ ವಿಚಾರದಲ್ಲಿ ಈಗಾಗಲೆ ಮುಂದೆ ಬಂದಿದೆ. ಈ ಸಂದರ್ಭದಲ್ಲಿ ನಬಾರ್ಡ್ ಒಡ್ಡಿರುವ ಬೇರೆ ಬೇರೆ ನೆಪಗಳನ್ನು ಕಾಣುತ್ತಿದ್ದೇವೆ. ನಬಾರ್ಡ್ ಕೇಂದ್ರ ಸರ್ಕಾರಕ್ಕಿಂತ ಖಂಡಿತ ದೊಡ್ಡದು ಎಂದು ಅನ್ನಿಸುವುದಿಲ್ಲ. ಈ ರಾಷ್ಟ್ರದ ರೈತರು ತೊಂದರೆಗೆ ಸಿಲುಕುವ ಸಂದರ್ಭದಲ್ಲಿ ನಬಾರ್ಡ್ ಪರಿಹಾರಕ್ಕೆ ಪ್ರಯತ್ನ ಮಾಡುತ್ತಿದೆ ಎಂದು ಅನ್ನಿಸುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಏನು ತೊಂದರೆಗಳು ಬರುತ್ತವೆ ಅದಕ್ಕಿಂತ ಮೀರಿ ರೈತರ ಸಾಲದ ತೊಂದರೆ ಬಂದಿರುವುದರಿಂದ ರಾಜ್ಯ ಸರ್ಕಾರ ಈ ಬಗ್ಗೆ ನಿನ್ನೆಯಿಂದ ಸಾಕಷ್ಟು ವಿಚಾರ ಮಾಡಿ, ಮುಂಚೆಗೂ ಈಗ್ಗೂ ತಮ್ಮ ದೃಷ್ಟಿಕೋನವನ್ನು ಬದಲಾಯಿಸಿ ಕೊಂಡು ರೈತರ ಸಾಲ ಮನ್ನಾದ ಬಗ್ಗೆ ಗಮನಹರಿಸಬೇಕೆಂದು ಮುಖ್ಯಮಂತ್ರಿಗಳು ಸಹ ಯೋಚಿಸುತ್ತಿದ್ದಾರೆ. ರೈತರ ಸಾಲ ಮನ್ನಾ ಆಗಲೇಬೇಕೆಂದು ಇಡೀ ರಾಜ್ಯದ ಜನತೆ ನಿರೀಕ್ಷಿಸುತ್ತಿದೆ. ಈ ಹಣವನ್ನು ಹೇಗೆ ತರಬೇಕೆಂದು ನಮ್ಮ ಬಿ.ಜೆ.ಪಿ. ನಾಯಕರಾದ ಶ್ರೀಯುತ ಬಿ. ಎಸ್. ಯಡಿಯೂರಪ್ಪನವರು ನಿನ್ನೆ ಸಾಕಷ್ಟು ಸಲಹೆ ಕೊಟ್ಟಿದ್ದಾರೆ. ರಾಷ್ಟ್ರೀಕೃತ ಬ್ಯಾಂಕುಗಳಿಗೆ ಈ ಪ್ರಶ್ನೆ ಉದ್ಭವವಾಗುವುದಿಲ್ಲ. ಕೇಂದ್ರ ಸರ್ಕಾರ ಕೂಡ ಸಹಕಾರಿ ಸಂಘಗಳ ಶೇಕಡ ೫೦ರಷ್ಟು ಸಾಲವನ್ನು ಕೊಡುತ್ತೇವೆಂದು ಒಪ್ಪಿದೆ. ಇನ್ನು ಉಳಿದ ೫೦ ಪರ್ಸೆಂಟ್ ಹಣವನ್ನು ರಾಜ್ಯ ಸರ್ಕಾರ ತುಂಬಬೇಕು. ಹಿಂದೆ ಎಕ್ಸೈಜ್‌ನಲ್ಲಿ ಸೋರಿ ಹೋಗುತ್ತಿದ್ದ ಹಣ ಒಂದು ದಿನಕ್ಕೆ ಒಂದು ಕೋಟಿ ರೂಪಾಯಿ ಎನ್ನುವ ವಿಚಾರ ಬೆಳಕಿಗೆ ಬಂದಿತ್ತು.

೩-೫೫ ಪಿ. ಎಂ.

ಈ ರೀತಿ ಆದಂಥ ಸೋರಿಕೆಯನ್ನು ಹೇಗೆ ನಿಲ್ಲಿಸಬೇಕು ಎಂಬುದು ಒಂದು ಅಂಶ. ಜೊತೆಗೆ ರಿಸರ್ವ್ ಬ್ಯಾಂಕಿನಿಂದ ಸಾಲ ಪಡೆಯುವುದು ಇರಬಹುದು, ಈ ರೀತಿ ಬೇರೆ ಬೇರೆ ರೂಪದಲ್ಲಿ ಹಣ ತರುವುದು ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ದುಡಿಯುವ ವ್ಯಕ್ತಿ ಮನೆಯಲ್ಲಿ ಕಾಯಿಲೆ ಬಿದ್ದಾಗ ಇಡೀ ಮನೆ ಮಂದಿಯೆಲ್ಲಾ ಯೋಚನೆ ಮಾಡಿ ಆ ವ್ಯಕ್ತಿಯ ಆರೋಗ್ಯ ಸುಧಾರಣೆ ಮಾಡುವುದಕ್ಕೆ ಯಾವರೀತಿ ಪ್ರಯತ್ನ ಮಾಡಬೇಕೋ ಆ ದಿಕ್ಕಿನಲ್ಲಿ ನಾವೆಲ್ಲಾ ಯೋಚನೆ ಮಾಡಬೇಕಾಗಿದೆ. ಎಲ್ಲಿಂದ ಹಣ ತರುವುದು ಎಂದು ಬೇಜವಾಬ್ದಾರಿಯಿಂದ ಮನೆಯವರು ದುಡಿಯುತ್ತಿರುವ ವ್ಯಕ್ತಿಯ ಕಾಯಿಲೆ ಬಗ್ಗೆ ಗಮನ ಕೊಡದೆ ಆ ವ್ಯಕ್ತಿ ಸತ್ತರೆ ಇಡೀ ಮನೆಯೇ ಹಾಳಾಗುತ್ತದೆ. ಈ ಅಂಶವನ್ನು ರಾಜ್ಯಸರ್ಕಾರ ಗಮನಿಸಬೇಕೆಂದು ಹೇಳುವುದಕ್ಕೆ ಇಚ್ಛೆಪಡು ತ್ತೇನೆ. ಈ ಸಂದರ್ಭದಲ್ಲಿ ನಮ್ಮ ಸರ್ಕಾರ ಮಾಡಬೇಕಾದ ಒಂದೆರಡು ಅಂಶಗಳಿವೆ. ತಕ್ಷಣ ಸಾಲ

ವಸೂಲಾತಿಗೆ ತಡೆ ಮಾಡಬೇಕು. ಜೊತೆಗೆ, ಇದುವರೆಗೆ ರೈತರು ಏನು ಸಾಲ ಕಟ್ಟಿದ್ದಾರೆ ಅದನ್ನು ವಾಪಸ್ ಕೊಡಬೇಕು. ಬೇರೆ ಬೇರೆ ರಾಜ್ಯದವರು ಸಾಲ ಮನ್ನಾ ಮಾಡುತ್ತಿರುವಾಗ ನಮ್ಮ ರಾಜ್ಯ ಸರ್ಕಾರ ಇದನ್ನು ಪ್ರತಿಷ್ಠೆಯ ವಿಷಯವಾಗಿ ತೆಗೆದುಕೊಂಡು ಗಮನಿಸದೆ ಸಾಲ ಮನ್ನಾ ಮಾಡದೇ ಇರಬಾರದು ಕೂಡಲೇ ಸಾಲ ಮನ್ನಾ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಈ ಬಗ್ಗೆ ಅನೇಕ ಹೋರಾಟಗಳು ನಡೆದಿವೆ. ರಾಜ್ಯ ಸರ್ಕಾರದ ಹತ್ತಿರ ಪೋಲೀಸರಿರಬಹುದು. ಅದನ್ನು ಬಳಸದೆ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತಾ ಕೇವಲ ಪ್ರತಿಪಕ್ಷಗಳು ಹೋರಾಟ ಮಾಡುವುದು. ರಾಜ್ಯ ಸರ್ಕಾರ ಬಿಗಿ ಧೋರಣೆ ತಳೆಯುವುದು ಮಾಡದೆ ದಿಟ್ಟ ಹೆಜ್ಜೆ ಇಟ್ಟು ಕರ್ನಾಟಕ ರಾಜ್ಯದ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆ ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ವೀರೇಂದ್ರಪಾಟೀಲ್ (ಮುಖ್ಯಮಂತ್ರಿಗಳು) —ಮಾನ್ಯ ಸಭಾಧ್ಯಕ್ಷರೆ ರೈತರ ಸಾಲ ಮನ್ನಾ ಮಾಡುವುದರ ಬಗ್ಗೆ ನಿನ್ನೆ ಸಾಯಂಕಾಲದಿಂದ ಈ ಸದನದ ಅನೇಕ ಮಾನ್ಯ ಸದಸ್ಯರುಗಳು, ವಿರೋಧಪಕ್ಷದ ನಾಯಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ನಾನು ತಿಳಿದುಕೊಂಡ ಹಾಗೆ, ಬಿ.ಜೆ.ಪಿ. ಪಕ್ಷದ ಸದಸ್ಯರ ಹೊರತಾಗಿ ಉಳಿದಿಲ್ಲ ಆ ಭಾಗದಲ್ಲಿ ಕುಳಿತಂಥ ಸದಸ್ಯರು ಕೇಂದ್ರ ಸರ್ಕಾರದ ಈ ಯೋಜನೆಯನ್ನು ರಾಜ್ಯ ಸರ್ಕಾರ ಸ್ವಾಗತಿಸಬೇಕು, ಪೂರ್ತಿಯಾಗಿ ಒಪ್ಪಿಕೊಳ್ಳಬೇಕು ಮತ್ತು ಅವರು ಕೊಡುವಂಥ ದೇಣಿಗೆಯನ್ನು ಒಪ್ಪಿಕೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ ಮತ್ತು ಬಿ.ಜೆ.ಪಿ.ಯ ಮಾನ್ಯ ಸದಸ್ಯರು ತಮ್ಮ ನಿಲುವೆಯನ್ನು ಸಾಲ ಮನ್ನಾ ಮಾಡುವುದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಅವರು ಏನು ಅಭಿಪ್ರಾಯ ಪಟ್ಟಿದ್ದಾರೆ? ಕೇಂದ್ರದಿಂದ ಬಂದ ಯೋಜನೆ ರಾಜ್ಯ ಸರ್ಕಾರದ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿದೆಯೇ ಹೊರತು ಹೊಂದಿಕೊಳ್ಳುವ ಯೋಜನೆಯಾಗಿಲ್ಲ. ಹೀಗಿದ್ದರೂ ಕೂಡ ಇವತ್ತು ಈ ಯೋಜನೆ ಬಗ್ಗೆ ಸ್ವಲ್ಪಮಟ್ಟಿಗೆ ವಿವರಗಳನ್ನು ಹೇಳುವುದು ಅವಶ್ಯ. ಏಕೆಂದರೆ, ಎಲ್ಲಾ ಮಾನ್ಯ ಸದಸ್ಯರೂ ಕೇಂದ್ರಸರ್ಕಾರದ ಯೋಜನೆ ಮತ್ತು ಅದರ ಸಾರಾಂಶ ಹಾಗೂ ನಾವು ಏನು ನೀಡಿದ್ದೇವೆ. ಈ ವಿವರಗಳನ್ನು ಓದಿ ತಿಳಿದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ, ಅಥವಾ ಪೂರ್ತಿಯಾಗಿ ತಿಳಿದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ಈ ಯೋಜನೆ ಪ್ರಕಾರ ಮೊದಲು ೧೦ ಸಾವಿರ ರೂಪಾಯಿವರೆಗೆ ಯಾರು ಸಾಲ ಬಾಕಿ ಇಟ್ಟುಕೊಂಡಿರುತ್ತಾರೋ, ಯಾರು ಡಿಫಾಲ್ಟರ್ಸ್ ಇದ್ದಾರೋ, ೨ನೇ ಅಕ್ಟೋಬರ್ ೧೯೮೯ಕ್ಕೆ ಕಟ್ ಆಫ್ ಡೇಟ್ ಫಿಕ್ಸ್ ಮಾಡಿದ್ದು ಆ ಡೇಟಿಗೆ ಯಾರು ಡಿಫಾಲ್ಟರ್ಸ್ ಇದ್ದಾರೆ, ಅವರ ಸಾಲ ಮಾತ್ರ ಮನ್ನಾ ಮಾಡಬೇಕೆಂಬುದು ಯೋಜನೆ. ಮತ್ತು ಈ ಯೋಜನೆಯಲ್ಲಿ ಸ್ಪಷ್ಟಪಡಿಸಿದ್ದಾರೆ ೨ನೇ ಅಕ್ಟೋಬರ್ ೧೯೮೯ ರ ನಂತರ ಯಾರೇ ಡಿಫಾಲ್ಟರ್ ಆದರೆ ಅವರಿಗೆ ಈ ಯೋಜನೆಯ ಲಾಭ ಇಲ್ಲ, ಅವರು ಲಾಭ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಸಾಲ ಮನ್ನಾ ಮಾಡುವಹಾಗೆ ಇಲ್ಲ ಎಂದು ಕೇಂದ್ರ ಸರ್ಕಾರದವರು ನಮಗೆ ಸ್ಪಷ್ಟವಾಗಿ ಹೇಳಿದ್ದರು. ಅಂದರೆ ೧೯೮೯-೯೦ರಲ್ಲಿ ರೈತರಿಗೆ ಏನು ಸಾಲವನ್ನು ಕೊಟ್ಟಿದ್ದೇವೆ ಆ ಸಾಲವನ್ನು ವಸೂಲು ಮಾಡಬೇಕೆಂದು ಕೇಂದ್ರ ಸರ್ಕಾರ ಹೇಳಿದೆ ಅದೇ ಒಂದು ಆದೇಶವನ್ನು ನಬಾರ್ಡ್‌ಗೂ ಕಳುಹಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಇಲ್ಲಿ ಮರೆಯಬಾರದು. ಈ ಸಾಲವನ್ನು ಮನ್ನಾ ಮಾಡುವುದಕ್ಕೆ ಇನ್ನೊಂದು ಷರತ್ತನ್ನು ಹಾಕಿದಾರೆ. ೧-೪-೧೯೮೬ ರಿಂದ ಇತ್ತೀಚೆಗಿನ ಸಾಲ ಮನ್ನಾ ಮಾಡುವುದಕ್ಕೆ ಹಾಕಿರುವ ಷರತ್ತು ಏನೆಂದರೆ, ಯಾವ ವರ್ಷ ಸಾಲ ಮನ್ನಾ ಮಾಡಬೇಕೋ ಆ ವರ್ಷದ ಸಾಲದ ಆ ಭಾಗದಲ್ಲಿ ಆ ಏರಿಯಾದಲ್ಲಿ ಆಣೇವಾರಿ ೫೦ಕ್ಕಿಂತಲೂ ಕಡಿಮೆ ಇರಬೇಕು, ೫೦ಕ್ಕಿಂತ ಮೇಲೆ ಇದ್ದರೆ ಇದರ ಲಾಭ ಇಲ್ಲ. ಅಂದರೆ ೧-೪-೮೬ ರಿಂದ ಎಲ್ಲಿ ೫೦ಕ್ಕಿಂತಲೂ ಕಡಿಮೆ ಆಣೇವಾರಿ ಇದೆ ಅಂತಹ ಭಾಗದ ರೈತರಿಗೆ ಲಾಭವೇ ಹೊರತು ಬೇರೆಯವರಿಗೆ ಲಾಭ ಇಲ್ಲ. ಯಾವುದೇ ಷರತ್ತು ಇಲ್ಲದಹಾಗೆ ರೈತರ ಸಾಲ ಮನ್ನಾ ಮಾಡುವುದಕ್ಕೆ ಸ್ಪಷ್ಟವಾಗಿ ಯೋಜನೆಯಲ್ಲಿ ಹೇಳಿದ್ದು ೧-೪-೮೬ರ ಪೂರ್ವದಲ್ಲಿ ಅದಕ್ಕೆ ಕ್ರಾನಿಕ್ ಡಿಫಾಲ್ಟರ್ ಎಂದು ಅವರು ಹೇಳಿದ್ದಾರೆ. ೧-೪-೧೯೮೬ರ ಪೂರ್ವದಲ್ಲಿ ಸಾಲ ಏನಾದರೂ ಇದ್ದರೆ ಯಾವುದೂ ಷರತ್ತು ಇಲ್ಲದೆ ಮಂಜೂರು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಇದರ ಅರ್ಥ ಏನೆಂದರೆ, ನೀರಾವರಿ ಪ್ರದೇಶದ ರೈತರಿಗೆ ಏನೂ ಸಾಲ ಮನ್ನಾ ಆಗಿಲ್ಲ. ಇದನ್ನು ತಾವು ತಿಳಿದುಕೊಳ್ಳಬೇಕು. ಇದನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ ನೀರಾವರಿ ಪ್ರದೇಶದಲ್ಲಿ ಬರಗಾಲಬರುವ ಪ್ರಶ್ನೆಯೇ ಇಲ್ಲ ಅಲ್ಲಿ ಆಣೇವಾರಿ ಶೇಕಡಾ ೫೦ಕ್ಕಿಂತ ಕಡಿಮೆ ಆಗುವ ಪ್ರಶ್ನೆ ಇಲ್ಲ. ಇವತ್ತು ಅಲ್ಲಿ ಬೆಳೆ

ಹೋಯಿತು ಎನ್ನುವ ಪ್ರಶ್ನೆ ಇಲ್ಲ ಅದಕ್ಕಾಗಿ ಕೇಂದ್ರ ಸರ್ಕಾರ ಹಾಕಿದ ಯೋಜನೆ ಪ್ರಕಾರ ನೀರಾವರಿ ಪ್ರದೇಶದ ರೈತರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು ಬಹುಶಃ ಕೆಲವು ಸದಸ್ಯರ ವಿಚಾರ ಇರಬಹುದು ಏನೆಂದರೆ ಕೇಂದ್ರ ಸರ್ಕಾರ ಯೋಜನೆ ಮಾಡಿದರೂ ರಾಜ್ಯ ಸರ್ಕಾರ ಇನ್ನೂ ನಿರ್ಲಕ್ಷ್ಯ ಮಾಡುತ್ತಾ ಇದೆ, ಯಾವ ಒಂದು ಯೋಜನೆಯನ್ನು ಉತ್ಸಾಹ, ಉಲ್ಲಾಸದಿಂದ ತೆಗೆದುಕೊಂಡು, ಆ ಯೋಜನೆಯನ್ನು ಸ್ವಾಗತ ಮಾಡಿ ಆ ಯೋಜನೆಯ ಲಾಭ ಪಡೆಯಬೇಕಾಗಿತ್ತೋ ಅದರಲ್ಲಿ ನಿಧಾನ ಮಾಡುತ್ತಿದೆ ಎನ್ನುವ ವಾತಾವರಣ ತಪ್ಪಾಗಿ ಮೂಡಬಹುದು ಅದಕ್ಕಾಗಿ ನಾನು ಈ ಸ್ಪಷ್ಟೀಕರಣವನ್ನು ಕೊಡುತ್ತಿದ್ದೇವೆ. ಈ ಒಂದು ಯೋಜನೆಯನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿದ್ದು ೧೮ನೇ ಮೇ ೧೯೯೦ಕ್ಕೆ, ಕೇಂದ್ರದಿಂದ ಈ ಯೋಜನೆ ಬಗ್ಗೆ ವಿವರ ಬಂದಿದೆಯೋ ಎಂದು ನಾವು ನಮ್ಮ ಮುಖ್ಯಕಾರ್ಯದರ್ಶಿಯವರಿಗೆ ವಿಚಾರಿಸಬೇಕು. ಈ ಮಧ್ಯದಲ್ಲಿ ನಾವು ಅದರ ಪ್ರತಿಯನ್ನು ನಬಾರ್ಡ್‌ನಿಂದ ಪಡೆದಿದ್ದೇವೆ. ಅದನ್ನು ಪ್ರತಿ ಮಾಡಿ ನಾವು ಇಲ್ಲಿ ಎಲ್ಲರಿಗೂ ಹಂಚಿದ್ದೇವೆ ನಬಾರ್ಡ್‌ನಲ್ಲಿ ೨೫ರ ಮೇ ೧೯೯೦ರಲ್ಲಿ ನಮಗೆ ಇದು ಸಿಕ್ಕಿತು. ಈ ಮಧ್ಯೆ ಕೇಂದ್ರ ಸರ್ಕಾರದವರು ಈ ಯೋಜನೆ ಬಗ್ಗೆ ಏನಾದರೂ ಸಮಸ್ಯೆ ಇದ್ದರೆ ಶಂಕೆ ಇದ್ದರೆ ಅದನ್ನು ಪರಿಹರಿಸಿ ಕೊಳ್ಳುವುದಕ್ಕೆ ಬರಬಹುದು ಎಂದು ಹೇಳಿದ್ದಾರೆ. ಆ ಪ್ರಕಾರ ನಮ್ಮ ಅಧಿಕಾರಿಗಳು ೩೧-೫-೧೯೯೦ರಲ್ಲಿ ದಿಲ್ಲಿಗೆ ಹೋಗಿ ಚರ್ಚೆ ಮಾಡಿಕೊಂಡು ಬಂದಿದ್ದಾರೆ. ಆದರೆ ಇವತ್ತು ಈ ಸಾಲ ಮನ್ನಾ ಬಗ್ಗೆ ಕೇಂದ್ರದಿಂದ ಏನು ಸ್ಪಷ್ಟೀಕರಣ ಬಂದಿದೆ ಅದರಲ್ಲಿ ಸಾಲದ ಗಾತ್ರ, ಎಷ್ಟೇ ಇರಲಿ ಲಾಭ ಕೊಡುತ್ತೇವೆ ಎಂದು ಹೇಳಿದ್ದಾರೆ. ಹಿಂದೆ ನಾವು ಕೇಳಿದ್ದಕ್ಕೆ, ಈ ಯೋಜನೆಗೆ ವ್ಯತಿರಿಕ್ತವಾಗಿ ನಾವು ಯೋಚನೆ ಮಾಡುವುದಕ್ಕೆ ತಯಾರು ಇಲ್ಲ ಎಂದು ಹೇಳಿದ್ದರು. ಇದರ ಬಗ್ಗೆ ನಾನು ಒಂದು ಕ್ಲಾರಿಫಿಕೇಷನ್ ಕೊಡುತ್ತೇನೆ. ನೀರಾವರಿ ಪ್ರದೇಶಕ್ಕೆ ಈ ಯೋಜನೆ ಅನ್ವಯವಾಗುವುದೇ ಇಲ್ಲ. ನೀರಾವರಿ ಪ್ರದೇಶದಲ್ಲಿ ೧೯೮೬ಕ್ಕೆ ಪೂರ್ವದಲ್ಲಿ ಸಾಲ ಇದ್ದರೆ ಅದು ಮನ್ನಾ ಆಗುತ್ತದೆ.

೫೦ ಪರ್ಸೆಂಟ್ ಆಣೆವಾರಿ ಬರುವುದಿಲ್ಲ. ೧೯೮೬ರ ಪೂರ್ವದಲ್ಲಿ ಸಾಲ ಇದ್ದರೆ ಆಣೆವಾರಿ ಪ್ರಶ್ನೆಯಿಲ್ಲ. ೧೯೮೬ರ ಪೂರ್ವದಲ್ಲಿ ರೈತರು ಡಿಫಾಲ್ಟರ್ ಆಗಿ ಇದ್ದರೆ ಮಾತ್ರ ನೀರಾವರಿ ಪ್ರದೇಶದ ರೈತರಿಗೂ ಈ ಯೋಜನೆಯು ಅನುಕೂಲವಾಗುತ್ತದೆ. ಆದರೆ ೧೯೮೬ರ ನಂತರ ಸಾಲ ಏನಾದರೂ ಇದ್ದರೆ ಈ ಯೋಜನೆ ಅವರಿಗೆ ಅನ್ವಯವಾಗುವುದಿಲ್ಲ. ೩೧ರ ಡಿಸೆಂಬರ್‌ಗೆ ನಾವು ಕೇಳಿದಂಥ ಎಲ್ಲಾ ರೀತಿಯ ಪ್ರಶ್ನೆಗಳಿಗೆ ಸ್ಪಷ್ಟೀಕರಣ ಕೊಟ್ಟಿದ್ದಾರೆ. ನಮ್ಮ ಅಧಿಕಾರಿಗಳು ಸಹ ಹೋಗಿ ಬಂದಿದ್ದಾರೆ. ಪ್ರಶ್ನೆ ಏನೆಂದರೆ, ಇವತ್ತು ಏನು ವಿಚಾರ ಮಾಡಬೇಕಾಗಿದೆಯೆಂದರೆ, ಕೇಂದ್ರಸರ್ಕಾರದವರು ಏನೊಂದು ನೀತಿಯನ್ನು ತಾಳಿದ್ದಾರೆ ಇದರಲ್ಲಿ ನನಗೆ ಸ್ಪಷ್ಟವಾದ ದ್ವಂದ್ವ ನೀತಿ ಕಂಡುಬರುತ್ತಿದೆ, ಅಂದರೆ ಡಬ್ಬಲ್ ಸ್ಟ್ಯಾಂಡರ್ಡ್. ನಿನ್ನೆ ಯಡಿಯೂರಪ್ಪನವರು ಅದನ್ನು ಒಪ್ಪಿಕೊಂಡಿದ್ದಾರೆ. ರೈತರ ಸಾಲ ಏನಿದೆ ಅದರ ಜವಾಬ್ದಾರಿ ನಮ್ಮದು ಎಂದು ಕೇಂದ್ರ ಸರ್ಕಾರದವರು ನಮಗೆ ಬರೆದು ಕೊಟ್ಟಿದ್ದಾರೆ, ಸಾಲವನ್ನು ಮನ್ನಾ ಮಾಡುವ ಜವಾಬ್ದಾರಿ ನಮ್ಮದು ನಾವು ಜನರಿಗೆ ಭರವಸೆಯನ್ನು ಕೊಟ್ಟಿದ್ದೇವೆ, ವಚನವನ್ನು ಕೊಟ್ಟಿದ್ದೇವೆ, ಅದನ್ನು ವಜಾ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದಾರೆ ಬಹುಶಃ ಇದೇನು ಮೊದಲನೆ ಸಲ ಚರ್ಚೆಯಾಗುತ್ತಿಲ್ಲ. ಇವತ್ತು ಚರ್ಚೆಯಾಗುತ್ತಿರುವುದು ನಾಲ್ಕನೇ ಸಲ. ಒಂದಕ್ಕೆ ನಾನು ಪತ್ರ ವ್ಯವಹಾರ ಮಾಡಿದಾಗ ಕೇಂದ್ರದ ಹಣಕಾಸಿನ ಸಚಿವರ ಜೊತೆಯಲ್ಲಿ ಸಮಾಲೋಚನೆ ಮಾಡಿದಾಗ ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದಾಗ ಅವರು ಸ್ಪಷ್ಟವಾಗಿ ನಮಗೆ ಲಿಖಿತ ಮೂಲಕ ಬರೆದುಕೊಟ್ಟಿದ್ದಾರೆ, ರೈತರ ಸಾಲ ಮನ್ನಾ ಮಾಡುವುದು ನಮ್ಮ ಜವಾಬ್ದಾರಿ ಇದೆ ನಾವು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆಯನ್ನು ಕೊಟ್ಟಿದ್ದೇವೆ. ನೀವು ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಸಾಲ ಮನ್ನಾ ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿಲ್ಲ, ನಾವು ಕೊಟ್ಟಿದ್ದೇವೆ, ಆ ಭರವಸೆಯನ್ನು ಈಡೇರಿಸುವ ಜವಾಬ್ದಾರಿ ನಮ್ಮದೆಂದು ಕಾಗದ ಬರೆದು ಕೊಟ್ಟಮೇಲೆ, ಅವರು ಒಪ್ಪಿಕೊಂಡ ಮೇಲೆ ಸಾಲ ಸಾಲವೇ, ಇದನ್ನು ತಾವು ವಿಚಾರ ಮಾಡಿ. ಕಮರ್ಷಿಯಲ್ ಬ್ಯಾಂಕ್ ನಿಂದ ತೆಗೆದುಕೊಂಡರೆ ಸಾಲ ಬೇರೆ, ಕೋ-ಆಪರೇಟಿವ್ ಬ್ಯಾಂಕ್ ನಿಂದ ತೆಗೆದುಕೊಂಡರೆ ಸಾಲ ಬೇರೆ ಎಂದು ಏನಾದರೂ ಇದ್ದರೆ ಅದು ನನ್ನ ತಲೆಗೆ ಹಿಡಿಯುವುದಿಲ್ಲ. ಸಾಲ ಅಂದರೆ ಸಾಲ. ಸಾಲವನ್ನು ಯಾವ ಬ್ಯಾಂಕಿನಿಂದಲೇ ತೆಗೆದುಕೊಳ್ಳಲಿ, ಕಮರ್ಷಿಯಲ್ ಬ್ಯಾಂಕಿನಿಂದ ತೆಗೆದುಕೊಳ್ಳಲಿ, ಸೊಸೈಟಿಯಿಂದ ತೆಗೆದುಕೊಳ್ಳಲಿ, ಕೋ-ಆಪರೇಟಿವ್ ಬ್ಯಾಂಕಿನಿಂದ ತೆಗೆದುಕೊಳ್ಳಲಿ, ಅದು ಸಾಲವೇ. ನಾನು ಕೇಳುವಂತಹದ್ದು ಕಮರ್ಷಿಯಲ್ ಬ್ಯಾಂಕ್, ಗ್ರಾಮೀಣ ರೀಜನಲ್ ಬ್ಯಾಂಕ್ ಈ ಬ್ಯಾಂಕುಗಳ ಮುಖಾಂತರ ರೈತ ತೆಗೆದುಕೊಂಡಿದ್ದಂಥ ಸಾಲಕ್ಕೆ ಪೂರ್ತಿ ಕೇಂದ್ರ ಸರ್ಕಾರ ಜವಾಬ್ದಾರಿ ವಹಿಸಿಕೊಳ್ಳುವುದಕ್ಕೆ ತಯಾರಿ. ಆದರೆ ಕೋ-ಆಪರೇಟಿವ್ ಬ್ಯಾಂಕಿನ ಸಾಲಕ್ಕೆ ಮಾತ್ರ ಇದು ನಮ್ಮ ಜವಾಬ್ದಾರಿಯಲ್ಲ, ರಾಜ್ಯ ಸರ್ಕಾರ ಜವಾಬ್ದಾರಿಯೆಂದು ಹೇಳುತ್ತಿದ್ದಾರೆ ಇದು ನನಗೆ ಅರ್ಥವಾಗುವುದಿಲ್ಲ. ಏಕೆಂದರೆ, ಇವತ್ತು ಸಹಕಾರಿ ಬ್ಯಾಂಕುಗಳಿಗೆ ಬರುವಂತಹ ಹಣ

ರಿಸರ್ವ್ ಬ್ಯಾಂಕಿನಿಂದ ಬರುತ್ತದೆ. ನಮ್ಮ ತಿಜೋರಿಯಿಂದ ಸಹಕಾರಿ ಬ್ಯಾಂಕುಗಳಿಗೆ ನಾವು ಸಾಲವನ್ನು ಕೊಡುತ್ತಿಲ್ಲ. ಈ ದುಡ್ಡು ತೆಗೆದುಕೊಂಡು ಹೋಗಿ ರೈತರಿಗೆ ಹಂಚಿರಿ ಎಂದು ನಾವು ಯಾರಿಗೂ ಹೇಳುತ್ತಾ ಇಲ್ಲ. ಬಹುಶಃ ಮಾನ್ಯ ಏಕಾಂತಯ್ಯನವರು ಕೋಆಪರೇಟಿವ್ ಮಂತ್ರಿಗಳಾಗಿದ್ದವರು. ಅವರಿಗೆ ಗೊತ್ತಿದೆ. ಈ ಸಾಲ ಬರುವುದು ನಬಾರ್ಡ್‌ನಿಂದ. ಅಪೆಕ್ಸ್ ಬ್ಯಾಂಕಿನವರು ಬಾಂಬೆಗೆ ಹೋಗಿ ನಬಾರ್ಡ್ ಸಾಲ ತೆಗೆದುಕೊಂಡು ಬರುತ್ತಾರೆ. ನಬಾರ್ಡ್ ಅಂದರೆ ರೀಸರ್ವ್ ಬ್ಯಾಂಕ್‌ನದು ಅವರು 2 ಬ್ರಾಂಚ್ ಮಾಡಿಕೊಂಡಿದ್ದಾರೆ, ಒಂದು ರೈತರಿಗೆ ಸಾಲ ಕೊಡುವಂತಹದ್ದು ರೂರಲ್ ಏರಿಯಾಗೆ ಸಾಲ ಕೊಡುವುದು ನಬಾರ್ಡ್ ಮತ್ತೊಂದು ಇಂಡಸ್ಟ್ರಿಯಲ್ ಡೆವಲಪ್‌ಮೆಂಟಿಗೆ ಸಾಲ ಕೊಡುವಂತಹದ್ದು ಐ.ಡಿ.ಬಿ.ಎಲ್. ರೈತರಿಗೆ ಸಾಲ ಕೊಡುವಂತಹದ್ದು ನಬಾರ್ಡ್ ಇಂಡಸ್ಟ್ರಿಗಳಿಗೆ ಸಾಲ ಕೊಡುವಂತಹದ್ದು ಐ.ಡಿ.ಬಿ.ಐ ಅರ್ಬನ್ ಏರಿಯಾಗಳಿಗೆ ಸಾಲ ಕೊಡುವಂತಹದ್ದು ಐ.ಡಿ.ಬಿ.ಐ ಅವರು ಇಂಡಸ್ಟ್ರಿಗಳಿಗೆ ಸಾಲ ಕೊಡುತ್ತಾರೆ. ಗ್ರಾಮಾಂತರ ಪ್ರದೇಶಗಳಿಗೆ ಸಾಲ ಕೊಡುವಂತದ್ದು, ರೈತಾಪಿ ಜನರಿಗೆ ಸಾಲ ಕೊಡುವಂತಹದ್ದು ನಬಾರ್ಡ್. ನಬಾರ್ಡ್‌ನಿಂದ ಸಾಲವನ್ನು ತಂದು ಅಪೆಕ್ಸ್‌ನವರು ತನ್ನ ಕೆಳಗಡೆ ಇರತಕ್ಕ ಬ್ಯಾಂಕುಗಳಿಗೆ, ಸೊಸೈಟಿಗಳಿಗೆ ಹಂಚುತ್ತಾರೆ. ಮತ್ತು ವಸೂಲಿ ಮಾಡುತ್ತಾರೆ. ವಸೂಲಿ ಮಾಡಿ ಮತ್ತೆ ಹಣವನ್ನು ತುಂಬುತ್ತಾರೆ. ಮುಂದಿನ ವರ್ಷ ಮತ್ತೆ ಸಾಲ ತರುತ್ತಾರೆ. ಕಮರ್ಷಿಯಲ್ ಬ್ಯಾಂಕುಗಳಲ್ಲಿ, ಗ್ರಾಮೀಣ ಬ್ಯಾಂಕುಗಳಲ್ಲಿ ಇರುವಂತಹ ಹಣ ಕೇಂದ್ರ ಸರ್ಕಾರದ್ದು. ನಬಾರ್ಡ್‌ನಲ್ಲಿರತಕ್ಕ ದುಡ್ಡು ಕೇಂದ್ರ ಸರ್ಕಾರದ್ದು. ನಮ್ಮದು ಯಾವುದೂ ಇಲ್ಲ. ಅಂದಮೇಲೆ ದುಡ್ಡು ಅವರದು ಇದ್ದಾಗ, ಕಮರ್ಷಿಯಲ್ ಬ್ಯಾಂಕಿನ ಸಾಲಕ್ಕೆ ಒಂದು ನೀತಿ, ಒಂದು ಸ್ಟ್ಯಾಂಡರ್ಡ್ ಮತ್ತು ಕೋ–ಆಪರೇಟಿವ್ ಬ್ಯಾಂಕುಗಳಿಗೆ ಒಂದು ನೀತಿ ಮತ್ತು ಒಂದು ಸ್ಟ್ಯಾಂಡರ್ಡ್ ಅಂದರೆ ನನಗೆ ಅರ್ಥವಾಗುವುದಿಲ್ಲ, ಮಾನ್ಯ ವಿರೋಧಪಕ್ಷದ ನಾಯಕರು ಹೇಳುತ್ತಾ ಇದ್ದರು. ಏನೋ ಬರುತ್ತದೆ ಹಿಡಿಯರಿ, ಬರುತ್ತದೆ ಬಿಟ್ಟುಹೋಗುತ್ತದೆ ಹಿಡಿಯಿರಿ ಅಂದರೆ ಏನು ಹಿಡಿಯುವುದು ? ನಾನು ಅವರ ಜೊತೆಯಲ್ಲಿ ಮಾತನಾಡಿದ್ದೇನೆ ನಾನು ಹೇಳಿದೆ, ಇವತ್ತು ನೀವು ಸಾಲ ಕೊಡುತ್ತಿದ್ದೀರಿ ನಾವಲ್ಲ. ನಾವು ಬರೀ ಏಜೆನ್ಸಿ. Co-operative institutions are only agents to bring money from NABARD; disburse the money through Co-operative Societies to farmers; recover that money, returned that money to NABARD and for the next year. ಇಷ್ಟೆ ನಮ್ಮ ಕೆಲಸ. ಈ ಪರಿಸ್ಥಿತಿ ಇದ್ದಾಗ ನಾನು ಇಷ್ಟೇ ತಮ್ಮನ್ನು ಕೇಳುವಂಥಾದ್ದು. ನಾವು ಬಿಚ್ಚು ಮನಸ್ಸಿನಿಂದ ಪಕ್ಷದ ಕನ್ನಡಕ ತೆಗೆದಿಟ್ಟು ಮಾತನಾಡೋಣ. ಇವತ್ತು ತಾವೇ ಹೇಳಿ ಯಾವ ರೀತಿ ಇದು ರಾಜ್ಯ ಸರ್ಕಾರದ ಜವಾಬ್ದಾರಿ ? ಈಗ ವಿರೋಧಪಕ್ಷದ ಕೆಲವು ಸದಸ್ಯರು ಹೇಳಿದರು, ಬಿ. ಜೆ. ಪಿ. ನಾಯಕರು ಹೇಳಿದರು, ವಿರೋಧ ಪಕ್ಷದ ನಾಯಕರೂ ಹೇಳಿದರು. ಮಧ್ಯಪ್ರದೇಶದಲ್ಲಿ ಹಾಗೆ ಆಯಿತು, ಗುಜರಾತಿನಲ್ಲಿ ಹೀಗೆ ಆಯಿತು ಎಂದು ಹೇಳಿದರು ನಾನು ಅದಕ್ಕೆ ಬರುತ್ತೇನೆ. ಏಕೆ ಆಯಿತು ಏನು ಆಯಿತು ಏನಾಗದೆ ಇನ್ನು ಮುಂದೆ ಏನು ಆಗುತ್ತದೆ ಅದನ್ನು ವಿಚಾರ ಮಾಡೋಣ. ಆದರೆ ಪ್ರಶ್ನೆ ಏನು ಎಂದರೆ, ಈ ಸಾಲದ ಜವಾಬ್ದಾರಿ ಕೇಂದ್ರ ಸರ್ಕಾರದ್ದೋ ಅಥವಾ ರಾಜ್ಯ ಸರ್ಕಾರದ್ದೋ ? ಇದನ್ನು ವಿಚಾರ ಮಾಡಬೇಕಾಗಿದೆ. ಇವತ್ತು ನನಗೆ ತಿಳಿದಂತೆ ಸ್ಪಷ್ಟವಾಗಿ ತಮಗೆ ಹೇಳಬೇಕಾಗಿದ್ದರೆ......

ಶ್ರೀ ಡಿ. ಬಿ. ಚಂದ್ರೇಗೌಡ.— ನ್ಯಾಷನಲೈಸ್ಡ್ ಬ್ಯಾಂಕ್ಸ್ ಆಗಲಿ, ಕಮರ್ಶಿಯಲ್ ಬ್ಯಾಂಕ್ ಆಗಲಿ ಸಾಲ ಕೊಡುವಾಗ ರಾಜ್ಯ ಸರ್ಕಾರ ಜಾಮೀನು ಆಗಿರುವುದಿಲ್ಲವೆ ? ಸಹಕಾರ ಸಂಘಗಳು ಸಾಲ ಕೊಡುವುದೇ ಆಗಲಿ, ಹಂಚುವುದೇ ಆಗಲಿ, ವಸೂಲಿ ಮಾಡುವುದಾಗಲಿ ಅದು ರಾಜ್ಯ ಸರ್ಕಾರದ ಜವಾಬ್ದಾರಿ ಹೌದೋ ಅಲ್ಲವೋ ?

ಶ್ರೀ ವೀರೇಂದ್ರಪಾಟೀಲ್.— ನಾನು ಒಪ್ಪಿಕೊಂಡೆ.

ಶ್ರೀ ಆರ್. ವಿ. ದೇಶಪಾಂಡೆ.— ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ತಾವು ಹೇಳಿದ್ದು ನಿಜ. ಹಣ ಬರುವುದು ನಬಾರ್ಡ್ ಸಂಸ್ಥೆಯಿಂದ ಆದರೆ ನಬಾರ್ಡ್ ಸಂಸ್ಥೆಯಿಂದ ರಿಫೈನಾನ್ಸಿಂಗ್ ಆಗುವುದಕ್ಕೆ ಮುಂಚೆ ಅದಕ್ಕೆ ಸರ್ಕಾರ ಗ್ಯಾರಂಟಿ ಕೊಟ್ಟರೆ ಮಾತ್ರ ಹಣ ಬರುತ್ತದೆ. ಆದ್ದರಿಂದ ನಿಮ್ಮ ಜವಾಬ್ದಾರಿ ಕಡಿಮೆ ಮಾಡುವುದಕ್ಕೆ ಆಗುವುದಿಲ್ಲ. ಅದೇ ಪ್ರಕಾರ ಡಿಬೆಂಚರ್ ಏನು ಫ್ಲೋಟ್ ಆಗುತ್ತವೆ, ಆ ಡಿಬೆಂಚರ್ ಫ್ಲೋಟೇಷನ್‌ನಲ್ಲಿ ಸಹ ತಮ್ಮ ಕಾಂಟ್ರಿಬ್ಯೂಷನ್ ಇದೆ. ರಾಜ್ಯ ಸರ್ಕಾರ ಪ್ರತಿ ವರ್ಷ ಸಹಕಾರ ಇಲಾಖೆಯ ಮುಂಗಡ ಪತ್ರದಲ್ಲಿ ಪ್ರಾವಿಜನ್ ಮಾಡಿ ತಾವು ಕಾಂಟ್ರಿಬ್ಯೂಟ್ ಮಾಡುತ್ತೀರಿ. ಹೀಗಾಗಿ ಇವತ್ತು ರಾಜ್ಯ ಸರ್ಕಾರ ತಮ್ಮನ್ನೂ ಜವಾಬ್ದಾರಿ ಇಲ್ಲವೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್.— ನಾನು ಒಪ್ಪುತ್ತೇನೆ, ನಾವು ಗ್ಯಾರಂಟಿ ಕೊಡುತ್ತೇವೆ. ಏನು ಗ್ಯಾರಂಟಿ ಕೊಡುತ್ತೇವೆ ? ವಸೂಲು ಮಾಡಿ ತಂದುಕೊಡುತ್ತೇವೆ ಎಂದು ಗ್ಯಾರಂಟಿ ಕೊಡುತ್ತೇವೆ. ಈ ಗ್ಯಾರಂಟಿ ಕೊಡುವುದಕ್ಕೆ ನಾವು ತಯಾರಿದ್ದೇವೆ. ಆ ದುಡ್ಡು ಅವರದ್ದು, ಮತ್ತು ಅದನ್ನು ವಸೂಲಿ ಮಾಡಿ ತಂದುಕೊಡುತ್ತೇವೆ ಎಂದು ಜವಾಬ್ದಾರಿ ಹೊತ್ತಿದ್ದು ನಾವು. ಏಕೆಂದರೆ ಸಾಲ ತೆಗೆದು ಕೊಂಡ ರೈತ ಇರುವುದು ಇಲ್ಲಿ. ನಮ್ಮ ರಾಜ್ಯದಲ್ಲಿ ರೈತ ಏನಾದರೂ ಕೊಡುವುದಕ್ಕೆ ಹಿಂದುಮುಂದೆ ನೋಡಿದರೆ, ಅಥವಾ ರೈತ ಏನಾದರೂ ಡಿಫಾಲ್ಟರ್ ಆದರೆ, ವಸೂಲು ಮಾಡುವುದಕ್ಕೆ ನಮ್ಮ ಸಿಬ್ಬಂದಿಯನ್ನು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ, ಹೊರತಾಗಿ ನಬಾರ್ಡ್‌ನವರು ಪ್ಯಾರಲಲ್ ಆರ್ಗನೈಸೇಷನ್ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಒಂದೊಂದು ಸಲ ಪರಿಸ್ಥಿತಿ ಏನು ಬರುತ್ತದೆ ಎಂದರೆ, ದುಡ್ಡು ವಸೂಲು ಆಗದೇ ಹೋದರೆ ಗವರ್ನಮೆಂಟ್ ಡ್ಯೂಸ್ ಅನ್ನು ವಸೂಲು ಮಾಡುವ ಹಾಗೆ, ರಿಕವರಿ ಮಾಡಲು ಹರಾಜು ಹಾಕುತ್ತಾರೆ. ನಬಾರ್ಡ್‌ನವರು ಬಂದು ಹರಾಜು ಮಾಡು ತ್ತಾರೆಯೇ ? ರಾಜ್ಯ ಸರ್ಕಾರದ ಮಿಶಿನರಿಯನ್ನು ಉಪಯೋಗಿಸಿಕೊಂಡು ಇದನ್ನು ಮಾಡಬೇಕಾಗಿದೆ ಎನ್ನುವುದಕ್ಕಾಗಿ ಈ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇವೆ. ಅದರ ಪ್ರಕಾರ ಅವರು ಹಣ ಕೊಡುತ್ತಾರೆ. ಆದರೆ ಹಣ ಕೊಟ್ಟಮೇಲೆ ಅದನ್ನು ತಂದುಕೊಡಿರಿ ಎಂದು ಅವರು ಹೇಳುತ್ತಾರೆ. ಈ ಜವಾಬ್ದಾರಿಯನ್ನು ಇವತ್ತು ತೆಗೆದುಕೊಳ್ಳುವುದಕ್ಕೆ ನಾವು ತಯಾರಿದ್ದೇವೆ. ಆದರೆ ನೀವು ಇಲ್ಲ, ರಿಕವರಿ ಪೋಸ್ಟ್‌ಪೋನ್ ಮಾಡಿ, ಸ್ಟೇ ಮಾಡಿ ಎಂದು ಹೇಳುತ್ತೀರಿ. ಒಂದು ಕಡೆ ಈ ಜವಾಬ್ದಾರಿ ತೆಗೆದುಕೊಳ್ಳಿ ಎಂದು ಹೇಳುತ್ತೀರಿ. ಹೌದು, ನಾವು ವಸೂಲು ಮಾಡುತ್ತೇವೆ ಎಂದು ಹೇಳಿದೆ. ಇದೇ ಸದನದಲ್ಲಿ ನೀವು ಹೇಳಿದಿರಿ ಇಲ್ಲ. ವಸೂಲು ಮಾಡುವುದಕ್ಕೆ ಆಗುವುದಿಲ್ಲ, ವಸೂಲು ಮಾಡಬಾರದು ಎಂದು ಹೇಳಿದಿರಿ, ಶ್ರೀ ಯಡಿಯೂರಪ್ಪನವರು ಇದರ ಮೇಲೆ ಹಠ ಮಾಡಿ ಧರಣಿ ಮಾಡಿದರು......

ಶ್ರೀ ಬಿ. ಎಸ್. ಯಡಿಯೂರಪ್ಪ. — ಇವತ್ತು ಕೂಡ ಅದನ್ನೇ ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.— ನಿಮ್ಮ ಬಗ್ಗೆ ತಕರಾರು ಅಲ್ಲ. ಇಲ್ಲಿ ತಕರಾರು ಆಗಿದೆ. ಅದಕ್ಕಾಗಿ ಇವತ್ತು ನಾನು ಹೇಳುವುದು ಏನೆಂದರೆ, ಈ ಸಾಲ ಕೇಂದ್ರ ಸರ್ಕಾರದಿಂದ ಬಂದಿದ್ದೊ ಅಥವಾ ರಾಜ್ಯ ಸರ್ಕಾರದ್ದೋ ? ಇದು ನಮ್ಮ ಸಾಲ ಇದ್ದು, ಅದಕ್ಕಾಗಿ ನಮ್ಮ ಸಾಲ ಮನ್ನಾ ಮಾಡುತ್ತೇವೆ, ಕೇಂದ್ರ ಸರ್ಕಾರ ಅರ್ಧಭಾಗ ಕೊಡಲು ಮುಂದೆ ಬಂದಿದೆ ಎನ್ನುವ ಮಾತನ್ನು ನಾವು ಹೇಳಬಹುದಾಗಿತ್ತು. ಆದರೆ ಪರಿಸ್ಥಿತಿ ಹಾಗೆ ಇಲ್ಲ. ಅವರು ಹೇಳುವ ಪ್ರಕಾರ ಅದು ಪೂರ್ತಿಯಾಗಿ ಕೋಆಪರೇಟಿವ್ ಬ್ಯಾಂಕ್‌ಗಳ ಲೋನ್ ಇರಲಿ, ಕಮರ್ಷಿಯಲ್ ಬ್ಯಾಂಕ್ ಲೋನ್ ಇರಲಿ, ರೈತರ ಸಾಲ ಮನ್ನಾ ಮಾಡುವಂಥ ಪೂರ್ತಿ ಜವಾಬ್ದಾರಿ ಕೇಂದ್ರ ಸರ್ಕಾರದ್ದು ಹೊರತಾಗಿ ರಾಜ್ಯ ಸರ್ಕಾರದ್ದು ಅಲ್ಲ.

ಈಗ ಪ್ರಶ್ನೆ ಏನೆಂದರೆ. ಕೇಂದ್ರ ಸರ್ಕಾರದವರು ಯೋಜನೆ ಮಾಡಿದ್ದಾರೆ. ಈಗ ನಡೆಯುವುದರಲ್ಲಿ, ಅವರ ಯೋಜನೆ ಅಜಗಜಾಂತರ ವ್ಯತ್ಯಾಸ ಕಂಡುಬರುವಂಥ ಯೋಜನೆ. ನಾನು ಇಷ್ಟು ತಮ್ಮನ್ನು ಕೇಳುತ್ತೇನೆ. ತಾವು ತಮ್ಮ ಆತ್ಮಸಾಕ್ಷಿಯಾಗಿ ಪ್ರಶ್ನೆ ಹಾಕಿಕೊಂಡು ಜವಾಬು ಕೊಡಿ. ಕೇಂದ್ರ ಸರ್ಕಾರದವರು ಅಂದರೆ ರಾಷ್ಟ್ರೀಯ ರಂಗ ಸರ್ಕಾರ, ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಜನತೆಗೆ ಏನು ಭರವಸೆ ಕೊಟ್ಟಿದ್ದರೋ, ಅದರ ಪ್ರಕಾರ ಈ ಯೋಜನೆಯನ್ನು ಮಾಡಿದ್ದಾರೆಯೇ ? ಈಗ ನಾನು ಮತ್ತೆ ಚುನಾವಣಾ ಪ್ರಣಾಳಿಕೆಯನ್ನು ಓದಬೇಕಾಗುತ್ತದೆ. ಇದು ಜನತಾದಳಕ್ಕೆ ಏನಾಗಿದೆ ಎಂದರೆ ಬಿಸಿ ತುಪ್ಪ ಬಾಯಿಗೆ ಇಟ್ಟ ಹಾಗೆ ಆಗಿದೆ. ಉಗಿಯುವುದಕ್ಕೂ ಬರುವುದಿಲ್ಲ, ನುಂಗುವುದಕ್ಕೂ ಬರುವುದಿಲ್ಲ. ಅವರು, ಆ ರೀತಿ ಮಾಡಿದ್ದಾರೆಂದು ಹೇಳಿದರೆ, ಆತ್ಮ ವಂಚನೆ ಮಾಡಿಕೊಂಡ ಹಾಗೆ ಆಗುತ್ತದೆ, ಈ ಸ್ಕೀಮು ಅವರ ಭರವಸೆ ಪ್ರಕಾರ ಆಗಿದೆಯೇ ? ತಾವೇ ಹೇಳಿ.

ಶ್ರೀ ಹೆಚ್. ಏಕಾಂತಯ್ಯ.—ಜನತಾದಳ ಮಾತ್ರ ಈ ರೀತಿ ಹೇಳಿದೆಯೆಂದಲ್ಲ, ಸ್ವಾತಂತ್ರ್ಯ ನಂತರ ಬಂದ ನಮ್ಮ ಎಲ್ಲಾ ರಾಜಕೀಯ ಪಕ್ಷಗಳೂ ಚುನಾವಣಾ ಘೋಷಣೆ ಮಾಡಿವೆ. ಆದರೆ, ಎಲ್ಲಾ ಆಶ್ವಾಸನೆಗಳನ್ನೂ ಈಡೇರಿಸುವಂಥ ಸರ್ಕಾರ ಈ ದೇಶದಲ್ಲಿ ಬಂದಿಲ್ಲ. ತಾವು ಅದನ್ನೇ ಒಂದು ನೆಪವಾಗಿ ಇಟ್ಟುಕೊಂಡು ಹೇಳುವುದಾದರೆ, ಅದು ತಮಗೆ ಬಿಟ್ಟಿದ್ದು. ಹಿಂದೆ ಬಡತನ ನಿರ್ಮೂಲ ಮಾಡುತ್ತೇವೆಂದು ಹೇಳಿದ್ದೀರಿ, ಅದು ಆಗಲಿಲ್ಲ. ಆದ್ದರಿಂದ ನಿಮ್ಮ ವಾದವನ್ನು ನಾವು ಒಪ್ಪುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಏಕಾಂತಯ್ಯನವರು ಹೇಳಿದಂಥ ಮಾತನ್ನು ನಾನು ಒಪ್ಪುತ್ತೇನೆ, ಚುನಾವಣೆ ಪ್ರಾರಂಭದಿಂದ ನಮ್ಮ ದೇಶದಲ್ಲಿ. ಸ್ವಾಭಾವಿಕವಾಗಿ ಎಲ್ಲಾ ವಿರೋಧ

ಪಕ್ಷಗಳೂ, ಆಳುವ ಪಕ್ಷಗಳೂ, ರಾಜಕೀಯ ಪಕ್ಷಗಳೂ ಚುನಾವಣಾ ಘೋಷಣೆ ಮಾಡುತ್ತವೆ. ಆದರೆ ಯಾರೂ ಚುನಾವಣಾ ಘೋಷಣೆ ಮಾಡಿದಂತೆ ನಡೆದಿಲ್ಲ ಎನ್ನುವುದನ್ನು ಅವರೇ ಒಪ್ಪಿದ್ದಾರೆ. ಅಂದರೆ, ರಾಷ್ಟ್ರೀಯ ರಂಗ ಸರ್ಕಾರ ಆ ಪಂಗಡಕ್ಕೆ ಸೇರಿದಂಥ ಪಕ್ಷ ಎಂಬುದನ್ನು ಒಪ್ಪಿದ ಹಾಗೆ ಆಯಿತು. ಆನಂತರ, ಏನಾಯಿತೆಂದರೆ, ಹಿಂದೆ ಮೌಲ್ಯಾಧಾರಿತ ಸರ್ಕಾರ ಕರ್ನಾಟಕದಲ್ಲಿತ್ತು ಅದು ಹೋಯಿತು, ಅದು ಬೇರೆ.

ಶ್ರೀ ಆರ್. ವಿ. ದೇಶಪಾಂಡೆ.—ಮಿಸ್ಟರ್ ಕ್ಲೀನ್ ಎಂದು ಹೇಳಿದವರು, ಮತ್ತೆ ಬೊಫೋರ್ಸ್ ಇದೆಲ್ಲಾ ಎಲ್ಲಿ ಹೋಯಿತು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಏಕಾಂತಯ್ಯನವರು ಏನು ಹೇಳಿದ್ದಾರೆ, ಅದಕ್ಕೆ ನಾನು ಉತ್ತರ ಕೊಡುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಿಸ್ಟರ್ ಕ್ಲೀನ್ ಎಂದು ಹೇಳಿಕೊಂಡು ಬಂದವರು, ಕ್ಲೀನ್ ಬೋಲ್ಡ್ ಆಗಿದ್ದಾರೆ...

ಶ್ರೀ ವೀರೇಂದ್ರ ಪಾಟೀಲ್.—ಪ್ರಜಾಪ್ರಭುತ್ವದಲ್ಲಿ ಏರುಪೇರುಗಳು ಇರುತ್ತವೆ. ನಾವು ಹೇಳುವ ವಿಚಾರ ಬೇರೆ. ೧೯೭೭ರಲ್ಲಿ ಏನಾಯಿತು, ೧೯೮೦ರಲ್ಲಿ ಏನಾಯಿತು, ೧೯೮೯ರಲ್ಲಿ ಏನಾಯಿತು ಎಂಬುದನ್ನು ಹೇಳುವುದಕ್ಕೆ ಹೋಗುವುದಿಲ್ಲ, ಅವಕ್ಕೆಲ್ಲಾ ಇತಿಹಾಸ ಇದೆ. ನಾನು ಅದಕ್ಕೆ ಹೋಗುತ್ತಾ ಇಲ್ಲ. ಏಕಾಂತಯ್ಯನವರು ಸ್ಪಷ್ಟವಾಗಿ ಹೇಳಿದರು, ಯಾರೂ ಕೂಡ ಚುನಾವಣಾ ಪ್ರಣಾಳಿಕೆಯನ್ನು ಓದಿ ಓಟು ಕೊಡುವುದಿಲ್ಲ. ಆದರೆ ಚುನಾವಣಾ ಪ್ರಣಾಳಿಕೆ ಮಾಡಿದಂಥ ಪಕ್ಷದವರು ಅಧಿಕಾರಕ್ಕೆ ಬಂದು, ಅದನ್ನು ಈಡೇರಿಸದೇ ಇದ್ದರೆ ಸಿಕ್ಕಿ ಬೀಳುತ್ತಾರೆ. ಇವತ್ತು ನಾವು ಈ ಕಡೆ ಕುಳಿತಿದ್ದೇವೆ, ಕೇಂದ್ರದಲ್ಲಿ ಆ ಕಡೆ ಕುಳಿತಿದ್ದೇವೆ. ನಾವು ಮೌಲ್ಯಾಧಾರಿತ ವಾದ ಮಾಡಿ ಅಧಿಕಾರಕ್ಕೆ ಬಂದಿಲ್ಲ. ಹಿಂದಿನ ಚರಿತ್ರೆಯನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ರಾಷ್ಟ್ರೀಯ ರಂಗ ಸರ್ಕಾರದವರೇ ಹೇಳುತ್ತಿದ್ದಾರೆ. ನಮ್ಮದು ವ್ಯಾಲ್ಯೂ ಬೇಸ್ಡ್ ಪಾಲಿಟಿಕ್ಸ್ ಎಂದು ಅವರು ಹೇಳುತ್ತಿದ್ದಾರೆ. ವ್ಯಾಲ್ಯೂ ಬೇಸ್ಡ್ ಪಾಲಿಟಿಕ್ಸ್ ಎಂದರೆ ಇದೇನಾ? ಹೇಳುವುದು ಒಂದು ಮಾಡುವುದು ಒಂದು. Is it value based politics ?

ಶ್ರೀ ಡಿ. ಬಿ. ಚಂದ್ರೇಗೌಡ.—ಅದಕ್ಕೆ ೫ ವರ್ಷ ಸಂಪೂರ್ಣ ಇದೆ, ೬ ತಿಂಗಳಲ್ಲಿ ಟೆಸ್ಟ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಇವತ್ತು ಕೇಂದ್ರ ಸರಕಾರದವರು, ಇದು ಫಸ್ಟ್ ಇನ್‌ಸ್ಟಾಲ್‌ಮೆಂಟ್ ಆಫ್ ಅಷ್ಯೂರೆನ್ಸ್ ಎಂದು ಹೇಳಿಲ್ಲ. ಅವರು ಆ ರೀತಿ ಹೇಳಿದ್ದರೆ ನಾನು ಅದನ್ನು ಸ್ವಾಗತ ಮಾಡುತ್ತಿದ್ದೆ. ಅವರು ಏನು ಹೇಳಿದ್ದಾರೆ ಎಂದರೆ, ಇದು ಫಸ್ಟ್ ಅಂಡ್ ಫೈನಲ್ ಎಂದು ಹೇಳಿದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಹಿಂದಿನ ಸರ್ಕಾರ ರೈತರ ಸಾಲ ಮನ್ನಾ ಮಾಡುವುದಕ್ಕೆ ವಿರೋಧವಾಗಿತ್ತು. ಇವರು ಅಷ್ಟಾದರೂ ಹೇಳಿದ್ದಾರೆ,

ಅಧ್ಯಕ್ಷರು.—ಅವರು ಈಲ್ಡ್ ಆಗದೇ ಹೋದರೆ ನೀವು ಯಾರು ಮಾತನಾಡಬೇಡಿ. ನೀವು ಹೇಳುವುದನ್ನು ಅವರು ಸಾವಧಾನವಾಗಿ ಕೇಳಿದ್ದಾರೆ. ಅವರು ಹೇಳುವುದನ್ನೂ ನೀವು ಕೇಳುವಂತಹ ಔದಾರ್ಯ ತೋರಿಸಬೇಕು. ಅವರು ಈಲ್ಡ್ ಆದರೆ ನನ್ನ ಆಕ್ಷೇಪಣೆ ಇಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಚಂದ್ರೇಗೌಡರು ಒಂದು ಮಾತು ಹೇಳಿದರು. ನಿಜ ಇದ್ದರೆ ಅದನ್ನು ಸ್ವಾಗತ ಮಾಡುವುದಕ್ಕೆ ತಯಾರಾಗಿದ್ದೇನೆ. ಯಾವುದೇ ರಾಜಕೀಯ ಪಕ್ಷ ಚುನಾವಣಾ ಪ್ರಣಾಳಿಕೆ ಮುಖಾಂತರ ಏನು ಆಶ್ವಾಸನೆ ಕೊಡುತ್ತದೆ, ಅದು ೬ ತಿಂಗಳದ್ದಲ್ಲ, ಒಂದು ವರ್ಷದ್ದಲ್ಲ, ಅದು ಐದು ವರ್ಷಗಳ ಆಶ್ವಾಸನೆ ಎಂದು ಒಪ್ಪಿಕೊಳ್ಳುತ್ತೇನೆ. ಇದು ಐದು ವರ್ಷದ ಆಶ್ವಾಸನೆ. ಅದರಲ್ಲಿ ಇದು ಮೊದಲನೆಯ ಕಂತು ಎಂದು ಕೇಂದ್ರ ಸರ್ಕಾರ ಹೇಳಿದರೆ ನನಗೆ ಯಾವ ತರಹದ ಅಡ್ಡಿಯೂ ಇಲ್ಲ. ಅವರು ಇದು ಮೊದಲನೆಯ ಕಂತು, ಇದೇ ಫೈನಲ್ ಅಲ್ಲ ಎಂಬ ಮಾತನ್ನು ಹೇಳಿದ್ದರೆ ಯಾವ ತರಹದ ಅಡ್ಡಿಯೂ ಇರಲಿಲ್ಲ. ಆದರೆ ವಾತಾವರಣ ಹಾಗೆ ಇದ್ದ ಹಾಗೆ ಕಾಣುವುದಿಲ್ಲ. ಅವರು ಇದೇ ಫಸ್ಟ್ ಅಂಡ್ ಫೈನಲ್, ಫಸ್ಟ್ ಅಂಡ್ ಲಾಸ್ಟ್ ಎಂದು ಹೇಳಿದ್ದಾರೆ. ಅದಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ, ಈ ಹೇಳಿಕೆಗೂ ಅವರು ಕೊಟ್ಟ ಭರವಸೆಗೂ ಬಹಳ ವ್ಯತ್ಯಾಸ ಇದೆ. ಹೇಗೆ ವ್ಯತ್ಯಾಸ ಇದೆ ಎಂಬುದನ್ನು ಕ್ಲಿಯರ್ ಆಗಿ ಹೇಳಿದ್ದೇನೆ. ಯಾರೋ ಬರೆದರು, ಯಾರೋ ಹಂಚಿದರು. ಯಾರೋ ಓದಿದರು ಎಂದು ಹೇಳಬಹುದು. ಇದು ಆಗುತ್ತದೆ, ಇಲ್ಲ ಎಂದು ಹೇಳುವುದಿಲ್ಲ. ವ್ಯಾಲ್ಯೂ ಬೇಸ್ಡ್ ಪಾಲಿಟಿಕ್ಸ್

ಪ್ರಾಕ್ಟೀಸ್ ಮಾಡುವ ನಾಯಕರಲ್ಲಿ ಮಾರಲ್ ಕರೇಜ್ ಅಂದರೆ ನೈತಿಕ ಧೈರ್ಯಬೇಕು. ಮಹಾತ್ಮಾ ಗಾಂಧೀಜಿಯವರು ಹಿಂದೆ ಹೇಳಿದ್ದರು. ಇತಿಹಾಸ ಇದೆ. I have committed a Himalayan blunder—ಎಂದು ಹೇಳಿದ್ದಾರೆ. ತಪ್ಪು ಮಾಡಿದಾಗ ಮಾಡಿದ್ದೇನೆ ಎಂದು ಹೇಳುವುದಕ್ಕೆ ಅವರು ಹಿಂದೆ ಮುಂದೆ ನೋಡಲಿಲ್ಲ. ಇವತ್ತು ಕೇಂದ್ರ ಸರಕಾರ, ಪ್ರಧಾನಮಂತ್ರಿಗಳು ಹಣಕಾಸಿನ ಮಂತ್ರಿಗಳು ಈ ರೀತಿ ಆಗುತ್ತದೆ ಎಂದು ಗೊತ್ತಿರಲಿಲ್ಲ. ಏನೋ ಹೇಳಿ ಬಿಟ್ಟಿದ್ದೇವೆ ಆಗುವುದಿಲ್ಲ ಕ್ಷಮಿಸಬೇಕು ಎಂದು ಹೇಳಿದರೆ ಏನೂ ಅಡ್ಡಿ ಇಲ್ಲ. ಆ ರೀತಿ ಹೇಳಿದರೆ ಯಾರೂ ಏನೂ ಹೇಳುವುದಿಲ್ಲ. ಆದರೆ ನಾವು ಆಶ್ವಾಸನೆ ಕೊಟ್ಟ ಪ್ರಕಾರ ಯೋಜನೆ ಮಾಡಿದ್ದೇವೆ ಎಂದು ಹೇಳಿದರೆ, ಅದು ಜನರ ಕಣ್ಣಲ್ಲಿ ಮಣ್ಣು ಹಾಕುವಂತಹ ಪ್ರಯತ್ನ ಮಾಡಿದ್ದಾರೆ ಎಂಬ ಮಾತನ್ನು ಹೇಳುತ್ತಾರೆ. ನೀವು ಏನು ಭರವಸೆ ಕೊಟ್ಟಿದ್ದೀರಿ ಎಂದರೆ "loans up to Rs. 10,000 of small and marginal farmer and landless cultivators and artisans as on October 2nd, 1989 would be written off". ನಾವು ಬಾಕಿ ಇರುವಂತಹ ಲೋನ್ಸ್ ಮಾಫಿ ಮಾಡುತ್ತೇವೆಂದು ನೀವು ಹೇಳಿಲ್ಲ ಲೋನ್ಸ್ ಎಂದರೆ ಅವತ್ತಿನ ದಿವಸ ಲೋನ್ ಇದ್ದರೆ ಆಯಿತು. ಅವತ್ತಿನ ದಿವಸ ಸಾಲಗಾರ ಇದ್ದರೆ, ಸಾಲ ಪಡೆದಿದ್ದರೆ ಸಾಕು. ನೀವು ಹೇಳುವ ಪ್ರಕಾರ "Loans up to Rs. 10,000 of small and marginal farmers and landless cultivators and artisans as an October 2nd, 1989 would be written off". ಎಂದು ಸ್ಪಷ್ಟವಾಗಿ ಹೇಳಿದ್ದೀರಿ.—ಆದರಲ್ಲಿ ಇಂಟರ್‌ಪ್ರಿಟೇಷನ್ ಮಾಡುವುದಕ್ಕೆ, ವಾದ ಮಾಡುವುದಕ್ಕೆ, ಯಾವ ರೀತಿಯಿಂದಾದರೂ ಎರಡನೇ ವ್ಯಾಖ್ಯಾನ ಮಾಡುವುದಕ್ಕೆ ಅವಕಾಶ ಇಲ್ಲ. ಅಲ್ಲಿಂದ ಇನ್ನೂ ಮುಂದೆ ಈ ರೀತಿ ಹೇಳಿದ್ದಿರಿ. "NABARD will provide loans for farmers at concessional rate of interest through co-operative banks" ಪರಿಸ್ಥಿತಿ ಏನಾಗಿದೆ ಎಂದರೆ, ನಾವು ಕನ್‌ಸೇಷನಲ್ ರೇಟ್ ಆಫ್ ಇಂಟರೆಸ್ಟ್ ಕೊಡುತ್ತೇವೆಂದು ಹೇಳಿದರೂ, ರೇಟ್ ಆಫ್ ಇಂಟರೆಸ್ಟ್‌ನಲ್ಲಿ ಸಬ್ಸಿಡಿ ಕೊಡುತ್ತೇವೆಂದರೂ ನಮ್ಮ ಕುತ್ತಿಗೆ ಹಿಡಿದಿದ್ದಾರೆ ನಿಮ್ಮ ಕುತ್ತಿಗೆ ಯನ್ನೂ ಹಿಡಿದಿದ್ದರು. ನೀವು ಇದ್ದ ಕಾಲಕ್ಕೆ ನೀವೂ ಈಲ್ಡ್ ಆಗಿದ್ದೀರಿ. ನಾವು ಈಲ್ಡ್ ಆಗಿ ಬೇರೆ ದಾರಿ ಹುಡುಕುತ್ತಿದ್ದೇವೆ. ಅದನ್ನು ಒಪ್ಪುತ್ತೇನೆ. ಸಾಲ ಮನ್ನಾ ಮಾಡುವ ಜವಾಬ್ದಾರಿ ತೆಗೆದು ಕೊಂಡದ್ದು, ಕೇಂದ್ರ ಸರಕಾರ, ಕೇಂದ್ರದಲ್ಲಿ ಅಧಿಕಾರದಲ್ಲಿ ಬಂದಿರುವಂತಹ ಪಕ್ಷವೇ ಹೊರತಾಗಿ ನನ್ನ ಪಕ್ಷ ಅಲ್ಲ. ನಾನು ಈಗಾಗಲೇ ಹೇಳಿದ್ದೇನೆ. ನಮ್ಮ ಪಕ್ಷ ಸರ್ವಥಾ ಈ ಜವಾಬ್ದಾರಿಯನ್ನು ತೆಗೆದು ಕೊಂಡಿಲ್ಲ. ವಿರೋಧಪಕ್ಷದ ನಾಯಕರು ಹೇಳಿದ ಹಾಗೆ, ಕೇಂದ್ರದ ಮೇಲೆ ಒತ್ತಾಯ ತರುವಂತಹ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇವೆ. ಇಲ್ಲಿಯವರೆಗೆ ಶಕ್ತ್ಯಾನುಸಾರ ಏನು ಮಾಡಬೇಕಾಗಿತ್ತು ಅದನ್ನು ಮಾಡಿದ್ದೇವೆ.

೪–೨೫ ಪಿ. ಎಂ.

ಶ್ರೀ ಬಿ ಎಸ್. ಯಡಿಯೂರಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಒಂದು ನಿಮಿಷ ಈಲ್ಡ್ ಆಗುವುದಾದರೆ ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಇವತ್ತು ಕೇಂದ್ರ ಸರ್ಕಾರ ಏನು ಹೇಳಿದೆ ಅದನ್ನು ಇಂಪ್ಲಿಮೆಂಟ್ ಮಾಡಿರುವಂಥಾದ್ದರಲ್ಲಿ ಅನ್ಯಾಯವಾಗಿದೆ ಎನ್ನುವುದರಲ್ಲಿ ನಮ್ಮದು ಯಾರದೂ ಭಿನ್ನಾಭಿಪ್ರಾಯ ಇಲ್ಲ. ಒಂದು ಮಾತನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಫಸ್ಟ್ ಟೈಮ್ ರೈತರ ಬಗ್ಗೆ ಅವರು ಹೇಳಿದಂತಹ ಮಾತಿನಲ್ಲಿ ಅಲ್ಪ ಸ್ವಲ್ಪಸಹಾಯ ಮಾಡುವಂತಹ ಪ್ರಯತ್ನ ಮಾಡಿದ್ದಾರೆ. ಆ ಬಗ್ಗೆ ನಮ್ಮದು ಸಂಪೂರ್ಣ ವಿರೋಧ ಇದೆ. ರೈತರ ಬಗ್ಗೆ ರೈತರ ದೃಷ್ಟಿಯಿಂದ ನಾವು ಇದನ್ನು ವಿರೋಧ ಮಾಡುತ್ತೇವೆ. ನಾನು ತಮ್ಮಲ್ಲಿ ಕೇಳುವುದೇನೆಂದರೆ, ಇವತ್ತು ಕೇಂದ್ರ ಸರ್ಕಾರ ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ಈ ವಿಷಯವನ್ನು ಹೊರಡಿಸುವಾಗ ಅವರ ಜ್ಯೂರಿಸ್‌ಡಿಕ್‌ಷನ್‌ನಲ್ಲಿ ಮಾತನಾಡಿದ್ದಾರೆ. ಇವತ್ತು ನಾವು ಆರ್ಗ್ಯುಮೆಂಟ್ಸ್ ಮಾಡತಕ್ಕಂಥಾದ್ದು, ಬೇರೆಯವರು ಆರ್ಗ್ಯುಮೆಂಟ್ಸ್ ಮಾಡತಕ್ಕಂಥಾದ್ದು ಏನೆಂದರೆ, ರಾಜ್ಯಾಂಗದ ಪ್ರಕಾರ ಕೋ–ಆಪರೇಟಿವ್ ಲೋನ್ಸ್ ಡಿಸ್ಟ್ರಿಬ್ಯೂಟ್ ಮಾಡಿದ್ದೇವೆ. ಇದು ಆಯಾಯಾ ರಾಜ್ಯಗಳಿಗೆ ಸಂಬಂಧಪಟ್ಟ ವಿಷಯ. ಇದರ ಬಗ್ಗೆ ಚಕಾರ ಎತ್ತಿಲ್ಲ. ರಾಜ್ಯ ಸರ್ಕಾರಗಳು ಕೋ–ಆಪರೇಟಿವ್ ಲೋನ್ ಕೊಟ್ಟಿರುವ ಬಗ್ಗೆ ಯೋಚನೆ ಮಾಡದೆ ಇರುವಂತಹ ಪರಿಸ್ಥಿತಿಯಲ್ಲಿ, ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಮಧ್ಯ ಪ್ರದೇಶದ ಸರ್ಕಾರ ಮತ್ತು ಮಹಾರಾಷ್ಟ್ರದ ಸರ್ಕಾರಗಳು ಮಾತುಕತೆ ನಡೆಸಿವೆ. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ ಎಂದು ಹೇಳಿದಾಗ, ಕೇಂದ್ರ ಸರ್ಕಾರದವರು ಈ

ಲೋನ್‌ಗಳಿಗೆ ೫೦ ಪರ್ಸೆಂಟ್ ಸಹಾಯ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಇದರ ಬಗ್ಗೆ ಯೋಜನೆ ಮಾಡಬೇಕಾಗಿಲ್ಲವೆ? ಆದ್ದರಿಂದ ತಾವೂ ಸಹ ದಯವಿಟ್ಟು ಯಾರಾದರೂ ಪರಿಣಿತರು ಇದ್ದರೆ ಅವರ ಸಲಹೆಯನ್ನು ತೆಗೆದುಕೊಂಡು ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಿ. ಇದುವರೆವಿಗೂ ಆದ ಸ್ಪಷ್ಟ ಸಂಗತಿ ಎಂದರೆ, ನಿಮಗೂ ಈ ಬಗ್ಗೆ ಕಳಕಳಿ ಇದ್ದರೆ, ಬೇರೆ ಬೇರೆ ರಾಜ್ಯಗಳ ಮೂರು ಜನ ಮುಖ್ಯ ಮಂತ್ರಿಗಳು ಸೇರಿ, ಕೇಂದ್ರದ ಮೇಲೆ ಒತ್ತಾಯ ತಂದಂತಹ ಸಂದರ್ಭದಲ್ಲಿ ಇದು ಕೇಂದ್ರ ಸರ್ಕಾರದ ಜವಾಬ್ದಾರಿಯಲ್ಲ; ನಾವು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ ಇದು ರಾಜ್ಯ ಸರ್ಕಾರಗಳಿಗೆ ಸೀಮಿತವಾದ ಪ್ರಶ್ನೆ; ಆದರೂ ನಮ್ಮಗಳ ಹಣಕಾಸಿನ ಪರಿಸ್ಥಿತಿ ಸರಿಯಾಗಿ ಇಲ್ಲದೇ ಇರುವುದು ಸತ್ಯ ಸಂಗತಿಯಾಗಿದೆ, ಅದಕ್ಕೆ ನೀವು ನಮಗೆ ಸಹಾಯ ಮಾಡಿ ಎಂದು ಕೇಳಿಕೊಂಡು ಅವರಿಂದ ಸಹಾಯ ತೆಗೆದುಕೊಂಡು ರೈತರಿಗೆ ಕೊಟ್ಟಿದ್ದಾರೆ. ಅದೇ ರೀತಿ ತಾವು ಸಹಾಯ ತೆಗೆದುಕೊಂಡು ಸಹಾಯ ಮಾಡಬೇಕು. ಇದರ ಬಗ್ಗೆ ತಮ್ಮ ಸ್ಪಷ್ಟವಾದ, ಸತ್ಯವಾದ ಅಭಿಪ್ರಾಯ ನಮಗೆ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೆ. ಮಾನ್ಯ ಯಡಿಯೂರಪ್ಪನವರು ಹೇಳಬಹುದು ಇದರ ಬಗ್ಗೆ ಸಾಲ ಪಡೆದುಕೊಳ್ಳುವಂತಹ ಅವಶ್ಯಕತೆ ಇಲ್ಲ. ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ನನಗೆ ಅವರು ಲಿಖಿತ ಮೂಲಕ ಜವಾಬ್ದಾರಿಯುತವಾದ ಪತ್ರ ಬರೆದಿದ್ದಾರೆ. ಆ ಪತ್ರದ ಕಾಪಿ ಬೇಕಾದರೆ ನಾನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕಳುಹಿಸಿಕೊಡಿ.

ಶ್ರೀ ವೀರೇಂದ್ರಪಾಟೀಲ್.—ಇದರ ಬಗ್ಗೆ ಇವತ್ತು ನಾವು ಸಾಲ ಪಡೆದುಕೊಳ್ಳಬೇಕಾಗಿಲ್ಲ. ಕೋ-ಆಪರೇಟಿವ್ ಲೋನ್ಸ್ ನಮ್ಮ ಲೋನ್ಸ್ ಅಲ್ಲ ಎಂದು ಅವರು ಸಾಕಷ್ಟು ಸಾರಿ ಹೇಳಿದ್ದಾರೆ. ಮತ್ತೆ ನಾನು ಆ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಈಗ ನಮ್ಮ ಮುಂದೆ ಇರುವ ಪ್ರಶ್ನೆ ಏನೆಂದರೆ, ಸಾಲ ಎಷ್ಟು ಇದೆ, ಅದನ್ನು ನಾವು ವಿಚಾರ ಮಾಡಬೇಕು. ಈಗ ನಾವು ನಮ್ಮಲ್ಲಿ ಸಾಲ ಕೊಟ್ಟಿದ್ದೇವೆ. ಅದನ್ನು ನಾನು ಹೇಳುತ್ತೇನೆ. ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಇದು ಅಂತರ್ಗತವಾಗಿ ಈಗ ಸಂಬಂಧ ಬರುವುದಿಲ್ಲ. ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ೧೯೮೯-೯೦ಕ್ಕೆ ಕೋ-ಆಪರೇಟಿವ್ ಲೋನ್ಸ್ ಕೊಟ್ಟಿರುವುದು, ಅಲ್ಪಾವಧಿ ಸಾಲ ೧೮೫.೮೯ ಕೋಟಿ ರೂಪಾಯಿಗಳು. ಅಲ್ಲಿಂದ ಮಧ್ಯಮಾವಧಿ ಸಾಲ ಬಹಳ ಕಡಿಮೆ ಇದೆ, ೭ ೬೧ ಕೋಟಿ ರೂಪಾಯಿಗಳು, ಇನ್ನು ದೀರ್ಘಾವಧಿ ಸಾಲದ ಬಗ್ಗೆ ಹೋಗತಕ್ಕಂಥ ಅವಶ್ಯಕತೆ ಇಲ್ಲ. ಡಿಫಾಲ್ಟರ್ ಆಗುವುದು ಬೇರೆ. ಆದಾಗ ಆ ಪ್ರಶ್ನೆ ಬರುತ್ತದೆ. ೧೯೮೯-೯೦ ಆಯಿತು. ಇನ್ನೂ ಹಿಂದಕ್ಕೆ ಹೋದರೆ ೧೯೮೮-೮೯ಕ್ಕೆ ಅಲ್ಪಾವಧಿ ಸಾಲ ೨೨೯.೧೮ ಕೋಟಿ ರೂಪಾಯಿಗಳು. ಮಧ್ಯಮಾವಧಿ ಸಾಲ ೮.೬೬ ಕೋಟಿ ರೂಪಾಯಿಗಳು. ಅಲ್ಲಿಂದ ೧೯೮೭-೮೮ರಲ್ಲಿ ಕೋ-ಆಪರೇಟಿವ್ ಲೋನ್ ಅಲ್ಪಾವಧಿ ಸಾಲ ೧೫೮.೮೬ ಕೋಟಿ ರೂಪಾಯಿಗಳು. ಮಧ್ಯಮಾವಧಿ ಸಾಲ ೮.೬೮ ಕೋಟಿ ರೂಪಾಯಿಗಳು. ಇಲ್ಲಿರುವ ಪ್ರಶ್ನೆ ಏನೆಂದರೆ. ೧೯೮೯-೯೦ ರಲ್ಲಿ ಕೊಟ್ಟಿರತಕ್ಕಂಥ ಸಾಲದ ಬಗ್ಗೆ ನಾವು ವಿಚಾರ ಮಾಡಬೇಕಾಗಿಲ್ಲ, ಆ ಯೋಜನೆಗೂ ಇದಕ್ಕೂ ಸಂಬಂಧ ಇಲ್ಲ. ಇನ್ನು ೧೯೮೮-೮೯ರಲ್ಲಿ ೨೨೯.೦೦ ಕೋಟಿ ರೂಪಾಯಿಗಳು ಇದೆ. ೧೯೮೭-೮೮ರಲ್ಲಿ ೧೫೮ ಕೋಟಿ ರೂಪಾಯಿಗಳು ಮಾತ್ರ ಇದೆ. ಇದರ ಹಿಂದಿನ ಸಾಲ ಎಷ್ಟು ಉಳಿದಿದೆ, ಅದು ಎಷ್ಟು ಮನ್ನಾ ಮಾಡುವುದಕ್ಕೆ ಸಾಧ್ಯವಿದೆ, ಅದರ ಜವಾಬ್ದಾರಿಯನ್ನು ಕೇಂದ್ರ ಸರ್ಕಾರ ತೆಗೆದುಕೊಂಡಿಲ್ಲ. ಅದರಲ್ಲಿ ಅವರೇನು ಈಗ ಅರ್ಧ ಹಣ ಕೊಡುವಂತೆ ಹೇಳುತ್ತಿದ್ದಾರೆ, ಈ ಸಾಲದಲ್ಲಿ ಮನ್ನಾ ಮಾಡುವಂತಹ ಕಮರ್ಷಿಯಲ್ ಬ್ಯಾಂಕ್ಸ್ ಸಾಲವನ್ನು ಅವರು ಕೊಡುತ್ತಾರೆ. ಅದು ನಮ್ಮ ಜವಾಬ್ದಾರಿ ಅಲ್ಲ. ನಾವು ಅದರ ಸಾಲ ಕೊಡಿಸುವಂತಹ ಅವಶ್ಯಕತೆ ಇಲ್ಲ. ಅನೇಕ ಜನ ಮಾನ್ಯ ಸದಸ್ಯರು ಮತ್ತು ವಿರೋಧ ಪಕ್ಷದ ನಾಯಕರು ಒಟ್ಟು ಸಾಲ ಮನ್ನಾ ಮಾಡತಕ್ಕಂಥ ಮೊತ್ತ ಎಷ್ಟು ಎಂದು ಕೇಳಿದರು. ಅದರ ಬಗ್ಗೆ ನಮಗೊಂದು ಕಲ್ಪನೆ ಕೊಡುವುದಕ್ಕೆ ಸಾಧ್ಯವೇ ಎಂದು ಕೇಳಿದರು ನಾನು ನಮ್ಮ ಅಧಿಕಾರಿಗಳಿಗೆ ಅವಸರ ಅವಸರವಾಗಿ ಹೇಳಿದೆ. ಒಂದು ರಫ್ ಎಸ್ಟಿಮೇಟ್ ಮಾಡಿ ನನಗೆ ಕೊಡಿ ಎಂದು ಹೇಳಿದೆ. ಅವರು ಕೊಟ್ಟಿದ್ದು ಸರಿ ಇದೆ ಎಂದು ನಾನು ಹೇಳುವುದಿಲ್ಲ, ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದ್ದರೂ ಇರಬಹುದು. ಇವತ್ತು ಅವರು ಕೊಟ್ಟಂತಹ ಅಂಕಿಅಂಶಗಳನ್ನು ನಾನು ಹೇಳಿದರೆ, ಹಳೆಯ ಸ್ಕೀಮ್ ಪ್ರಕಾರ ೧೯೮೯-೯೦ಕ್ಕೆ ೧೭೫ ಕೋಟಿ ರೂಪಾಯಿಗಳು ಬರುತ್ತದೆ. ಇವತ್ತು ಕ್ಲಾರಿಫಿಕೇಷನ್ ಏನು ಬಂದಿದೆ ಎಂದರೆ, ಅದು ಇನ್ನೂ ಲಿಖಿತ ಮೂಲಕ ಬಂದಿಲ್ಲ. ಅದು ಲಿಖಿತ ಮೂಲಕ ಬಂತು ಎಂದರೆ, ಅದರ ಪ್ರಕಾರ ೨೨೪ ಕೋಟಿ ರೂಪಾಯಿಗಳಾಗುತ್ತವೆ. ಸ್ವಲ್ಪ ಅಂದರೆ ೧೦-೧೫ ಕೋಟಿ

ರೂಪಾಯಿಗಳು ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು, ಅದು ಬೇರೆ. ಒಂದು ವೇಳೆ, ಇದರಲ್ಲಿ ೫೦ ಪರ್ಸೆಂಟ್ ಸಾಲ ನಾವು ಹೊತ್ತುಕೊಳ್ಳುತ್ತೇವೆ ಎನ್ನುವಂಥಾದ್ದು ಬಂದರೆ ರೌಂಡ್ ಎಬೌಟ್ ೧೧೨-೧೨೦ ಕೋಟಿ ರೂಪಾಯಿ ಬರುತ್ತದೆ. ಇವತ್ತಿನ ದಿವಸ ಅವರು ನನಗೆ ರಫ್ ಎಸ್ಟಿಮೇಟ್ ಕೊಟ್ಟಿದ್ದಾರೆ. ಅಲ್ಲಿಂದ ನಾವು ಎತ್ತಿರುವ ಪ್ರಶ್ನೆ ಏನೆಂದರೆ, ಬಹಳ ಗಹನವಾಗಿ ವಿಚಾರ ಮಾಡುವುದೇನೆಂದರೆ, ಚುನಾವಣೆಯಾದ ತಕ್ಷಣ ಒಂದು ಅವಕಾಶ ನಿರ್ಮಾಣವಾಯಿತು. ಸಾಲಮನ್ನಾ ಮಾಡಬೇಕು, ಸಾಲ ಮನ್ನಾ ಮಾಡಬೇಕು ಎಂದು ನಾವೇ, ನಾಯಕರುಗಳೇ ಹೇಳಿದಾಗ ಯಾರು ಸಾಲವನ್ನು ವಾಪಸ್ ಕೊಡುವುದಕ್ಕೆ ಮುಂದೆ ಬರುತ್ತಾರೆ. ೧೯೮೯-೯೦ರ ಸಾಲದ ರಿಕವರಿ ಬಗ್ಗೆ ನಾನು ಹೇಳುತ್ತಿದ್ದೇನೆ. ೧೯೯೦ರ ಏಪ್ರಿಲ್ ಎಂಡ್ ವರೆಗೆ ಶಾರ್ಟ್ ಟರ್ಮ್ ಲೋನ್ ರಿಕವರಿ ಎಷ್ಟಾಗಿದೆ ಎಂದರೆ, ೧೨.೭೯ ಪರ್ಸೆಂಟ್ ಮಾತ್ರ ಆಗಿದೆ. ಕಲೆಕ್ಷನ್ ಆಗಿದ್ದು ಏಪ್ರಿಲ್ ತನಕ. ಈಗ ನಾವು ಮೇ ತಿಂಗಳಿನಲ್ಲಿ ಇದ್ದೇವೆ. ಏಪ್ರಿಲ್ ಎಂಡ್‌ವರೆಗೆ ಒಟ್ಟು ರಿಕವರಿಯಾಗಿದ್ದ ಹಣ ೨೯ ಕೋಟಿ ೫೫ಲಕ್ಷ ಮಾತ್ರ. ಅಂದರೆ ೭೫ ಕೋಟಿ ರೂಪಾಯಿ ಸಾಲ ವಿತರಣೆಯನ್ನು ಹೋದ ವರ್ಷ ಮಾಡಿದ್ದೇವೆ, ಅದರಲ್ಲಿ ಏಪ್ರಿಲ್ ಎಂಡ್‌ವರೆಗೆ ೨೯.೫೫ ಕೋಟಿ ರೂಪಾಯಿಗಳು ಮಾತ್ರ ರಿಕವರಿಯಾಗಿದೆ. ಅಂದರೆ ೧೨.೭೯ ಪರ್ಸೆಂಟ್ ಅಥವಾ ೧೩ ಪರ್ಸೆಂಟ್ ಎಂದು ಇಟ್ಟುಕೊಳ್ಳಿ. ಇದು ತಮ್ಮೆಲ್ಲರಿಗೂ ಗೊತ್ತಿದೆ. ತಾವೆಲ್ಲರೂ ಸಹಕಾರ ಕ್ಷೇತ್ರದಲ್ಲಿ ಬೇಕಾದಷ್ಟು ದುಡಿದವರು ಇದ್ದೀರಿ. ನಬಾರ್ಡ್ ರೂಲ್ಸ್ ಪ್ರಕಾರ ೬೫ ಪರ್ಸೆಂಟ್ ರಿಕವರಿ ಆಗದಿದ್ದರೆ ಮುಂದಿನ ಸಾಲ ಕೊಡುವುದಿಲ್ಲ ಇದರ ಬಗ್ಗೆ ಅವರ ಜೊತೆ ಮಾತನಾಡಿದ್ದೇವೆ, ಪತ್ರ ಬರೆದಿದ್ದೇವೆ, ಕೇಂದ್ರದ ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇವೆ. ನಮ್ಮ ಚುನಾವಣಾ ಭರವಸೆಗಳೇ ಬೇರೆ. ನಿಮ್ಮ ಪಕ್ಷದವರು ಹಾಗೂ ಎಲ್ಲಾ ರಾಜಕೀಯ ಪಕ್ಷದವರು ಸಾಲ ಮನ್ನಾ ಆಯಿತು, ಸಾಲ ಮನ್ನಾ ಆಯಿತೆಂದು ಹೇಳುತ್ತಿರುವಾಗ ರೈತರುಗಳು ಸಾಲ ವಾಪಸ್ ಮಾಡುತ್ತಿಲ್ಲ. ಇದರಿಂದ ನಾವು ರಿಕವರಿ ಮಾಡುವುದು ಹೇಗೆ ಎಂದು ಅವರಿಗೆ ತಿಳಿಸಿದ್ದೇವೆ. ೬೫ ಪರ್ಸೆಂಟ್ ರಿಕವರಿ ಈ ವರ್ಷ ಆಗುವುದಕ್ಕೆ ಸಾಧ್ಯವಿಲ್ಲ, ಮುಂದೆ ನೀವು ಸಾಲ ಕೊಡದೇ ಇದ್ದರೆ ರೈತರುಗಳು ಹಾಳಾಗುತ್ತಾರೆ, ರೈತರುಗಳಿಗೆ ಬಹಳ ಕಷ್ಟವಾಗುತ್ತದೆ, ಸಾಲ ಕೊಡದೇ ಇದ್ದರೆ ಸಾಹುಕಾರರ ಮನೆ ಬಾಗಿಲಿಗೆ ಹೋಗುವ ಪರಿಸ್ಥಿತಿ ರೈತರುಗಳಿಗೆ ಬರುತ್ತದೆ, ಆದ್ದರಿಂದ ಈ ವರ್ಷದ ಮಟ್ಟಿಗೆ ರಿಕವರಿ ಪರ್ಸಂಟೇಜ್ ಷರತ್ತು ಏನಿದೆಯೋ ಅದನ್ನು ಸಡಿಲಿಸಬೇಕೆಂದು ನಾವು ಹೇಳಿದೆವು. ಅದನ್ನು ಅವರು ಒಪ್ಪಿಕೊಂಡಿದ್ದಾರೆ. ಈ ವರ್ಷದ ರಿಕವರಿ ಕಡಿಮೆಯಾದರೂ ಪರವಾಗಿಲ್ಲ, ೧೯೯೦-೯೧ರ ಸಾಲಿಗೆ ನಾವು ಸಾಲ ಕೊಡುವುದಕ್ಕೆ ತಯಾರಿದ್ದೇವೆ. ಆದರೆ ಅವರು ಏನು ಷರತ್ತು ಹಾಕಿದ್ದಾರೆಂದರೆ, ಇನ್ನು ಮುಂದಾದರೂ ೧೯೮೯-೯೦ರ ವಸೂಲಾತಿಯನ್ನು ಬಹಳ ತೀವ್ರತೆಯಿಂದ ಮಾಡಬೇಕು ಹಾಗೂ ೩೧ ಡಿಸೆಂಬರ್ ೧೯೯೦ ರಂದು ಸಬ್‌ಸ್ಟ್ಯಾನ್ಷಿಯಲ್ ರಿಕವರಿ ತೋರಿಸಬೇಕೆಂದು ಹೇಳಿದ್ದಾರೆ. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಅದನ್ನು ಒಪ್ಪಿಕೊಳ್ಳದಿದ್ದರೆ ಮುಂದೆ ರೈತರುಗಳಿಗೆ ಸಾಲ ಸಿಗುತ್ತಿರಲಿಲ್ಲ. ಇದನ್ನು ಒಪ್ಪಬೇಕಾಗುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತಿನಿಂದ ೧೯೮೯-೯೦ ರ ಸಾಲ ವಸೂಲು ಮಾಡಿ ಎಂದು ಹೇಳಿದೆ. ಹೇಳದೆ ಇದ್ದಿದ್ದರೆ ಬೇರೆ ಗತ್ಯಂತರವಿರಲಿಲ್ಲ.

ಈಗ ಒಂದು ವಿಚಾರವನ್ನು ತಾವು ಸ್ಪಷ್ಟವಾಗಿ ಹೇಳಿದ್ದೀರಿ, ಅದರ ಬಗ್ಗೆ ನಾನು ಹೋಗುವುದಿಲ್ಲ. ಈ ಸ್ಕೀಮ್ ಪ್ರಕಾರ ನೀವು ಹೋಗಿ ಎನ್ನುವ ಮಾತನ್ನು ಹೇಳಿದ್ದೀರಿ. ಬಿ.ಜೆ.ಪಿ.ಯವರು ಬಿಟ್ಟರೆ ಎಲ್ಲರೂ ಒಂದೇ ಸ್ವರದಲ್ಲಿ ಈ ಮಾತನ್ನಾಡಿದ್ದೀರಿ. ಅದಕ್ಕೆ ನಾನು ಅದರ ಬಗ್ಗೆ ಏನೂ ಹೇಳುವುದಿಲ್ಲ. ಆದರೆ ಇವತ್ತಿನ ದಿವಸ ಏನಾಗಿದೆಯೆಂದರೆ ಮೊದಲು ಕೇಂದ್ರ ಸರ್ಕಾರದವರು ಏನು ಭರವಸೆಯನ್ನು ಕೊಟ್ಟಿದ್ದಾರೆ. ಬಹುಶಃ ಈ ಯೋಜನೆಯ ಪ್ರಕಾರ ಕೂಡ ೧೩-೧೪ ಸಾವಿರ ಕೋಟಿ ರೂಪಾಯಿ ಸಾಲವನ್ನು ಮನ್ನಾ ಮಾಡಬೇಕಾಗುತ್ತದೆ ಎನ್ನುವ ಮಾತನು ಹೇಳಿದ್ದೀರಿ. ಆದರೆ ನನ್ನಗನ್ನಿಸುವಂತದ್ದು ಇವತ್ತು ಕೇಂದ್ರ ಸರ್ಕಾರದವರಿಗೆ ಅವರಿಗೆ ಗೊತ್ತಿಲ್ಲ, ತಾವು ಎಲ್ಲಿ ನಿಂತಿದ್ದೇವೆಂಬುದು ಅವರಿಗೆ ಗೊತ್ತಿಲ್ಲ. ಸಾಲ ಮನ್ನಾ ಮಾಡುವಂಥ ಮೊತ್ತ ಅವರ ಪ್ರಕಾರ ೧೩-೧೪ ಸಾವಿರ ಕೋಟಿ ರೂಪಾಯಿಗಳು ಇದ್ದರೆ ಈ ವರ್ಷದ ಬಜೆಟ್‌ನಲ್ಲಿ ಕೇವಲ ೧ ಸಾವಿರ ಕೋಟಿ ರೂಪಾಯಿ ಮಾತ್ರ ಅವರು ಇದರ ಸಲುವಾಗಿ ತೆಗೆದಿಟ್ಟಿದ್ದಾರೆ. ಅದು ಯಾವುದಕ್ಕೂ ಸರಿ ಹೋಗುವುದಿಲ್ಲ. ಈಗ ತಾವು ಏನು ಹೇಳಿದ್ದೀರಿ, ಅಂದರೆ ಅರ್ಧ ದುಡ್ಡು ಬರುತ್ತದೆ. ಅರ್ಧ ದುಡ್ಡು ಬರುತ್ತದೆ, ಯಾವಾಗ ಬರುತ್ತದೆ, ಪೇಪರ್‌ನಲ್ಲಿ ಬರುತ್ತದೋ ಹೇಗೆ ಬರುತ್ತದೋ ಇನ್ನೂ ನನಗಂತೂ ಗೊತ್ತಿಲ್ಲ, ನನಗೆ ಇನ್ನೂ ಅದರ ಬಗ್ಗೆ ಸಂಶಯ ಇದೆ. ಅದಕ್ಕಾಗಿ ಇವತ್ತು ನಾನು ತಮ್ಮಲ್ಲಿ ಇಷ್ಟೆ ವಿನಂತಿ ಮಾಡಿಕೊಳ್ಳುವುದು. ಇನ್ನೊಂದು ವಿಚಾರ ನಾನು ಹೇಳುತ್ತೇನೆ. ಏಕೆಂದರೆ, ಎಲ್ಲರೂ ರೈತರಿದ್ದುದ್ದರಿಂದ ನಾವು ವಿಚಾರ ಮಾಡಬೇಕು. ಬಹುಶಃ ನಮ್ಮಲ್ಲಿ ನಾಯಕರುಗಳು ಒಂದು ವಾತಾವರಣವನ್ನು ಏನು ನಿರ್ಮಾಣ ಮಾಡಿದ್ದಾರೆ ಎಂದರೆ,

ಈ ಒಂದು ಸಾಲ ಮನ್ನಾ ಮಾಡಿದರೆ ರೈತ ಮಾಡಿದಂಥ ಎಲ್ಲಾ ಸಾಲ ಮನ್ನಾ ಆಯಿತು ಎನ್ನುವಂತಹ ಒಂದು ವಾತಾವರಣ ನಿರ್ಮಾಣವಾಗಿದೆ. ಆದರೆ ಇವತ್ತು ನಾವು ನೆನಪು ಇಟ್ಟುಕೊಳ್ಳಬೇಕು ಕೋ ಆಪರೇಟಿವ್ ಸಾಲದಿಂದಲೇ ರೈತ ಇವತ್ತು ತನ್ನ ವ್ಯವಸಾಯವನ್ನು ಮಾಡುತ್ತಿಲ್ಲ. ತಾವು ತಿಳಿದುಕೊಳ್ಳಬೇಕು. ನನ್ನ ಹತ್ತಿರ ಅಂಕಿ ಸಂಖ್ಯೆಗಳು ಇದೆ. ಹೋದ ಸಲ ನಾನು ಕೊಟ್ಟಿರಬಹುದು. ೪೦-೪೫ ವರ್ಷದಿಂದ ಅದಕ್ಕೂ ಪೂರ್ವದ ಮಾತನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇಷ್ಟು ಕೋ ಆಪರೇಟಿವ್ ನೆಟ್‌ವರ್ಕ್ ನಮ್ಮ ರಾಜ್ಯದಲ್ಲಿ ೨ನೇ ರಾಜ್ಯದಲ್ಲಿ ಸ್ಪ್ರೆಡ್ ಆಗಿದೆ ಎಂದು ಹೇಳಿದರೂ ಕೂಡ so far we have not been able to cover 25% of the farmers. ಇದನ್ನು ನೀವು ತಿಳಿದುಕೊಳ್ಳಬೇಕು. ರೈತರು, ರೈತ ಸಂಘದ ಮುಖಂಡರಿಗೂ ನಾನು ಹೇಳುತ್ತಿದ್ದೇನೆ ಇವತ್ತು 75% of our farmars are depending upon the money-lenders. ಏಕೆಂದರೆ ಒಂದು ವಾತಾವರಣ ಏನಿದೆ ಅಂದರೆ ಈ ಸಾಲ ಮನ್ನಾವಾದರೆ ಆಗಿಹೋಯಿತು, ಅವನು ಮುಕ್ತಿ ಹೊಂದಿದ ರೈತ ಸ್ವರ್ಗಕ್ಕೆ ಹೋಗಿ ಸ್ವರ್ಗದಲ್ಲಿ ಕುಳಿತುಬಿಡುತ್ತಾನೆಂಬ ಭಾವನೆ ಏನು ಇದೆ, ಅದು ಇಲ್ಲ. ಏಕೆಂದರೆ ನಮ್ಮ ರಾಜ್ಯದ ಮಟ್ಟಿಗೆ ನಾನು ಹೇಳಬೇಕಾಗಿದ್ದರೆ, ನಮ್ಮ ರಾಜ್ಯದಲ್ಲಿ total number of agricultural familes in Karnataka is 44.14 lakhs. ಇಷ್ಟು ಫ್ಯಾಮಿಲಿಸ್ ಇದೆ. ಈಗ ಸೊಸೈಟಿಯ ಮುಖಾಂತರ ಸಾಲ ಪಡೆಯುವಂತಹ ಫ್ಯಾಮಿಲೀಸ್ ಎಷ್ಟಿದೆ ಎಂದರೆ ೧೧.೫೬ ಲಕ್ಷ. ಅದರ ಅರ್ಥ ಶೇಕಡ ೨೫ ರಷ್ಟು ರೈತರು ಸೊಸೈಟಿಯಿಂದ ಹಣವನ್ನು ಪಡೆಯುತ್ತಿದ್ದಾರೆಯೋ ಹೊರತಾಗಿ ಎಲ್ಲಾ ರೈತರು ಸೊಸೈಟಿಯಿಂದ ಹಣ ಪಡೆಯುತ್ತಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಒಂದು ಭಾವನೆ ಏನು ಇದೆಯೆಂದರೆ ಸಾಲ ಮನ್ನಾವಾಯಿತು, ನಾವು ನೀವು ಕೂಡಿ ಒಂದು ರೆಸಲ್ಯೂಷನ್ ಮಾಡಿದ್ದೆವು. ನಾನು ಯಡಿಯೂರಪ್ಪನವರನ್ನು ಕೇಳುತ್ತೇನೆ. ೧೨೮ ಕೋಟಿ, ಎಷ್ಟೋ ನಿಮ್ಮ ಮುಂದೆ ಹೇಳಿದ್ದೆನಲ್ಲಾ. ೧೧೨ ಕೋಟಿ ನಾನು ಕೊಡುತ್ತೇನೆ ಎಂದು ಒಂದು ರೆಜಲ್ಯೂಷನ್ ಮಾಡಿದ ಕೂಡಲೇ ಕರ್ನಾಟಕ ರಾಜ್ಯದ ಇಡೀ ರೈತರ ಸಾಲ ಮನ್ನಾ ಆಗುವುದಿಲ್ಲ. ಅದನ್ನು ತಾವು ವಿಚಾರ ಮಾಡಬೇಕಾಗಿದೆ. ಇನ್ನೂ ಶೇಕಡ ೭೫ ರಷ್ಟು ಜನ ಹೊರಗಡೆ ಇದ್ದಾರೆ. ಯಾರ್ಯಾರ ಹತ್ತಿರ ಸಾಲ ತೆಗೆದುಕೊಂಡಿದ್ದಾರೋ ಎಷ್ಟು ಬಡ್ಡಿ ದರದ ಮೇಲೆ ಸಾಲ ತೆಗೆದುಕೊಂಡಿದ್ದಾರೋ ಎಷ್ಟು ಬಡ್ಡಿ ಅದರ ಮೇಲೆ ಬಡ್ಡಿಯಾಗಿದೆಯೋ, ಎಷ್ಟು ಭೂಮಿಯನ್ನು ಒತ್ತೆಯಿಟ್ಟಿದ್ದಾರೋ ದೇವರಿಗೇ ಗೊತ್ತು. ಆ ಅಂಕಿ ಅಂಶ ಯಾರ ಹತ್ತಿರವೂ ಇಲ್ಲ. ಅದಕ್ಕಾಗಿ ಇವತ್ತು ಏನೋ ಈ ಸಾಲದಿಂದ ಎಲ್ಲಾ ರೈತರು ಉದ್ಧಾರವಾಗುತ್ತಾರೆ ಎನ್ನುವಂತಹದ್ದನ್ನು ಏನಾದರೂ ತಿಳಿದುಕೊಂಡಿದ್ದರೆ ಅದು ತಪ್ಪು ಆಗುತ್ತದೆ. ಇದು ಆಗಿಹೋಯಿತು. ಈ ಮಾತನ್ನು ಸ್ಪಷ್ಟವಾಗಿ ತಮ್ಮ ಮುಂದೆ ಹೇಳುತ್ತಿದ್ದೇನೆ. ಇನ್ನೊಂದು ಬಹಳ ಇಲ್ಲಿ ಕಳಕಳಿಯಿಂದ ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಅದು ಏನೆಂದರೆ, ನಮ್ಮ ರೈತ ಇಲ್ಲಿ ಎಲ್ಲರೂ ರೈತರೆ ಇದ್ದೇವೆ. ಬಹುಶಃ ನಮ್ಮ ಸಭಾಧ್ಯಕ್ಷರು ಕೂಡ ರೈತರಿದ್ದಾರೆ. ನಾವು ಈ ಕಡೆ ಕುಳಿತಿರುವವರು ರೈತರಿದ್ದೇವೆ. ಆ ಕಡೆ ಅವರು ಕುಳಿತಿರುವವರೂ ರೈತರಿದ್ದಾರೆ. ಎಲ್ಲರೂ ರೈತರ ಮಕ್ಕಳೇ ಹೊರತಾಗಿ ಏನೋ ಯಾರಾದರೂ ಶೇಕಡಾ ಒಂದರಷ್ಟು, ಬಹುಶಃ ದೊಡ್ಡ ಪಟ್ಟಣದಿಂದ ಬಂದವರು ಈ ಸದನದಲ್ಲಿ ನನಗೇನೂ ಕಂಡುಬಂದಿಲ್ಲ. ಪ್ರಶ್ನೆ ಏನೆಂದರೆ, ರೈತ ಹಳ್ಳಿಯಲ್ಲಿದ್ದಾನೆ. ರೈತ ಇವತ್ತು ಹೊರಗಡೆಯಿಂದ ಯಾರೇ ಬಂದು ಹೇಳಿದರೂ ನಂಬುತ್ತಾನೆ. ಇದನ್ನು ನಾವು ತಿಳಿದುಕೊಳ್ಳಬೇಕು. ಏನೆಂದರೆ, ವ್ಯವಸಾಯ ಬಿಟ್ಟು ಎರಡನೆಯ ಕೆಲಸವನ್ನು ಮಾಡುವುದಕ್ಕೆ ಅವನಿಗೆ ಸಮಯ ಇಲ್ಲ. ಅದು ಮಾಡಿದರೂ ಕೂಡ ಇವತ್ತು ಎರಡು ಹೊತ್ತು ಊಟ ಮಾಡಲಾರದಂತಹ ಪರಿಸ್ಥಿತಿ ಇದ್ದಾಗ, ಇವತ್ತು ಏನು ನಡೆಯುತ್ತಿದೆ ಎನ್ನುವಂತಹದ್ದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವನು ಸಾಧಕ ಬಾಧಕಗಳನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಯಾವುದಾದರೂ ರಾಜಕೀಯ ಪಕ್ಷ ಯಾವ ಉದ್ದೇಶದಿಂದ ಬಂದು ಇದನ್ನು ಹೇಳುತ್ತಿದೆ ಎನ್ನುವಂತಹದ್ದನ್ನು ಕೂಡ ಅವನಿಗೆ ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. He is innocent ಅವನು ಇವತ್ತು ಇನ್ನೋಸೆಂಟ್ ಇದ್ದಾನೆ. ಅವನು ಇವತ್ತು ಶೋಷಣೆಗೆ ಒಳಗಾಗಿದ್ದಾನೆ. ಅದನ್ನೆಲ್ಲಾ ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕಾಗಿ ಅಂತಹ ರೈತನಿಗೆ ನಾವೇನಾದರೂ ಭರವಸೆ ಕೊಡಬೇಕಾದರೆ, ಯಾವುದೇ ರಾಜಕೀಯ ಪಕ್ಷ ಇರಲಿ, ಇವತ್ತು ಅಧಿಕಾರದಲ್ಲಿ ಇರಲಿ, ವಿರೋಧ ಪಕ್ಷದಲ್ಲಿ ಇರಲಿ, ಬಹಳ ಜವಾಬ್ದಾರಿಯಿಂದ ಅವನಿಗೆ ಭರವಸೆಯನ್ನು ಕೊಡಬೇಕು. ಏಕೆಂದರೆ, ನೀವು ಏನು ಹೇಳುತ್ತೀರಿ, ಇವತ್ತು ಅವನು ನಂಬುವ ಪರಿಸ್ಥಿತಿಯಲ್ಲಿದ್ದಾನೆ. ಪೇಪರ್‌ನಲ್ಲಿ ಬಂದ ಕೂಡಲೆ ಹೇಗೆ ನಂಬುತ್ತಾನೊ, ಆರೀತಿ ರಾಜಕೀಯ ಧುರೀಣರ ಮಾತನ್ನು ಅವನು ನಂಬುವ ಪರಿಸ್ಥಿತಿಯಲ್ಲಿದ್ದಾನೆ. ಆದಕ್ಕಾಗಿ ಅವನಿಗೆ ನಾವು ಏನು ಭರವಸೆಗಳನ್ನು ಕೊಡುತ್ತಿದ್ದೇವೋ ಅದು ಈಡೇರಿಸುವಂತಹ ಭರವಸೆಗಳು ಇದ್ದರೆ ಮಾತ್ರ ಕೊಡಬೇಕೆ ಹೊರತಾಗಿ ಇಲ್ಲದಿದ್ದರೆ ಕೊಡುವುದಕ್ಕೆ ಆಗುವುದಿಲ್ಲ.

ನಾನು ಮಾನ್ಯ ಯಡಿಯೂರಪ್ಪನವರಿಗೆ ಈ ಮಾತನ್ನು ಏಕೆ ಹೇಳುತ್ತಾ ಇದ್ದೇನೆ ಅಂದರೆ, ಸಾಲ ಮನ್ನಾ ಮಾಡುವಾಗ ೧೯೮೯-೯೦ನೇ ಸಾಲಿನ ರೈತರ ಸಾಲವನ್ನು ಕೂಡ ಮನ್ನಾ ಮಾಡಬೇಕೆಂದು ಹೇಳಿದರೆ ನಾನು ಕೂಡ ನಿಮ್ಮ ಜೊತೆಯಲ್ಲಿ ಚಪ್ಪಾಳೆ ಹೊಡೆಯಬಹುದು. ಆದರೆ ಅದು ಸಾಧ್ಯವೆ ? ಹಾಗೆ ೧೯೮೯-೯೦ರ ಸಾಲವನ್ನು ಕೂಡ ಮನ್ನಾ ಮಾಡಬೇಕೆಂದು ಕೇಂದ್ರದಿಂದ ಮಾಡಿಸಿಕೊಂಡು ಬರುತ್ತೀರಾ ? ನಮಗೆ ಇವೊತ್ತು ಬೇಕಾದಷ್ಟು ಕಷ್ಟಪಡಬೇಕಾದ ಪರಿಸ್ಥಿತಿಯು ಇದ್ದಾಗ ಮತ್ತೆ ಪುನ; ರೋಗಿ 1989—90ರ ಸಾಲವನ್ನು ಕೂಡ ಮನ್ನ ಮಾಡಿ ಎಂದು ಅವರಿಗೆ ಹೇಳಿದರೆ ಮತ್ತು ಅದೇ ಮಾತನ್ನು ನಾವು ರೈತರಿಗೆ ಹೇಳಿದರೆ ಅವರ ಸಂತೋಷ ಪಟ್ಟಾರು, ಆದರೆ ಮುಂದೆ ನಾವು ಹೇಳಿದ ಹಾಗೆ ಮಾಡದಿದ್ದರೆ ನಮ್ಮ ಬೆನ್ನು ಬೀಳುತ್ತಾರೆ. ಕೊಟ್ಟ ಸಾಲವನ್ನು ಮನ್ನಾ ಮಾಡದೆ ಮುಂದೆ ವಸೂಲಿಗೆ ನಮ್ಮ ಅಧಿಕಾರಿಗಳು ರೈತರ ಮನೆಬಾಗಿಲಿಗೆ ಹೋಗಿ ಕೇಳಿದಾಗ, ಜಪ್ತಿ ಮಾಡಿದಾಗ ಅದೇ ರೈತರು ಹಿಂದೆ ಏನು ಹೇಳಿದ್ದಿರಿ, ಮತ್ತು ಈಗ ಏನು ಮಾಡುತ್ತಿದ್ದೀರಿ ಎಂದು ಹೊಗಳುವ ಬದಲು ಶಪಿಸುತ್ತಾರೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು ಜನರಿಗೆ ನಾವು ಕೊಡುವ ಯಾವುದೇ ಭರವಸೆಗಳನ್ನು ವಸ್ತುಶಃ ಈಡೇರಿಸುವ ಕಾರ್ಯವನ್ನು ಮಾಡಬೇಕಾಗುತ್ತದೆ, ಕೊಟ್ಟ ಭರವಸೆಗಳನ್ನು ಸ್ವಲ್ಪವಾದರೂ ಅವರಿಗೆ ಮುಟ್ಟಿಸುವಂಥ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಜನರಿಗೆ ಅಂಗೈಯಲ್ಲಿ ಸ್ವರ್ಗವನ್ನು ತೋರಿಸುವಂಥ ಕೆಲಸವನ್ನು ಮತ್ತು ಈಡೇರಿಸಲಾರದಂಥ ಭರವಸೆಗಳನ್ನು ಕೊಡಬಾರದು ಎಂದು ಹೇಳುತ್ತಾ ಇದ್ದೇನೆ.

ಈ ವಿಚಾರದಲ್ಲಿ ಎರಡನೆ ರಾಜ್ಯಗಳವರು ಏನು ಮಾಡಿದ್ದಾರೆ ಎಂಬುದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕು. ನಾನು ಪತ್ರಿಕೆಗಳಲ್ಲಿ ಬಂದ ವರದಿಗಳನ್ನು ಓದಿ ಈ ಒಂದು ವಿಷಯವನ್ನು ಸದನಕ್ಕೆ ತಿಳಿಸುತ್ತಾ ಇಲ್ಲ. ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ ಸೂಚನೆ ಕೊಟ್ಟು ತಮಿಳುನಾಡು, ಆಂಧ್ರ ಪ್ರದೇಶ, ಕೇರಳ, ಮಧ್ಯಪ್ರದೇಶ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳನ್ನು ಸಂಪರ್ಕಿಸಿ, ಈ ವಿಚಾರದ ಬಗ್ಗೆ ಆ ರಾಜ್ಯಗಳವರು ತೆಗೆದುಕೊಂಡ ಕ್ರಮ ಮತ್ತು ಯೋಜನೆಗಳನ್ನು ಅವರಿಂದ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಫೋನ್ ಮೂಲಕ ಅವರು ಸಂಬಂಧಪಟ್ಟವರನ್ನು ಸಂಪರ್ಕಿಸಿ ಮಾಹಿತಿಗಳನ್ನು ಪಡೆದಿದ್ದಾರೆ ಅದನ್ನು ನಾನು ತಮ್ಮ ಮುಂದೆ ಇಡುತ್ತಿದ್ದೇನೆ. ವಿಶೇಷತಃ ಮಧ್ಯ ಪ್ರದೇಶ ಸರಕಾರದ ವಿಚಾರವನ್ನು ಇಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ಕಾರಣ. ಅಲ್ಲಿಯ ವಿಚಾರಗಳನ್ನೂ ಕೂಡ ನಾವು ಪಡೆದುಕೊಂಡಿದ್ದೇವೆ. ಆ ಪ್ರಕಾರ ತಮಿಳುನಾಡಿನಲ್ಲಿ ಅವರು ಇನ್ನೂ ಆ ಬಗ್ಗೆ ಯೋಜನೆ ಮಾಡಿಲ್ಲ. ಈ ಯೋಜನೆ ಆಗಬೇಕು. ಆದರೆ ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಏಕೆಂದರೆ, ಒಮ್ಮೆಯೇ ಇವನ್ನೆಲ್ಲಾ ಮಾಡುವುದಕ್ಕಾಗುವುದಿಲ್ಲ, ಏಕೆಂದರೆ, ನಮ್ಮ ದೇಶ ಒಂದೆ ಆಡಳಿತದ ಅನುಕೂಲತೆಗಾಗಿ ಬೇರೆ ಬೇರೆ ರಾಜ್ಯಗಳು ಆಗಿವೆ. ಆದರೆ ದೇಶ ಒಂದೇ, ನಾವೆಲ್ಲರೂ ಅಖಂಡ ಭಾರತದ ನಾಗರೀಕರು ಎಂಬುದನ್ನು ನಾವ್ಯಾರು ಮರೆಯಬಾರದು, ಅದಕ್ಕಾಗಿ ನಮ್ಮ ನೆರೆಯ ರಾಜ್ಯಗಳವರು ಈ ಬಗ್ಗೆ ಯಾವರೀತಿಯಿಂದ ವಿಚಾರ ಮಾಡುತ್ತಾರೆ ಎಂಬುದನ್ನು ನಾವು ಅವಶ್ಯಕವಾಗಿ ತಿಳಿದುಕೊಳ್ಳಬೇಕು. ನಾವು ಅವರಿಂದ ವಿಚಾರಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿದಂತೆ ಅವರುಗಳೂ ನಮ್ಮಿಂದ ವಿಚಾರಗಳನ್ನು ತಿಳಿದುಕೊಳ್ಳುತ್ತಾರೆ. ಆ ಪ್ರಕಾರ ತಮಿಳುನಾಡಿನಲ್ಲಿ ಇವರೆವಿಗೂ ಈ ವಿಚಾರದ ಬಗ್ಗೆ ಯೋಜನೆ ಮಾಡಿಲ್ಲ. ಅಂತೆಯೇ ತಮಿಳುನಾಡಿನ ಮುಖ್ಯಮಂತ್ರಿಗಳು ಈ ವಿಚಾರವಾಗಿ ಏನು ಮಾಡಿದ್ದಾರೆ ಎನ್ನುವುದನ್ನು ಅಲ್ಲಿಯ ಮುಖ್ಯ ಕಾರ್ಯದರ್ಶಿಯವರು ಹೇಳಿದರು. ಕೇರಳ ರಾಜ್ಯದವರು ಈ ಯೋಜನೆ ನಮಗೆ ಮಾನ್ಯ ಇದೆ, ಕೇಂದ್ರದ ಯೋಜನೆಯನ್ನು ನಾವು ಒಪ್ಪುತ್ತೇವೆ. ಆದರೆ ಇದಕ್ಕೆ ಬೇಕಾಗುವ ೫೦ ಪರ್‌ಸೆಂಟ್‌ನಷ್ಟು ಹಣವನ್ನು ನೀವೇ ಕೊಡಿ ಎಂದು ಕೇಂದ್ರದವರಿಗೆ ಕೇಳಿಕೊಳ್ಳುವವರಿದ್ದಾರೆ. ಈ ಕುರಿತು ಅವರು ಕೇಂದ್ರಕ್ಕೆ ಪತ್ರ ಬರೆಯುತ್ತಾರೋ ಅಥವಾ ಬರೆಯುವ ಸ್ಟೇಜ್‌ನಲ್ಲಿ ಇದ್ದಾರೋ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ನಮ್ಮ ಮುಂದೆ ಇರುವ ಮಾಹಿತಿಗಳನ್ನು ನಾನು ತಮಗೆ ಹೇಳುತ್ತೇನೆ. ಏಕೆಂದರೆ, ನಮ್ಮ ಮುಖ್ಯ ಕಾರ್ಯದರ್ಶಿಯವರು ನನಗೆ ಬರೆದು ಕಳುಹಿಸಿದ್ದಾರೆ. ಅದನ್ನು ನಾನು ಓದಿ ಹೇಳುತ್ತೇನೆ. ಏಕೆಂದರೆ ಅದು ರಿಕಾರ್ಡ್‌ಗೂ ಆಗುತ್ತದೆ. Tamil Nadu Govt. has not taken any policy decision regarding the loan waiver information given by the Chief Secretary Kerala Govt. is of the view that full money should be reimbursed by Govt. of India for implementation of the scheme. Whether the scheme requires any modification and if so what are the policy

matters under consideration of the Govt Secretary Co-operation Kerala. ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಕೂಡ ಇದು ನಮ್ಮ ಜವಾಬ್ದಾರಿ ಅಲ್ಲ. ನಾವು ಇದನ್ನು ಒಪ್ಪಿಕೊಳ್ಳುವುದಿಲ್ಲ. ೫೦ ಪರ್‌ಸೆಂಟ್‌ನಷ್ಟು ಹಣವನ್ನು ಕೇಂದ್ರದವರು ಕೊಡಬೇಕೆಂದು ಹೇಳಿದ್ದಾರೆ. ಹಾಗೆಯೇ ಮಹಾರಾಷ್ಟ್ರದ ಮುಖ್ಯಮಂತ್ರಿಯವರ ಜೊತೆಯಲ್ಲಿ ಕೂಡ ನಾನು ಮಾತನಾಡಿದ್ದೇನೆ. ನಾವು ಮೂರು ಜನರೂ ಸೇರಿ ಈ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೇವೆ. ನಾವುಗಳು ಏನು ವಿಚಾರ ಮಾಡಿದ್ದೇವೆ ಅಂದರೆ, ಉಳಿದ ೫೦ ಪರ್‌ಸೆಂಟ್ ಕೇಂದ್ರದಿಂದ ಬರಬೇಕಾಗಿದೆ, ಹೊರತಾಗಿ ನಮ್ಮ ಹತ್ತಿರ ಆ ಒಂದು ಹಣವನ್ನು ಕೊಡುವ ಶಕ್ತಿ ಇಲ್ಲ ಎಂದು ಅಂದರೆ ಮಹಾರಾಷ್ಟ್ರದವರೂ ಕೂಡ ಆ ೫೦ ಪರ್‌ಸೆಂಟ್ ಹಣವನ್ನು ನೀವೆ ಕಳುಹಿಸಿಕೊಡಿ, ನಿಮ್ಮ ಸ್ಕೀಮ್‌ನ್ನು ನಾವು ಒಪ್ಪಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಇನ್ನು ಗುಜರಾತ್ ಒಪ್ಪಿದೆ, ಮಧ್ಯಪ್ರದೇಶ ಸರಕಾರ ಈ ಸ್ಕೀಮ್ ಒಪ್ಪಿದೆ ಎಂದು ತಾವುಗಳು ಹೇಳಿದ್ದೀರಿ. ನನಗೆ ಅದರ ಬಗ್ಗೆ ವಿವರ ಗೊತ್ತಿಲ್ಲ. ನೀವು ಬಹುಶಃ ಪತ್ರಿಕೆಯ ಮುಖಾಂತರ ತಿಳಿದುಕೊಂಡು ಈ ಮಾತನ್ನು ಹೇಳಿರಬಹುದು ಎಂದು ಅಂದುಕೊಂಡಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಮಗೆ ಅನುಕೂಲಕರವಾದವುಗಳನ್ನು ಮಾತ್ರ ಹೇಳಿದ್ದೀರಿ, ಉಳಿದವುಗಳನ್ನು ತಾವುಗಳು ಬಿಟ್ಟಿದ್ದೀರಿ.

ಶ್ರೀ ವೀರೇಂದ್ರ ಪಾಟೀಲ್.—ನಿಮಗೆ ಅನುಕೂಲವಾದವುಗಳನ್ನು ಕೂಡ ಹೇಳುತ್ತೇನೆ. ಗುಜರಾತ್ ಬಗ್ಗೆ ನಮ್ಮ ಹತ್ತಿರ ಹೆಚ್ಚಿನ ಡೀಟೈಲ್ಸ್ ಇಲ್ಲ. ಆದರೆ ನೀವು ಓದಿದ ಹಾಗೆ, ಸುಮಾರು ೪೩೫ ಕೋಟಿ ರೂಪಾಯಿಗಳನ್ನು ಮನ್ನಾ ಮಾಡುತ್ತೇವೆ ಎಂದು ಅವರು ಹೇಳಿದ್ದಾರೆ. ಮಧ್ಯಪ್ರದೇಶದವರನ್ನು ನಾವು ಸಂಪರ್ಕ ಮಾಡಿದಾಗ, ಈಗಾಗಲೇ ೫೦೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸಿದ್ದೇವೆ, ಆದರೆ ಅದು ಕೇಂದ್ರ ಸರಕಾರದ ಯೋಜನೆಗೆ ಅನುಗುಣವಾಗಿ ಮತ್ತು ಅದರ ಪ್ರಕಾರ ಯೋಜನೆಯನ್ನು ಮಾಡಿ ಕಳುಹಿಸಿಲ್ಲ, ಕೇಂದ್ರ ಸರಕಾರದ ಯೋಜನೆಗೂ ಒಂದು ಹೆಜ್ಜೆ ಮುಂದೆ ಹೋಗಿ ಒಂದು ಯೋಜನೆಯನ್ನು ತಯಾರಿಸಿ ಕಳುಹಿಸಿದ ಕಾರಣದಿಂದಾಗಿ ಅದನ್ನು ಕೇಂದ್ರ ಸರಕಾರದವರು ಒಪ್ಪುವ ಹಾಗಿಲ್ಲ, ಇನ್ನು ಮುಂದೆ ಏನು ಮಾಡಬೇಕು ಎಂದು ವಿಚಾರಮಾಡಿಕೊಂಡು ಅವರು ಕುಳಿತಿದ್ದಾರೆ ನಾನು ಇಲ್ಲ ಎಂದು ಹೇಳುವುದಿಲ್ಲ. ಇಲ್ಲಿ ಇರುವ ವ್ಯತ್ಯಾಸ ಇಷ್ಟೆ ವ್ಯತ್ಯಾಸ ಏನೆಂದರೆ,

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮುಖ್ಯ ಮಂತ್ರಿಯವರ ಬಗ್ಗೆ ನನಗೆ ತುಂಬಾ ಗೌರವ ಇದೆ. ಈಗ ನಾವು ಈ ಕಡೆ ಕುಳಿತಿರಬಹುದು. ತಮ್ಮ ಮೇಲೆ ನನಗೆ ತುಂಬಾ ವಿಶ್ವಾಸ ಇದೆ. ಮಧ್ಯಪ್ರದೇಶದ ಬಗ್ಗೆ ತಾವುಗಳು ಏನು ಹೇಳುತ್ತಾ ಇದ್ದೀರಿ, ಆ ಬಗ್ಗೆ ಹೇಳುವುದಾದರೆ, ಈಗ ತಾನೆ ನಾನು ನಮ್ಮ ಪಕ್ಷದ ಅಖಿಲಭಾರತ ಅಧ್ಯಕ್ಷರನ್ನು ಭೇಟಿ ಮಾಡಿ, ಅವರನ್ನು ಏರೋಡ್ರಮ್‌ನಲ್ಲಿ ಬೀಳ್ಕೊಟ್ಟು ವಾಪಸ್ ಬರುತ್ತಾ ಇದ್ದೇನೆ. ಅವರು ಏನು ಹೇಳಿದ್ದಾರೆ ಅಂದರೆ, ೧೮ ಸಾವಿರದ ಮೇಲಿರುವಂಥಾ ವರದೂ ಸಾಲವನ್ನು ಮನ್ನಾ ಮಾಡಬೇಕು ಅದಕ್ಕೆ ಯಾವುದೇ ಕಂಡೀಶನ್ಸ್ ಇಲ್ಲ ಎಂದು ಹೇಳಿದ್ದಾರೆ. ಸುಮಾರು ೪೯೦ ಕೋಟಿ ರೂಪಾಯಿಗಳನ್ನು ನಾವು ರಾಜ್ಯ ಸರ್ಕಾರ ಭರಿಸುತ್ತೇವೆ ಹೇಳಿದ್ದಾರೆ. ಈಗಾಗಲೇ ಕೇಂದ್ರ ಸರಕಾರದವರು ಹಿಂದಿನ ಕಂಡೀಷನ್ ಮೇಲೆ ೮೩ ಕೋಟಿ ರೂಪಾಯಿಗಳನ್ನು ಮಾತ್ರ ಕೊಡುತ್ತೇವೆ ಎಂದು ಹೇಳಿದ ಮೇಲೆ ಈ ಪ್ರಪೋಸಲ್‌ನ್ನು ಮೂರು ದಿನಗಳ ಹಿಂದೆ ಮಾನ್ಯ ಎಲ್. ಕೆ. ಅದವಾನಿಯವರು ಮತ್ತು ಮಧ್ಯಪ್ರದೇಶದ ಮುಖ್ಯಮಂತ್ರಿಯವರು ಪ್ರಧಾನಿಯವರ ಜೊತೆಗೆ ಮಾತನಾಡಿದ ಮೇಲೆ ಪ್ರಧಾನಿಯವರು ನಿಮ್ಮ ಪ್ರಪೋಸಲ್ ತುಂಬಾ ಚೆನ್ನಾಗಿ ಇದೆ, ಇದಕ್ಕೆ ನಾನು ಖಂಡಿತ ಏನು ಮಾಡಬೇಕೋ ಅದನ್ನು ಮಾಡಿಕೊಡುತ್ತೇನೆ ಎಂದು ಹೇಳುವಂತೆ ಅವರಿಗೆ ಕನ್ವಿನ್ಸ್ ಮಾಡಿ ಒಪ್ಪಿಸಿಕೊಂಡು ವಾಪಸ್ ಬಂದಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ವಿಚಾರವನ್ನು ಹೇಳುತ್ತಿದ್ದೇನೇ ಹೊರತಾಗಿ ಬಲವಂತ ಮಾಡುತ್ತಾ ಇಲ್ಲ. ತಾವುಗಳು ತಮಗೆ ಅನುಕೂಲಕರವಾದವುಗಳನ್ನು ಮಾತ್ರ ಹೇಳಿ ಉಳಿದವುಗಳನ್ನು ಬಿಡುತ್ತಾ ಇದ್ದೀರಿ. ನಾನು ತಮ್ಮಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನಾನು ಅವರು ೫೦೦ ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿ ಕಳುಹಿಸಿದ್ದಾರೆ ಎಂದು ಹೇಳಿದ್ದೇನೆ. ನೀವು ೪೯೦ ಕೋಟಿ ಎಂದರೆ ನಾನು ಇನ್ನೂ ೧೦ ಕೋಟಿ ಹೆಚ್ಚಿಗೆ ಮಾಡಿ ಹೇಳಿದ್ದೇನೆ. ಈಗ ನಾವು ಅದರ ಸವಿಸ್ತಾರ ವಿವರಗಳನ್ನು ತಿಳಿದುಕೊಳ್ಳಲಾರದೆ ಹೋದರೆ ನಮಗೆ ಆ ಬಗ್ಗೆ ಏನನ್ನೂ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಅವರು ಏನು ಯೋಜನೆಗಳನ್ನು ಕಳುಹಿಸಿದ್ದಾರೆ, ಅದರಲ್ಲಿ ೧೯೮೯-೯೦ನೇ ಸಾಲನ್ನೂ ಕೂಡ ಸೇರಿಸಿದ್ದಾರೋ ಎಂಬುದನ್ನು ನಾವು ಇನ್ನೂ ತಿಳಿದುಕೊಳ್ಳಬೇಕಾಗಿದೆ. ಗುಜರಾತ್‌ನವರು ೧೯೮೯-೯೦ನೇ ಸಾಲವನ್ನು ಕೂಡ

ಸೇರಿಸಿದ್ದಾರೆ ಎಂದು ಹೇಳುತ್ತಾರೆ. ನಾನು ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದಾಗ ತಿಳಿದು ಬಂದುದು ಏನೆಂದರೆ, ಕೇಂದ್ರ ಸರಕಾರದವರು ನಮ್ಮ ಅಧಿಕಾರಿಗಳಿಗೆ ಸ್ಪಷ್ಟವಾಗಿ ಹೇಳಿದ್ದಾರೆ. ಕೇಂದ್ರ ಸರಕಾರದವರು ಮಾಡಿದ ಯೋಜನೆಗೆ ಅನುಗುಣವಾಗಿದ್ದರೆ ಮಾತ್ರ ೫೦ ಪರ್ ಸೆಂಟ್ ಹಣವನ್ನು ಕೊಡುತ್ತೇವೆ..

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿಮ್ಮ ಅಧಿಕಾರಿಗಳು ದೂರವಾಣಿಯ ಮೂಲಕ ಮಾತ ನಾಡಿದಾಗ ಅಥವಾ ದಿಲ್ಲಿಗೆ ಹೋಗಿ ಮಾತನಾಡಿದಾಗ ಸಿಕ್ಕಿರುವಂಥ ಉತ್ತರಕೂ ಮಾನ್ಯ ಮುಖ್ಯಮಂತ್ರಿ ಗಳು ಹೋಗಿ ಇಲ್ಲಿಯ ಜನರ ಪರಿಸ್ಥಿತಿಯನ್ನು ಅವರಿಗೆ ಮನದಟ್ಟು ಮಾಡಿಕೊಟ್ಟು ಇಂಥ ಸವಲತ್ತು ಗಳನ್ನು ನಮ್ಮ ಜನರಿಗೆ ಕೊಡಿ, ನಾವು ಪ್ರಪೋಸಲ್ಸ್ ಕಳುಹಿಸಿಕೊಡುತ್ತೇವೆ, ನಾವು ಈ ರಿಸ್ಕ್ ತೆಗೆದು ಕೊಳ್ಳುತ್ತೇವೆ ಅದಕ್ಕೆ ಬೇಕಾದ ಹೊಂದಾಣಿಕೆಯನ್ನು ಮಾಡಿಕೊಳ್ಳುವುದಕ್ಕೆ ತಯಾರಾಗಿದ್ದೇವೆ, ಎಂದು ಹೇಳಿ ಕೇಂದ್ರದ ಮನವೊಲಿಸಿಕೊಳ್ಳಬೇಕು. ಏಕೆಂದರೆ, ಅಧಿಕಾರಕ್ಕೆ ಬರುವ ಮುನ್ನ ಬೇರೆ ಬೇರೆ ರಾಜ್ಯದ ಮುಖ್ಯಮಂತ್ರಿಗಳು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆ ಕೊಟ್ಟ ಮೇಲೆ ಅದನ್ನು ಈಡೇರಿಸುವುದು ಅವರ ಕರ್ತವ್ಯವಾಗಿದೆ. ಇದು ಸಂಕಷ್ಟವಾದರೂ ಎದುರಿಸ ಬೇಕಾಗಿದೆ. ಜನತೆಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕಾಗಿದೆ. ಇದೊಂದು ರೀತಿಯಲ್ಲಿ ಹೇಳುವು ದಾದರೆ ಇದು ಪರೀಕ್ಷೆಯ ಕಾಲವಾಗಿ ಪರಿಣಮಿಸಿದೆ. ಈ ದಿಶೆಯಲ್ಲಿ ಮಧ್ಯಪ್ರದೇಶದವರು ಪ್ರಧಾನಿ ಯವರನ್ನು ಕನ್ವಿನ್ಸ್ ಮಾಡಿದ್ದಾರೆ. ತಾವುಗಳು ಕೂಡ ಹಾಗೆ ಮಾಡಬಹುದಿತ್ತಲ್ಲ ಎನ್ನುವುದು ನನ್ನ ವಿನಂತಿಯಾಗಿದೆ,

೫-೦೦ ಪಿ. ಎಂ.

ಅವರು ಸ್ವಲ್ಪ ಹೆಚ್ಚು ಕಡಿಮೆ ಕನ್‌ವಿನ್ಸ್ ಆಗಿದ್ದಾರೆ, ಒಪ್ಪಿಗೆ ಕೊಡುತ್ತಾರೆ ಎನ್ನುತಕ್ಕಂಥ ವಿಶ್ವಾಸ ನನಗಿದೆ. ಈ ಕೆಲಸವನ್ನು ತಾವು ಮಾಡಿ ಎನ್ನುವುದಕ್ಕೋಸ್ಕರ ಇಷ್ಟು ಹೊತ್ತು ಚರ್ಚೆ ಮಾಡುತ್ತಿರುವುದು, ತಾವು ಇವತ್ತಿನವರೆಗೂ ನಮಗೆ ಉತ್ತರವನ್ನು ಕೊಡುತ್ತಿದ್ದೀರಿ. ತುಂಬಾ ಚೆನ್ನಾಗಿ ಉತ್ತರವನ್ನು ಕೊಡುತ್ತಿದ್ದೀರಿ. ಕೆಲವು ಸಾರಿ ತಾವು ಉತ್ತರ ಕೊಟ್ಟಿದ್ದಕ್ಕೆ ಮತ್ತೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಏನೂ ಉಳಿದೇ ಇರುವುದಿಲ್ಲ. ನಾವು ಏನು ನಿಮ್ಮಿಂದ ನಿರೀಕ್ಷೆ ಮಾಡು ತ್ತಿದ್ದೇವೆ ಅಂದರೆ ಈ ರಾಜ್ಯದ ಹಣಕಾಸಿನ ಪರಿಸ್ಥಿತಿ ಏನು? ಎಷ್ಟು ಕೊಟ್ಟಿದ್ದಾರೆ, ಎನ್ನುವ ಪ್ರಶ್ನೆ ಅಲ್ಲ. ಕಳೆದ ನಾಲ್ಕೈದು ತಿಂಗಳಿನಿಂದ ಸತತವಾಗಿ ಈ ರಾಜ್ಯದಲ್ಲಿ ಚರ್ಚೆಯಾದಾಗ, ಸನ್ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ರೈತನಿಗೆ ನೆರವು ದೊರಕಿಸಿಕೊಡುವ ದೃಷ್ಟಿಯಿಂದ, ಏನೇನು ಪ್ರಪೋಸಲ್ಸ್ ಕಳುಹಿಸಿದ್ದೀರಿ ಏನೇನು ಲಿಖಿತ ಮೂಲಕ ಪತ್ರ ವ್ಯವಹಾರವನ್ನು ಮಾಡಿದ್ದೀರಿ ಅಥವಾ ಮಾತುಕತೆ ನಡೆದಾಗ ಅವರು ಏನು ಹೇಳಿದರು? ನಿಜವಾಗಿ ನೀವು ರಾಜ್ಯದ ರೈತನ ಬಗ್ಗೆ ಏನು ಕೇಳಿದ್ದೀರ. ಅವರು ಏನು ಹೇಳಿದ್ದಾರೆ? ಇದರ ಬಗ್ಗೆ ಒಂದು ಶಬ್ದವನ್ನು ತಾವು ಹೇಳುತ್ತಿಲ್ಲ. ಪೋಸ್ಟ್‌ಮ್ಯಾನ್ ರೀತಿ, ಬಂದಂಥ ವರದಿಗಳನ್ನು ಕೊಡುವುದಾದರೆ, ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಇದನ್ನು ನಾವು ನಿರೀಕ್ಷೆಯನ್ನು ಮಾಡುವುದಕ್ಕೆ ಸಾಧ್ಯವೇ? ತಾವು ಈ ದಿಕ್ಕಿನಲ್ಲಿ ಏನು ಮಾಡಿದ್ದೀರಿ? ಇಲ್ಲ, ಯಡಿಯೂರಪ್ಪನವರೆ, ನಾನು ಅವತ್ತೆ ಹೇಳಿದ್ದೇನೆ, ರೈತರ ಸಾಲವನ್ನು ಮನ್ನಾ ಮಾಡುವುದ ಕ್ಕಾಗುವುದಿಲ್ಲ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ. ಆದುದರಿಂದ ನಾವು ಏನೂ ವ್ಯವಹಾರವನ್ನು ಮಾಡಲಿಲ್ಲ ಎಂದು ಹೇಳಿದರೆ, ನಾವು ನಿಮ್ಮನ್ನು ಈ ಪ್ರಶ್ನೆಯನ್ನೇ ಕೇಳುವುದಿಲ್ಲ. ಆದರೆ ಪ್ರಾಮಾಣಿಕ ವಾಗಿ ಮಾಡಿದ್ದರೆ, ತಾವು ದಯಮಾಡಿ ಏನು ಮಾಡಿದ್ದೀರಿ ಎನ್ನುವುದನ್ನು ತಿಳಿಯಲು ಈ ರಾಜ್ಯದ ರೈತರ ಪರವಾಗಿ ನಾನು ನಿಮ್ಮಿಂದ ಅಪೇಕ್ಷೆ ಪಡುತ್ತಿರುವುದು.

ಶ್ರೀ ಡಿ. ಬಿ. ಚಂದ್ರೇಗೌಡ.—ಒಟ್ಟಾರೆ ಇದುವರೆಗೆ ಈ ಚರ್ಚೆಯನ್ನು ನೋಡಿದರೆ ಇದೇನೆಂದು ಹೇಳಿದರೆ, ಇಷ್ಟೆಲ್ಲಾ ವಿಸ್ತೃತವಾದ ಚರ್ಚೆ ಬೇಡ ಎಂದು ಹೇಳಿದಿರಿ, ಈಗ ಇಷ್ಟೆಲ್ಲಾ ಹೇಳಿದಿರಿ, ಇದನ್ನು ಯಾರಿಗೆ ಹೇಳಿದಿರಿ? ನಿಮ್ಮ ನಿರ್ಧಾರ ಏನು ಎಂದು ಹೇಳಿಬಿಡಿ.

ಶ್ರೀ ವೀರೇಂದ್ರ ಪಾಟೀಲ್.—ನಾನು ಇನ್ನೂ ಮುಗಿಸಿಲ್ಲ. ಬರೀ ಆಪರೇಟಿವ್ ಪೋರ್ಷನ್ ಓದಿಬಿಡಿ ಎಂದು ಹೇಳುತ್ತೀರಾ?

ಒಬ್ಬ ಮಾನ್ಯ ಸದಸ್ಯರು.—ಜಡ್ಜ್‌ಮೆಂಟ್ ಹೇಳಿಬಿಡಿ ಅಷ್ಟೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ವೀರೇಂದ್ರ ಪಾಟೀಲರು ಬಹಳ ಬುದ್ಧಿವಂತರು. ಏಕೆಂದರೆ, ನಾನು ಅವರ ಗರಡಿಯಲ್ಲಿ ಸ್ವಲ್ಪ ದಿನ ಕೆಲಸವನ್ನು ಮಾಡಿದ್ದೇನೆ. ನುಣುಚಿಕೊಳ್ಳುವುದರಲ್ಲಿ ಬಹಳ ಬುದ್ಧಿವಂತರು. ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಒಂದೂವರೆ ಗಂಟೆ ಮಾತನಾಡಿ, ತಾವು

ಹೇಳಿದ ಹಾಗೆ, ನಾಲ್ಕನೇ ಸಾರಿ ಇದರ ಬಗ್ಗೆ ಚರ್ಚೆಯಾಗುತ್ತಿರುವುದು. ಈಗ ನಮಗೆ ಜನ ಓಟು ಹಾಕಿಲ್ಲ. ಮ್ಯಾನಿಫೆಸ್ಟೋ ಮಾಡಿರುವುದು ನಿಜ. ಮ್ಯಾನಿಫೆಸ್ಟೋವನ್ನು ನೀವು ಏತಕ್ಕೆ ಬರೆದರೋ, ನಾವು ಏತಕ್ಕೆ ಬರೆದವೋ. ಅದೆಲ್ಲಾ ಗೊತ್ತಿರುವ ವಿಚಾರ. ಮ್ಯಾನಿಫೆಸ್ಟೋವನ್ನು ನೋಡಿ ಯಾರೂ ಓಟು ಹಾಕಿಲ್ಲ. ಆದರೆ ಮ್ಯಾನಿಫೆಸ್ಟೋ ಪ್ರಕಾರ ನಡೆದು ಕೊಳ್ಳಬಾರದು ಎಂದು ನಾನು ಹೇಳುವುದಿಲ್ಲ. ಆದರೆ ಕೇಂದ್ರ ಸರ್ಕಾರ ಏನೋ ಒಂದು ಸ್ಕೀಮನ್ನು ತೆಗೆದುಕೊಂಡು ಬಂದಿದೆ ಎಂದು ನೀವು ಹೇಳುತ್ತಿದ್ದೀರಿ ಕೇಂದ್ರ ಸರ್ಕಾರದ ಈ ಸ್ಕೀಮನಿಂದಾಗಿ ನಮ್ಮ ರಾಜ್ಯ ಸರ್ಕಾರಕ್ಕೆ ಸುಮಾರು ೧೨೦ ಕೋಟಿ ರೂಪಾಯಿ ಬೇಕಾಗುತ್ತದೆ ಎಂದರೆ ಉಳಿದಿರತಕ್ಕಂಥ ೧೨೦ ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರದಿಂದ ನಮಗೆ ಕಳುಹಿಸುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ ಇದೆಲ್ಲವನ್ನೂ ವಿಸ್ತೃತವಾಗಿ ಮಾತನಾಡುವ ಬದಲಾಗಿ ದಯವಿಟ್ಟು ತಮ್ಮ ಜವಾಬ್ದಾರಿ ಕರ್ನಾಟಕದರೈತರಿಗೆಏನು ಇದೆ ೧೨೦ ಕೋಟಿ ರೂಪಾಯಿಯನ್ನು ಕೊಡಲಿಕ್ಕೆ ಆಗುತ್ತದೆಯೋ ಅದನ್ನು ಹೇಳಿ.

ಶ್ರೀ ವೀರೇಂದ್ರ ಪಾಟೀಲ್—ಅವರು ಅನೇಕ ವಿಚಾರಗಳನ್ನು ಹೇಳಿದ್ದಾರೆ ಅದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಬಹುಶ: ನಮ್ಮ ವಿರೋಧ ಪಕ್ಷದ ನಾಯಕರು ಬಹಳ ಅವಸರದಲ್ಲಿ ಇದ್ದ ಹಾಗೆ ಕಾಣುತ್ತದೆ. ದೀರ್ಘವಾದ ಭಾಷಣವನ್ನು ಕೇಳುವುದಕ್ಕೆ ತಯಾರಾಗಿಲ್ಲ. ಕೊನೆಯ ಆಪರೇಟಿವ್ ಪೋರ್ಷನ್ ಹೇಳಿಬಿಡಿ ಎಂದು ಹೇಳುವ ಪರಿಸ್ಥಿತಿಗೆ ಬಂದ ಹಾಗೆ ಕಾಣುತ್ತದೆ ಮುಖ್ಯಕಾರ್ಯದರ್ಶಿಗಳಿಗೆ ಅಲ್ಲಿಂದ ಬಂದಿರುವಂಥ ಒಂದು ಟೆಲೆಕ್ಸ್ ಮೆಸೇಜನ್ನು ನಾನು ಓದುತ್ತೇನೆ ಏಕೆಂದರೆ ಯಡಿಯೂರಪ್ಪ ನವರು ಅವರ ನಾಯಕರುಗಳು ಹೋಗಿ ಒಪ್ಪಿಸಿಕೊಂಡು ಬಂದಿದ್ದಾರೆ ಎಂದು ಹೇಳಿದ್ದಾರೆ ಚಪ್ಪಾಳೆ ಹೊಡೆದು ಒಪ್ಪಿಸಿಕೊಂಡು ಬಂದಿದ್ದಾರೆ ನಾನು ಒಪ್ಪಿದ್ದೇನೆ ಎಂದು ಹೇಳುವ ಪರಿಸ್ಥಿತಿಯಲ್ಲಿ ಇವತ್ತಿಲ್ಲ. ನಾನು ಹೇಳಿದ್ದು ಮಧ್ಯಪ್ರದೇಶಕ್ಕೆ ಏನು ರೂಲ್ ಅಪ್ಲೈ ಆಗುತ್ತದೆಯೋ ಏನು ಪ್ರಿನ್ಸಿಪಲ್ ಅಪ್ಲೈ ಆಗುತ್ತದೆಯೋ ಕರ್ನಾಟಕಕ್ಕೂ ಅದೇ ಆಗುತ್ತದೆ ಅದನ್ನು ನಾವು ಬಿಡುವಹಾಗಿಲ್ಲ ಅದು ಅವರಿಗೂ ಗೊತ್ತಿದೆ ನಾವು ಏನಾದರೂ ಮಧ್ಯಪ್ರದೇಶಕ್ಕೆ ಇನ್ನು ಒಂದು ಸ್ವಲ್ಪ ಹೆಚ್ಚು ಮಾಡಿದರೆ ಉಳಿಕೆ ರಾಜ್ಯಗಳವರು ನಮ್ಮ ಕುತ್ತಿಗೆಯನ್ನು ಹಿಸುಕುತ್ತಾರೆ ಎನ್ನುವ ವಿಷಯ ಅವರಿಗೂ ಗೊತ್ತಿದೆ ಅದಕ್ಕೆ ಅವರು ಇಷ್ಟು ಲಘುವಾಗಿ ಐದು ನೂರು ಕೋಟಿ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೇವೆ ೧೯೮೯—೯೦ಕ್ಕೂ ಸೇರಿಸಿ ಕೊಟ್ಟಿದ್ದೇವೆ ಅದನ್ನು ಮಾಡಿದ್ದೇವೆ ಎಂದು ಹೇಳಿದರೆ ನನಗೆ ಇವತ್ತಿಗೂ ಅದರ ಬಗ್ಗೆ ಭರವಸೆ ಇಲ್ಲ ಎಂದರೆ ನೀವು ಏನು ಮಾಡಿದಿರಿ ಎನ್ನುವ ಪ್ರಶ್ನೆ ಇದೆ ಅದಕ್ಕಾಗಿ ನಾನು ಹೇಳುವುದು ಏನೆಂದರೆ, ಮೊನ್ನೆ ನಮ್ಮ ಅಧಿಕಾರಿಗಳು ಹೋಗಿ ಬಂದಿರುವುದು ೩೧ ನೇ ತಾರೀಖಿಗೆ. ಅವರು ಬಂದು ೩–೪ ದಿವಸ ಆಯಿತು. ಅವರು ಬಂದಮೇಲೆ ಏನು ಮೆಸೇಜ್ ಬಂದಿದೆ, ಅದನ್ನು ಇಲ್ಲಿ ಓದುತ್ತೇನೆ.

೫–೫೫ ಪಿ. ಎಂ.

I quote from the Telex message sent to all the Chief Secretaries of the States.

> "State Governments have to formulate their own schemes on the pattern of our scheme. This would entitle the State Government to get 50% of the compensation to be provided to the co-operatives for waiving of the loans in accordance with such a scheme."

ಅಂದರೆ ನಮ್ಮ ಸ್ಕೀಮ್ ಪ್ರಕಾರ ಮಾಡಿದರೆ ಮಾತ್ರ ನಿಮಗೆ ೫೦ ಪರ್ಸೆಂಟ್ ಸಿಗುತ್ತದೆ ಎಂದು ಹೇಳಿದ್ದಾರೆ. ಮಧ್ಯ ಪ್ರದೇಶದ ಸ್ಕೀಮ್ ಪ್ರಕಾರ ೫೦% ಸಿಗುವುದಿಲ್ಲ ಎಂದು ಅವರು ಹೇಳಿದ್ದು. ಯಾಕೆಂದರೆ ನಮಗಲ್ಲ All Chief Secretaries of State Governments ಎಂದು ಬರೆದಿದ್ದಾರೆ. ಮಧ್ಯ ಪ್ರದೇಶದವರು ಏನು ಬೇಕಾದರೂ ಲೆಕ್ಕ ಹಾಕಬಹುದು. ಅದು ಬೇರೆ ಮಾತು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಟೆಲೆಕ್ಸ್ ಮೆಸೇಜ್ ಡೇಟ್ ಯಾವುದು.

ಶ್ರೀ ವೀರೇಂದ್ರ ಪಾಟೀಲ್.—೨೫–೫–೧೯೯೦ ಬೇಕಾದರೆ ಇದರ ಕಾಪಿ ಕೊಡಿ ಎಂದರೆ ಕೊಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಕಾಪಿ ಸಪ್ಲೈ ಮಾಡುವುದರಲ್ಲಿ ಬಹಳ ಧಾರಾಳ...

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿರುವುದು ಒಂದು ವಿಷಯ, ಹೇಳುವುದು ಒಂದು ವಿಷಯ ಅಲ್ಲ. ಏನು ಬೇಕಾದರೂ ಸಪ್ಲೈ ಮಾಡುವುದಕ್ಕೆ ತಯಾರು ಇದ್ದೇನೆ. ಅದರ ಬಗ್ಗೆ ನೀವು ಚಿಂತೆ ಮಾಡಬೇಡಿ. ಆದರೆ ಇವೊತ್ತು ಬಿಹಾರ, ಗುಜರಾತ್, ಮಧ್ಯಪ್ರದೇಶ ಎಂದು ತಾವು ಏನು ಹೇಳುತ್ತಿದ್ದೀರಿ, ಇವರೆಲ್ಲಾ ಕೇಂದ್ರ ಸರ್ಕಾರ ಆಗ ೧೦೦ ಪರ್ಸೆಂಟ್ ಸಾಲ ಮನ್ನಾ ಮಾಡುತ್ತೇವೆಂದು ಹೇಳಿ ಆದ ಮೇಲೆ ಅಧಿಕಾರಕ್ಕೆ ಬಂದಿದ್ದಾರೆ. ಅಧಿಕಾರಕ್ಕೆ ಬಂದ ಮೇಲೆ ಅವರು ಎಲೆಕ್ಷನ್ ಮ್ಯಾನಿಫೆಸ್ಟೋನಲ್ಲಿ ಕೊಟ್ಟಿರತಕ್ಕಂತಹ ಭರವಸೆ ಅವರಿಗೆ ಗೊತ್ತಿದೆ. ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೆ ಅಂದ ಮೇಲೆ ಧಾರಾಳವಾಗಿ ಅವರು ಕೂಡ ಮನ್ನಾ ಮಾಡುತ್ತೇವೆಂದು ಹೇಳುವುದರಲ್ಲಿ ಕಷ್ಟ ಇರಲಿಲ್ಲ. ಇವೊತ್ತು ಎಲ್ಲಾ ರಾಜ್ಯಗಳು, ಗುಜರಾತ್, ಮಧ್ಯಪ್ರದೇಶ, ಬಿಹಾರ, ಉತ್ತರ ಪ್ರದೇಶದವರು ಎಲ್ಲರೂ ಕೂಡ ನಾವು ಪೂರ್ತಿ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದಾರೆ. ಬೇಕಾದರೆ ತಾವು ಮ್ಯಾನಿಫೆಸ್ಟೋ ತರಿಸಿ ನೋಡಿ. ಪರಿಸ್ಥಿತಿ ಏನು ಆಗಿದೆ ಅಂದರೆ, ಇವೊತ್ತು ಕರ್ನಾಟಕದಲ್ಲಿ ಒಂದು ಪಕ್ಷ ಅಧಿಕಾರದಲ್ಲಿದೆ, ಅದು ಯಾವುದೇ ಭರವಸೆಯನ್ನು ಜನತೆಗೆ ಕೊಟ್ಟಿಲ್ಲ ಅದು ತಮಗೆ ಗೊತ್ತಿದೆ ಪ್ರಶ್ನೆ ಏನು ಅಂದರೆ, ಭರವಸೆ ಅವರು ಕೊಟ್ಟಿದ್ದಾರೆ, ಅವರು ಮಾಡಿದ್ದಾರೆ ಎಂದು ಹೇಳುವುದರಲ್ಲಿ ಏನೂ ಅರ್ಥ ಇಲ್ಲ. ಯಾಕೆಂದರೆ ಅವರು ಹೇಳಿ ಆ ರೀತಿ ಮಾಡಲಿಕ್ಕೆ ಹೋಗಿದ್ದಾರೆಯೇ ಹೊರತಾಗಿ ಹೇಳುವುದು ಒಂದು ಮಾಡುವುದು ಒಂದು ಮಾಡಲಿಕ್ಕೆ ಅವರು ಹೋಗಲಿಲ್ಲ. ಇಷ್ಟು ಮಾತ್ರ ನಾವು ಹೇಳಬಹುದು. ಈಗ ಪ್ರಶ್ನೆ ಏನು ಅಂದರೆ, ಕೇಂದ್ರ ಸರ್ಕಾರದವರು ಸಾಲ ಪೂರ್ತಿ ಮನ್ನಾ ಮಾಡುತ್ತೇವೆ ಎಂದು ಪೂರ್ತಿ ಜವಾಬ್ದಾರಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ ಮೇಲೆ ಇವೊತ್ತು ರಾಜ್ಯದ ಹಣಕಾಸಿನ ಪರಿಸ್ಥಿತಿ ತಮಗೆ ಗೊತ್ತಿದೆ. ಅಂದ ಮೇಲೆ ನಾವು ಎಲ್ಲರೂ ಯಾಕೆ ಹೋಗಿ ಪ್ರೆಶರ್ಸ್ ಮಾಡಬಾರದು ಕೇರಳದವರೂ ಹೋಗುವವರು ಇದ್ದಾರೆ, ಅಲ್ಲಿನ ಚೀಫ್ ಮಿನಿಸ್ಟರ್ ಹೋಗುತ್ತಾರೋ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನವರು ಹೋಗುತ್ತಾರೋ ಗೊತ್ತಿಲ್ಲ. ಯಾಕೆಂದರೆ ೧೮, ೧೯ನೇ ತಾರೀಖಿನಂದು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್ ಇದೆ ಎಲ್ಲಾ ಚೀಫ್ ಮಿನಿಸ್ಟರ್‌ರವರೂ ಹೋಗುವವರು ಇದ್ದೇವೆ. ಎರಡನೇ ಚೀಫ್ ಮಿನಿಸ್ಟರ್‌ಗೆ ಭೇಟಿ ಮಾಡಿದಾಗ ನಾನು ಇದರ ಬಗ್ಗೆ ಏನು ಮಾಡಬೇಕೆಂದು ಸ್ವಾಭಾವಿಕವಾಗಿ ಕೇಳೇ ಕೇಳುತ್ತೇನೆ. ನಾನಾದರೂ ಕೇಳುತ್ತೇನೆ, ಇಲ್ಲವೇ ಅವರಾದರೂ ಕೇಳುತ್ತಾರೆ. ನಮ್ಮಲ್ಲಿ ಒಂದುಗೂಡಿ ಪ್ರಧಾನ ಮಂತ್ರಿಯವರಿಗೆ ಹೇಳುತ್ತೇವೆ ನೋಡಿ, ನಮ್ಮಿಂದ ಈ ಸಾಲದ ಭಾರ ಹೊರುವುದಕ್ಕೆ ನಮ್ಮಿಂದ ಆಗುವುದಿಲ್ಲ ದಯಮಾಡಿ ಈ ಭಾರ ನೀವು ಹೊರಬೇಕು ಎಂದು ಹೇಳುತ್ತೇನೆ. ಅವರು ನಮಗೂ ಕಷ್ಟ ಇದೆ ಎಂದು ಹೇಳುತ್ತಾರೆ. ನಾವು ಅವರಿಗೆ ಆಗ ಹೇಳುತ್ತೇವೆ. ನಿಮಗೂ ಕಷ್ಟ ಇದೆ, ಆದರೆ ನಮಗಿಂತ ಒಂದು ತೂಕ ನಿಮಗೆ ಅಡ್ವಾಂಟೇಜ್ ಏಕೆ ಇದೆ ಅಂದರೆ ನಾಸಿಕ್‌ನಲ್ಲಿ ಪ್ರಿಂಟಿಂಗ್ ಪ್ರೆಸ್ ಇದೆ. ಆ ಅಡ್ವಾಂಟೇಜ್ ಇದೆ ಅದಕ್ಕಾಗಿ ನೀವೇ ಇದನ್ನು ಭರಿಸಬೇಕು ಎಂದು ಹೇಳುವುದಕ್ಕೆ ನಾವೇನೂ ಹಿಂದು ಮುಂದು ನೋಡುವಹಾಗಿಲ್ಲ. ಅದಕ್ಕಾಗಿ ನಾನು ಹೇಳುವುದು, ಆ ಪರಿಸ್ಥಿತಿ ಬರುವ ಮುನ್ನ ಈ ಸದನದ ಎಲ್ಲಾ ನಾಯಕರುಗಳು ಹೋಗಿ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ನೋಡಿ ನೀವು ಭರವಸೆಯನ್ನು ಕೊಟ್ಟಿದ್ದೀರಿ, ನೀವು ಈ ಭರವಸೆಯನ್ನು ಈಡೇರಿಸಬೇಕು ಎಂದು ಹೇಳುವುದಕ್ಕೆ ಯಾಕೆ ಹಿಂದೆ ಮುಂದೆ ನೋಡಬೇಕು ಎಂದು ನಾನು ಕೇಳುತ್ತೇನೆ. ಇದನ್ನು ಸಮಾಲೋಚನೆ ಮಾಡಿ ಅನಂತರ ಹೇಳಿ, ಬೇಡವೆಂದು ಹೇಳುವುದಿಲ್ಲ. ನಾನು ಯಾಕೆ ಇದನ್ನು ಹೇಳುತ್ತಿದ್ದೇನೆ ಅಂದರೆ ಮಾನ್ಯ ಪ್ರಧಾನ ಮಂತ್ರಿಗಳು ಕರ್ನಾಟಕಕ್ಕೆ ಬಂದಾಗ ಗೊರಾಯಿ ಪ್ರಾಜೆಕ್ಟ್‌ನ ಉದ್ಘಾಟನೆ ಭಾಷಣ ಮಾಡುವುದಕ್ಕೆ ಏಳುವುದಕ್ಕೆ ಮೊದಲು ನಾನು ಮಗ್ಗುಲಲ್ಲಿ ಕುಳಿತಿದ್ದೆ. ಅವರು ನನಗೆ ಕೇಳಿದರು. ನಾನು ಈ ಸದನಕ್ಕೆ ಆ ವಿಚಾರವನ್ನು ಹೇಳಬೇಕು. ಅವರು ಪಾಟೀಲರೇ, ನೀವು ಅರ್ಧ ಸಾಲದ ಹೊರೆಯನ್ನು ಒಪ್ಪಿಕೊಳ್ಳಬೇಕು ಎನ್ನುವ ಮಾತನ್ನು ಹೇಳಿದರು. ನಾನು ಹೇಳಿದೆ, ಸಾಹೇಬರೇ, ಇದು ಬಹಳ ಕಷ್ಟದ ಕೆಲಸ. ನಮ್ಮ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ ಎಂದು ಆಗ ಅವರು, ಉತ್ತರ ಪ್ರದೇಶದವರು ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು ನಾನು ಹೇಳಿದೆ, ಉತ್ತರ ಪ್ರದೇಶದವರು ಜನರಿಗೆ ಭರವಸೆಯನ್ನು ಕೊಟ್ಟಿದ್ದಾರೆ ನೀವೂ ಜನರಿಗೆ ಭರವಸೆಯನ್ನು ಕೊಟ್ಟಿದ್ದೀರಿ, ನಾನೇನು ಭರವಸೆಯನ್ನು ಕೊಟ್ಟಿಲ್ಲ, ನಾನು ಯಾಕೆ ಇದನ್ನು ಹೊತ್ತುಕೊಳ್ಳಬೇಕು ಎಂದು ನನಗೆ ಅರ್ಥವಾಗುತ್ತಿಲ್ಲ ಎಂದು ಹೇಳಿದೆ. ಅವರು ನಕ್ಕು ಅಷ್ಟಕ್ಕೆ ಸುಮ್ಮನಾದರೂ, ನಾನು ಇವತ್ತು ತಮ್ಮ ಮುಂದೆ ಕೇಳುವಂಥಾದ್ದು ಏನು ಅಂದರೆ, ನಾವು ಎಲ್ಲರೂ ಹೋಗಿ ಯಾಕೆ ಗವರ್ನಮೆಂಟ್ ಆಫ್ ಇಂಡಿಯಾಕೆ ಪ್ರೆಶರೈಸ್ ಮಾಡಬಾರದು. ನನ್ನಲ್ಲಿ ಇನ್ನೂ ಒಂದು ಇನ್‌ಫರ್ಮೇಷನ್ ಬಂದಿದೆ. ಉತ್ತರ ಪ್ರದೇಶದವರು ಕೇಂದ್ರ ಸರ್ಕಾರದ ಪ್ರಕಾರ ಒಂದು ಸ್ಕೀಮ್ ಅನ್ನು ತಯಾರು ಮಾಡಿದ್ದಾರೆ. ಅವರು ಪ್ಯಾರಾ ೭ನಲ್ಲಿ ಏನು ಹೇಳುತ್ತಾರೆಂದರೆ......

I am quoting from Para 7 of the Scheme :

> "Now that the details of the Debt Relief scheme have been outlined, it becomes essential to make immediate recovery of all those loans with interest which are not entitled to relief under the scheme. For example, demand of the previous khariff season, Rabi demand, loans upto 2-10-1989, where in the principal amount is about Rs. 10,000/- and the amount remaining recoverable over and above the debt relief made available."

ಇದೆಲ್ಲಾ ವಸೂಲು ಮಾಡಬೇಕು ಎನ್ನುವಂಥಾದ್ದನ್ನು ಅವರು ತಮ್ಮ ಸ್ಕೀಂನಲ್ಲಿ ಹಾಕಿದ್ದಾರೆ, ಅದನ್ನು ನಾನು ಹೇಳುವಹಾಗಿಲ್ಲ. ಏಕೆಂದರೆ, ಪ್ರತಿಯೊಬ್ಬರ ಸ್ಕೀಮನ್ನು ನಾನು ಮಾಡಿಸುತ್ತಾ ಇದ್ದೇನೆ. ಮಾನ್ಯ ಯಡಿಯೂರಪ್ಪನವರು, ಅವರು ಯಾವರೀತಿಯಿಂದ ಮಾಡಿದ್ದಾರೆ ಎನ್ನುವುದನ್ನು ತಿಳಿದು ಕೊಳ್ಳುವುದಕ್ಕೆ ನೀವು ಏಕೆ ಪ್ರಯತ್ನ ಮಾಡಿಲ್ಲ ಎಂದು ಕೇಳಿದರು. ನಾನು ಮಾಡುತ್ತೇನೆ. ಏಕೆಂದರೆ, ಏನಾದರೂ ಅವಸರದಲ್ಲಿ ನಾವೇನೂ ಸ್ಕೀಂ ಮಾಡುವಹಾಗಿಲ್ಲ. ನಮ್ಮ ಜೊತೆಯಲ್ಲಿ ನೆರೆ ಪ್ರಾಂತ್ಯದಲ್ಲಿ ರುವಂಥವರು ಯಾವರೀತಿ ಸ್ಕೀಂ ಮಾಡುತ್ತಾರೆ, ಉಳಿಕೆ ರಾಜ್ಯದವರು ಯಾವರೀತಿ ಸ್ಕೀಂ ಮಾಡುತ್ತಾರೆ, ಯಾವರೀತಿ ಯೋಜನೆ ಮಾಡುತ್ತಾರೆ. ಅದನ್ನೂ ತಿಳಿದುಕೊಂಡು ನಾವು ಒಂದು ಸ್ಕೀಂ ಮಾಡುತ್ತೇವೆ. ಆದರೆ ಈ ಮಧ್ಯೆ ನಾನು ಕೇಳುವುದು ಏನೆಂದರೆ, ನಾವು ಏಕೆ ಪ್ರಯತ್ನ ಮಾಡಬಾರದು ? ಪೂರ್ತಿ ನೀವು ಕೊಡಿರಿ ಎಂದು ನೀವು ಹೇಳಿದಿರಿ, ನಮ್ಮ ಪರಿಸ್ಥಿತಿ ಹಾಗೆ ಇಲ್ಲ. ಇವತ್ತು ನಾನು ಅದನ್ನೇ ಕೇಳಿದೆ. ಇಲ್ಲ ನಿಮ್ಮ ಹತ್ತಿರ ದುಡ್ಡು ಎಕ್ಸೈಜ್‌ನಿಂದ ಬಹಳ ಬರುತ್ತದೆ, ಮತ್ತೊಂದು ಬರುತ್ತದೆ ಎಂದು ನೀವು ಹೇಳಬಹುದು. ಆದರೆ ಇವತ್ತು ೧೨೦ ಕೋಟಿ ರೂಪಾಯಿ ಯಾದರೂ ಬರಬಹುದು, ೧೩೦ ಕೋಟಿಯಾದರೂ ಬರಬಹುದು, ಬರೀ ೧೦೦ ಕೋಟಿ ಯಾದರೂ ಬರಬಹುದು. ಈ ದುಡ್ಡನ್ನು ನಾವು ಬಜೆಟ್‌ನಿಂದ ತೆಗೆದು ಈ ಒಂದು ಯೋಜನೆಗೆ ಹಾಕುವುದಕ್ಕೆ ನಮ್ಮ ಹತ್ತಿರ ಅವಕಾಶವಿದೆಯೋ ತಾವು ವಿಚಾರಮಾಡಿ. ನನಗನ್ನಿಸುತ್ತದೆ ಇಲ್ಲ. ಏನಾದರೂ ಸ್ವಲ್ಪ ಹೆಚ್ಚು ಮಟ್ಟಿಗೆ ದುಡ್ಡು ಬಂದರೆ ನಿಮ್ಮ ಮುಂದೆ ಬರುತ್ತೇವೆ, ಆ ದುಡ್ಡನ್ನು ಏನು ಮಾಡಬೇಕು, ಯಾವರೀತಿ ಖರ್ಚುಮಾಡಬೇಕು ನಮಗೆ ಡಿಫಿಸಿಟ್ ಎಷ್ಟಿದೆ, ಕಮಿಟ್‌ಮೆಂಟ್ ಎಷ್ಟಿದೆ ಎನ್ನುವುದನ್ನೆಲ್ಲಾ ನಿಮ್ಮ ಮುಂದೆ ಇಡುತ್ತೇವೆ. ನಾವೂ ನೀವೂ ಕುಳಿತು ಇದರ ಬಗ್ಗೆ ವಿಚಾರ ಮಾಡೋಣ. ಎಷ್ಟು ದುಡ್ಡು ಹೆಚ್ಚು ಬರುತ್ತಾ ಇದೆ ಅದನ್ನು ಯಾವರೀತಿ ಖರ್ಚು ಮಾಡಬೇಕು ಎನ್ನುವುದು ಇದು. ನನಗನ್ನಿಸುವಂಥಾದ್ದು ಆದರೆ ಇವತ್ತು ಆ ಪರಿಸ್ಥಿತಿಯಲ್ಲಿ ನಾವು ಇಲ್ಲ. ಅದಕ್ಕಾಗಿ ನಾನು ತಮ್ಮನ್ನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ ಮಾನ್ಯ ಯಡಿಯೂರಪ್ಪನವರಿಗೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ನಾವೆಲ್ಲರೂ ಸೇರಿ ಏಕೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ತರಬಾರದು. ಅದರಲ್ಲಿ ಮಾನ್ಯ ಯಡಿಯೂರಪ್ಪನವರ ಜವಾಬ್ದಾರಿ ಇದೆ, ಮತ್ತು ಮಾನ್ಯ ಯಡಿಯೂರಪ್ಪನವರ ಪಕ್ಷದ ನಾಯಕರೂ ಕೂಡ ಇದರಲ್ಲಿ ದೊಡ್ಡ ಪಾತ್ರವನ್ನು ವಹಿಸಬಹುದು ಎಂದು ನಾನು ತಿಳಿದು ಕೊಂಡಿದ್ದೇನೆ. ಏಕೆಂದರೆ, ಸ್ವಲ್ಪ ಮಟ್ಟಿಗೆ ತಮಾಷೆಯಾಗಿ ಹೇಳುತ್ತೇನೆ, ತಪ್ಪು ಅರ್ಥಮಾಡಿಕೊಳ್ಳ ಬಾರದು. ಇವತ್ತು ನ್ಯಾಷನಲ್ ಫ್ರಂಟ್ ಗವರ್ನಮೆಂಟ್ ಎರಡು ಕಾಲಿನ ಕುರ್ಚಿ. ಈ ಎರಡು ಕಾಲಿನ ಕುರ್ಚಿ ಹೇಗೆ ನಿಂತುಕೊಳ್ಳಬಹುದು ಎಂದು ನೀವು ಕೇಳಬಹುದು. ಅದು ಟೂ ಲೆಗ್ಸ್ ಚೇರ್. ಮೂರನೇ ಲೆಗ್ ಬಿ.ಜೆ.ಪಿ., ನಾಲ್ಕನೇ ಲೆಗ್ ಸಿ.ಪಿ.ಎಂ. ಒಂದು ಲೆಗ್ ಹೋದರೂ ದಢಾ ಎಂದು ಬೀಳುತ್ತದೆ. ಅದನ್ನೇ ನಾನು ಹೇಳಿದ್ದೇನೆ. ಅದಕ್ಕೆ ಇವತ್ತು ಬಿ.ಜೆ.ಪಿ. ನಾಯಕರು ಒಂದು ಹಠ ಹಿಡಿದರೆ ಸಾಧಿಸುವುದಕ್ಕೆ ಏನೂ ಕಷ್ಟವಿಲ್ಲ. ಪಾಪ ಮಧ್ಯ ಪ್ರದೇಶದಲ್ಲಿ ಸಾಧಿಸಿದರೆ ಅದರ ಲಾಭ ನನಗೆ ಬಂದೇ ಬರುತ್ತದೆ. ನಾನು ಆ ಲೆಕ್ಕದಿಂದಲೇ ಹೇಳುತ್ತಾ ಇದ್ದೇನೆ.

ಶ್ರೀ ಹೆಚ್. ಏಕಾಂತಯ್ಯ.—ಆ ಸರ್ಕಾರ ಇರುವುದು ನಿಮಗೆ ಇಷ್ಟವಿಲ್ಲ, ಅದಕ್ಕೋಸ್ಕರ ಈ ಮಾತು ಹೇಳುತ್ತಾ ಇದ್ದೀರಿ.

ಶ್ರೀ ವೀರೇಂದ್ರ ಪಾಟೀಲ್.—ನಾನು ಏನು ಹೇಳಿದೆ ಎಂದರೆ, ಕುರ್ಚಿ ಕೆಳಗೆ ಬೀಳಬೇಕು ಎಂದು ಅಲ್ಲ, ಆ ಕುರ್ಚಿ ಉಳಿದದ್ದು ಬಿಜೆಪಿಯವರ ಕಾಲಿನಿಂದ ಮತ್ತು ಸಿಪಿಎಂ ಕಾಲಿನಿಂದ ಎಂದು ಹೇಳಿದೆ. ಕೆಳಗೆ ಬೀಳಲಿ ಎಂದು ನಾನೇಕೆ ಹೇಳಲಿ, ಕೆಳಗೆ ಹಾಕುವ ಪ್ರಶ್ನೆಯೇ ಇಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್.—ಆ ಕುರ್ಚಿ ಖಾಲಿಯಾದರೆ, ತಾವು ಇಲ್ಲಿಂದ ಡೆಲ್ಲಿಗೆ ಹೋದರೆ ಇಲ್ಲಿ ತಾವು ಇಲ್ಲದ ಹಾಗೆ ಆಗುತ್ತದೆ. ಆದ್ದರಿಂದ ದಯವಿಟ್ಟು ತಾವು ಇಲ್ಲೇ ಇರಿ.

ಶ್ರೀ ವೀರೇಂದ್ರ ಪಾಟೀಲ್.—ನಾನು ಡೆಲ್ಲಿಗೆ ಹೋಗುವ ಪ್ರಶ್ನೆಯಿಲ್ಲ, ಡೆಲ್ಲಿಯಿಂದ ಬಂದಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ತಾವು ಹೇಳಿದಹಾಗೆ, ನ್ಯಾಷನಲ್ ಫ್ರಂಟ್ ಗವರ್ನಮೆಂಟ್ ಯಾವರೀತಿ ಇದೆ ಎನ್ನುವುದು ಎಲ್ಲರಿಗೂ ಗೊತ್ತಿರುವಂಥ ಸಂಗತಿ. ಕಮ್ಯುನಿಸ್ಟ್ ಮತ್ತು ಬಿಜೆಪಿ ಸಹಕಾರದಿಂದ ಸರ್ಕಾರ ನಡೆಯುತ್ತಿದೆ. ಆದರೆ ತಾವು ಇದನ್ನಾದರೂ ಅಪ್ರಿಷಿಯೇಟ್ ಮಾಡುತ್ತೀರಿ ಅಲ್ಲವೇ. ಇವತ್ತು ಬಿಜೆಪಿ ಮೂರು ಕಡೆ ರಾಜ್ಯಗಳಲ್ಲಿ ಅಧಿಕಾರದಲ್ಲಿರಬೇಕಾದರೆ ತಾವು ಹೇಳಿದ ರೀತಿಯಲ್ಲಿ ನಮ್ಮದು ಅತಿ ಪ್ರಮುಖವಾದಂಥ ಬೇಬಲ ಇರುವಂಥ ಸಂದರ್ಭದಲ್ಲಿ ಇವತ್ತು ಕೇಂದ್ರಸರ್ಕಾರ ಕೊಡುವಂಥ ಸಹಾಯಧನವನ್ನು ಉಪಯೋಗ ಮಾಡಿಕೊಂಡು ೧೯೮೯-೯೦ನೇ ಸಾಲಿನ ರೈತರ ಸಾಲದ ಬಗ್ಗೆಯೂ ಇದರ ಉಪಯೋಗ ಮಾಡಿಕೊಡಿ ಎಂದು ಪ್ರಧಾನಿಯವರ ಮನಸ್ಸನ್ನು ಒಲಿಸುವಂಥ ಪ್ರಯತ್ನಮಾಡಿ. ರಾಜಾಸ್ಥಾನ, ಮಧ್ಯ ಪ್ರದೇಶ, ಹಿಮಾಚಲ ಪ್ರದೇಶ ಸರ್ಕಾರಗಳು ರೈತರಿಗೆ ನೆರವು ಕೊಡುವಂಥ ಪ್ರಯತ್ನ ಮಾಡುತ್ತಾ ಇರಬೇಕಾದರೆ ಪಕ್ಷಾತೀತವಾಗಿ, ಎಲ್ಲ ರಾಜಕೀಯದಿಂದ ತಾವು ಮೇಲಿದ್ದು ಇವತ್ತು ಏನು ಸಾಧ್ಯವಿದೆ, ಇದರ ಬಗ್ಗೆ ಪ್ರಧಾನಿಯವರ ಮನಸ್ಸನ್ನು ಒಲಿಸಿ, ಎಲ್ಲಾ ಮುಖ್ಯ ಮಂತ್ರಿಗಳೂ ಒಂದಾಗಿ ಇವತ್ತು ರಾಜ್ಯದ ರೈತನಿಗೆ ನೆರವು ಕೊಡಿಸುವ ದೃಷ್ಟಿಯಿಂದ ತಮ್ಮ ಪ್ರಯತ್ನ ಏನು ಸ್ವಾಮಿ ? ನಮ್ಮನ್ನು ಅಪ್ರಿಸಿಯೇಟ್ ಮಾಡಬೇಕಿಲ್ಲ. ತಾವು ಹೇಳಿದಹಾಗೆ, ಇವತ್ತು ನಾವು ಹಿಂದೆ ಸರಿದರೆ ಸರ್ಕಾರ ಬೀಳಬಹುದು, ಇದರಿಂದ ಸಾಧನೆ ಆಗುವುದು ಏನೂ ಇಲ್ಲ. ಆದಕ್ಕೋಸ್ಕರ ನಾನು ಏನು ಹೇಳುವುದಕ್ಕೆ ಹೊರಟಿದ್ದ ಅಂದರೆ, ಮಧ್ಯಪ್ರದೇಶ, ರಾಜಾಸ್ಥಾನ, ಹಿಮಾಚಲ ಪ್ರದೇಶದಲ್ಲಿ ನಾವು ಹಿಂದೆ ಬಿದ್ದು ಸಾಲ ಮನ್ನಾ ಮಾಡುವುದಕ್ಕೆ ಮುಂದೆ ಹೋಗದೇನೇ ಈರೀತಿ ನಾವು ವರ್ತನೆ ಮಾಡಿ ನಾನು ಇಲ್ಲಿ ಬಂದು ಒಂದು ಪಕ್ಷದ ಪ್ರಮುಖನಾಗಿ ಆ ಮಾತನ್ನು ಆಡುತ್ತಾ ಇದ್ದರೆ ತಾವು ಏನು ಹೇಳಿದರೂ ನಾನು ತಲೆತಗ್ಗಿಸಬೇಕಾಗುತ್ತದೆ. ಇದು ನನ್ನ ಜವಾಬ್ದಾರಿ ಆದರೆ ಜವಾಬ್ದಾರಿ ಸ್ಥಾನದಲ್ಲಿರುವಂಥ ನಮ್ಮ ನಾಯಕರೂ ಸಹ ಕೇಂದ್ರದ ಹಣಕಾಸಿನ ಅನುಕೂಲವನ್ನು ಉಪಯೋಗ ಮಾಡಿಕೊಂಡು ರಾಜ್ಯಸರ್ಕಾರದ ಬೊಕ್ಕಸಕ್ಕೆ ತೊಂದರೆಯಾದರೂ ಪರ್ವಾಗಿಲ್ಲ, ಯಾರಿಂದ ಸಾಲ ತಂದರೂ ಪರ್ವಾಗಿಲ್ಲ, ರೈತನ ಸಾಲ ಮನ್ನಾ ಮಾಡುವುದೂ ಸಹ ಒಂದು ಅಭಿವೃದ್ಧಿ ಕಾರ್ಯ ಎಂದು ಪರಿಗಣಿಸಿ ಇವತ್ತು ಕೇಂದ್ರದ ಮನಸ್ಸು ಒಲಿಸಿ ೧೯೮೯-೯೦ನೇ ಸಾಲಿನ ರೈತನ ಸಾಲವನ್ನೂ ಮನ್ನಾ ಮಾಡುವುದರಲ್ಲಿ ಯಶಸ್ವಿಯಾಗುವ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಾ ಇರಬೇಕಾದರೆ ತಾವು ಸಹಕಾರ ಕೊಟ್ಟರೆ ಖಂಡಿತ ತಮ್ಮ ರಾಜ್ಯದ ರೈತನಿಗೆ ಅನುಕೂಲಮಾಡಿಕೊಟ್ಟಹಾಗೆ ಆಗುತ್ತದೆ. ಆ ಸಂದರ್ಭದಲ್ಲಿ ನಾನು ಅಂದುಕೊಂಡ ಹಾಗೆ ನಮ್ಮ ರಾಜ್ಯಸರ್ಕಾರಕ್ಕೆ ೧೫೦-೧೭೫ ಕೋಟಿ ರೂಪಾಯಿಗಿಂತ ಜಾಸ್ತಿ ಭಾರ ಬೀಳುವುದಿಲ್ಲ. ಆ ೧೭೫-೧೮೦ ಕೋಟಿ ರೂಪಾಯಿಗಳನ್ನು ಹೇಗೆ ಭರಿಸಬೇಕು ಎನ್ನುವುದರ ಬಗ್ಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಈ ಕಡೆ ಇದ್ದಾರೆ, ಸಾಕಷ್ಟು ಪ್ರಭಾವ ಇರುವಂತವರು ಇದ್ದಾರೆ.

ಎಲ್ಲರೂ ಕುಳಿತುಕೊಂಡು ಯೋಚನೆ ಮಾಡೋಣ, ಇದರ ಬಗ್ಗೆ ದುಡ್ಡು ತುಂಬುವುದು ಹೇಗೆ ಎಂದು ಚರ್ಚೆ ಮಾಡಬೇಕೇ ಹೊರತು ಬೇರೆ ಹೇಳಿದರೆ ನಾವು ಏನು ಮಾಡಬೇಕು. ನಾವು ಹಿಂದೆ ಬಿದ್ದಿಲ್ಲ, ಅಕಸ್ಮಾತ್ ಹಿಂದೆ ಬಿದ್ದಿದ್ದರೆ ಒಪ್ಪುತ್ತೇವೆ. ಪ್ರಾಮಾಣಿಕ ಪ್ರಯತ್ನವನ್ನು ಮೂರು ರಾಜ್ಯಗಳವರು ಮಾಡುತ್ತಿದ್ದಾರೆ. ನೀವು ಅಂದರೆ ಕಾಂಗ್ರೆಸ್ಸಿನ ಮೂರು ರಾಜ್ಯಗಳು ಮಾತ್ರ ಮಾಡುತ್ತಿಲ್ಲ. ತಾವು ಹಿಂದೆ ಅಧಿಕಾರದಲ್ಲಿದ್ದಾಗಲೂ ಮಾಡಲಿಲ್ಲ, ಈಗಲೂ ಮಾಡುವುದಿಲ್ಲವೆಂದರೆ ಜನ ಒಪ್ಪುತ್ತಾರೆಯೇ? ಚುನಾವಣೆ ಇನ್ನೂ ನಾಲ್ಕುವರೆ ವರ್ಷ ಇದೆ ಎನ್ನುವ ಒಂದೇ ಕಾರಣಕ್ಕೆ ಜನ ಮರೆಯಬಹುದೆಂದು ತಾವು ಭಾವಿಸುವುದಾದರೆ ತಪ್ಪಾಗುತ್ತದೆ ಜನ ಸೇಡು ತೀರಿಸಿಕೊಳ್ಳತಕ್ಕ ಸ್ಥಿತಿಯಲ್ಲಿದ್ದಾರೆ ಇವತ್ತು ರೈತರು ಕಣ್ಣೀರಲ್ಲಿ ಕೈತೊಳೆಯುತ್ತಿದ್ದಾರೆ. ಲಾಲ್‌ಬಾಗ್‌ನಲ್ಲಿ ೧೦ ಲಕ್ಷ ಜನ ಸೇರಿಸಿ, ನಿಮಗೆ ಗಾರ್ಲೆಂಡ್-ಹಾಕಿಸುತ್ತೇವೆ. ನಾವು ಹೋರಾಟ ಮಾಡಿದ್ದಕ್ಕೆ ಜನ ಓಟು ಕೊಡುತ್ತಾರೆಂಬ ನಂಬಿಕೆ ನಮಗಿಲ್ಲ. ೫ ವರ್ಷ ಪೂರ್ತಿ ನೀವೇ ಅಧಿಕಾರದಲ್ಲಿರಿ, ಸಾಲ ಮನ್ನಾ ಮಾಡುವುದು ಹೇಗೆ, ಹಣ ತುಂಬುವುದು ಹೇಗೆ ಎನ್ನುವುದರ ಬಗ್ಗೆ ಸಲಹೆ ಕೊಡಬೇಕು, ನಮ್ಮಿಂದ ಸಲಹೆ ಕೇಳಬೇಕೆಂದು ಮಾತ್ರ ನಾನು ವಿನಂತಿ ಮಾಡುತ್ತೇನೆ.

ಶ್ರೀ ವೀರೇಂದ್ರಪಾಟೀಲ್.—ಅದನ್ನೇ ನಾನು ಹೇಳುತ್ತಿದ್ದೇನೆ. ಬಿ.ಜೆ.ಪಿ. ನಾಯಕರುಗಳು ಕೇಂದ್ರದ ಮೇಲೆ ಒತ್ತಾಯ ತಂದರೆ, ಕೇಂದ್ರ ಒಪ್ಪಿಕೊಳ್ಳತಕ್ಕ ಪರಿಸ್ಥಿತಿ ಇದೆ. ಅದಕ್ಕೆ ಒತ್ತಾಯ ತರಬೇಕು ಎಂದು ಹೇಳುತ್ತಿದ್ದೇನೆ. ರಾಜಸ್ಥಾನ ಮಧ್ಯಪ್ರದೇಶ ಹಾಗೂ ಹಿಮಾಚಲ ಪ್ರದೇಶಗಳ ಸರ್ಕಾರಗಳು ಸಾಲ ಮನ್ನಾ ಮಾಡುತ್ತೇವೆಂದು ಒಪ್ಪಿಕೊಂಡಿದ್ದವು. ನಾನು ಇಲ್ಲಿ ಒಪ್ಪಿಕೊಂಡಿಲ್ಲ. ವ್ಯತ್ಯಾಸ ಏನು ಅಂದರೆ, ಆ ರಾಜ್ಯಗಳಿಗೆ ಅರ್ಧ ರಿಲೀಫ್ ಬರುತ್ತದೆ. ಅವರು ಕಮಿಟಿ ಮಾಡಿ

ಕೊಂಡಿರುವುದರಿಂದ ೫೦ ಪರ್ಸೆಂಟ್ ರಿಲೀಫ್ ಸರ್ಕಾರ ಕೇಂದ್ರದಿಂದ ಬರುತ್ತದೆ. ನಾವು ಇಲ್ಲಿ ಒಪ್ಪಿಕೊಂಡಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ.— ನೀವು ಒಪ್ಪಿಕೊಂಡಿಲ್ಲವೆಂದು ಜನರ ಸಾಲ ಮನ್ನಾ ಮಾಡುವುದು ಬೇಡವೇ?

ಶ್ರೀ ವೀರೇಂದ್ರ ಪಾಟೀಲ್.— ನಾನಿನ್ನೂ ಮುಗಿಸಿಲ್ಲ, ನಾನು ಮುಗಿಸಿದ ಮೇಲೆ ತಾವು ಕೇಳಿ. ನಾವೆಲ್ಲರೂ ಸೇರಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರೋಣ, ನೀವು ಈ ರೀತಿ ಒಪ್ಪಿಕೊಂಡಿದ್ದೀ. ಆದರಂತೆ ಕೊಡಿ ಎಂದು ಕೇಳೋಣ. ಇದರ ಬಗ್ಗೆ ಇನ್ನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲರಿ ಇನ್ನು ಮಾನ್ಯ ಸದಸ್ಯರುಗಳು ಹಣಕಾಸಿನ ಪರಿಸ್ಥಿತಿ ಬಗ್ಗೆ, ನಮ್ಮ ಮುಂದಿರುವಂಥ ಸಮಸ್ಯೆಗಳ ಬಗ್ಗೆ ಮತ್ತು ಯಾವ ಗೊತ್ತಿದ ಸಮಸ್ಯೆಗಳು ಇವೆ ಇದರ ಬಗ್ಗೆ ಹೇಳಿದ್ದಾರೆ. ಇವುಗಳ ಬಗ್ಗೆ ಸವಿಸ್ತಾರವಾಗಿ ಹೇಳದೇ ಆಪರೇಟೀವ್ ಪೋರ್ಷನ್‌ಗೆ ಬರುತ್ತೇನೆ. ಇವತ್ತು ನಾನು ಸ್ವಲ್ಪ ದುಃಖದಿಂದ ಹೇಳಬೇಕಾಗಿದೆ ಕಳೆದ ಆರು ತಿಂಗಳಿಂದ ವಿರೋಧ ಪಕ್ಷದ ಬಹುಶಃ ಹೆಚ್ಚಿನ ಸದಸ್ಯರು, ಎಲ್ಲರೂ ಅಲ್ಲ, ಒಂದು ವಾತಾವರಣವನ್ನು ಮೂಡಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಕರ್ನಾಟಕ ಸರ್ಕಾರ ರೈತ ದ್ರೋಹಿ, ರೈತ ವಿರೋಧಿ, ರೈತರಿಗೆ ಅನುಕೂಲ ಮಾಡಿಕೊಡುವುದಕ್ಕೆ ಹಿಂದು ಮುಂದು ನೋಡುತ್ತಿದೆ ಎಂದು ಹೇಳಿದ್ದಾರೆ. ಆದರೆ, ಈ ಒಂದು ವಾದಕ್ಕೆ ಯಾವುದೇ ರೀತಿಯ ಅವಕಾಶ ಇಲ್ಲ. ದೋಷಾರೋಪಣೆಗೆ ಅವಕಾಶ ಇಲ್ಲ. ಏಕೆಂದರೆ ನಾವು ಏನಾದರೂ ಹೇಳಿದ್ದರಲ್ಲಿ ತಪ್ಪಾಗಿ ನಡೆದುಕೊಂಡಿದ್ದರೆ, ಆ ದೋಷಕ್ಕೆ ಒಳಗಾಗುತ್ತೇವೆ. ಆದರೂ ಕೂಡ ಇವತ್ತು ಅನೇಕ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ, ಈ ಭಾಗದ ಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಮತದಾನ ಮಾಡಿ ನಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ. ನ್ಯಾಷನಲ್ ಫ್ರಂಟ್ ಗವರ್ನಮೆಂಟ್ ಸಾಲ ಮನ್ನಾ ಮಾಡುತ್ತೇವೆಂದು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದರೂ, ಅದನ್ನು ತಿರಸ್ಕರಿಸಿ ನಮ್ಮ ಪಕ್ಷವನ್ನು ಕರ್ನಾಟಕದಲ್ಲಿ ಅಧಿಕಾರಕ್ಕೆ ತಂದಿದ್ದಾರೆ. ಇಲ್ಲ ಎಂದು ನಾನು ಹೇಳುವುದಿಲ್ಲ. ನಾವು ಸಾಲ ಮನ್ನಾ ಮಾಡುತ್ತೇವೆಂದು ಭರವಸೆ ಕೊಡದಿದ್ದರೂ ಓಟು ಕೊಟ್ಟು ನಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ. ಇವತ್ತು ಕರ್ನಾಟಕದಲ್ಲಿ ರೈತರ ಹಿತಾಸಕ್ತಿಯನ್ನು ಯೋಗಕ್ಷೇಮವನ್ನು ನೋಡಿಕೊಳ್ಳುವಂಥ ಜವಾಬ್ದಾರಿ ಎಲ್ಲರಿಗಿಂತ ಹೆಚ್ಚು ನಮ್ಮ ಮೇಲಿದೆ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಇಂಥ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ಏನು ಮಾಡಬೇಕು? ನಾನು ವಿಚಾರ ಮಾಡಿ ಏನು ಒಂದು ನಿರ್ಣಯಕ್ಕೆ ಬಂದಿದ್ದೇನೆ ಅದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಬಿಚ್ಚು ಮನಸ್ಸಿನಿಂದ ತಮ್ಮ ಮುಂದೆ ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ತಾವೂ ಕೂಡ ಸಂಪೂರ್ಣವಾದಂಥ ಸಹಕಾರ ನನಗೆ ಕೊಡಬೇಕು, ಇವೊತ್ತು ಈ ಸದನದಲ್ಲಿ ನಾನು ಘೋಷಣೆ ಮಾಡುವುದು ಏನೆಂದರೆ, ಕೇಂದ್ರ ಸರ್ಕಾರದವರು ಏನು ಒಂದು ಯೋಜನೆಯನ್ನು ತಂದಿದ್ದಾರೋ ಅದನ್ನು ಕರ್ನಾಟಕ ಸರ್ಕಾರ ಪೂರ್ತಿಯಾಗಿ ಒಪ್ಪುತ್ತದೆ. ಆದರೆ ಇವೊತ್ತು ೧೧೨–೧೫೦ ಎಷ್ಟೆ ಬರಬಹುದು, ಇವೊತ್ತು ನನ್ನ ಮೇಲೆ ನೈತಿಕ ಜವಾಬ್ದಾರಿ ಇಲ್ಲ. ಅದನ್ನು ನಾನು ಹೇಳುತ್ತೇನೆ. ಇಲ್ಲದಿದ್ದರೂ ಕೂಡ ನಾನು ಭಿಕ್ಷೆ ಬೇಡುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ರಿಸರ್ವ್ ಬ್ಯಾಂಕಿನವರಾದರೂ ಕೊಡಲಿ, ಕೇಂದ್ರ ಸರ್ಕಾರದವರು ಲಾಂಗ್ ಟರ್ಮ್ ಇಂಟರೆಸ್ಟ್ ಫ್ರೀ ಲೋನ್ ಕೊಟ್ಟು ನಮ್ಮ ಕೈ ಹಿಡಿಯಬೇಕು. ಈ ಸಂದರ್ಭದಲ್ಲಿ ಇದನ್ನು ತಾಳಲಿಕ್ಕೆ ನಮ್ಮಿಂದ ಆಗುವುದಿಲ್ಲ. ಇಲ್ಲದೇ ಹೋಗಿದ್ದರೆ ಅದನ್ನು ನಾನು ಭಿಕ್ಷೆ ಬೇಡಲಿಕ್ಕೆ ಹೋಗುತ್ತಾ ಇರಲಿಲ್ಲ ಇವೊತ್ತಿನ ದಿವಸ ನಾನು ಸ್ಪಷ್ಟವಾಗಿ ಹೇಳಬೇಕಾದರೆ ಇದು ನನಗೆ ಶಕ್ತಿ ಮೀರಿದಂಥ ಒಂದು ಸಾಹಸ ಇರುವುದರಿಂದ ಮತ್ತು ಪದೇ ಪದೇ ಯಡಿಯೂರಪ್ಪನವರು ಹೇಳಿದ್ದಾರೆ. ನೀವು ಒಪ್ಪಿಕೊಳ್ಳಿ, ಹೋಗೋಣ, ಕೇಂದ್ರಕ್ಕೆ ಕೇಳೋಣ, ರಿಸರ್ವ್ ಬ್ಯಾಂಕಿಗೆ ಕೇಳೋಣ, ಈ ರೀತಿಯ ಸಹಾಯ ಕೊಡೋಣ ಎಂದು ಹೇಳಿದ್ದಾರೆ. ಈ ಸ್ಕೀಮ್ ನಾನು ಒಪ್ಪಿಕೊಂಡಿದ್ದೇನೆ. ನನಗೆ ಗ್ರಾಂಟ್ ಬೇಡ. ಲಾಂಗ್‌ಟರ್ಮ್ ಇಂಟರೆಸ್ಟ್ ಫ್ರೀ ಲೋನ್ ಕೊಟ್ಟು ಈ ಒಂದು ಸಂದರ್ಭದಲ್ಲಿ ಈ ಯೋಜನೆ ಪೂರ್ತಿಯಾಗಿ ಕಾರ್ಯಗತವಾಗುವುದಕ್ಕೆ ನಮ್ಮ ಕೈ ಹಿಡಿಯಬೇಕು. ಆ ರೀತಿಯಿಂದ ಮನವೊಲಿಸುವಂಥ ಜವಾಬ್ದಾರಿ ಹೆಚ್ಚಿಗೆ ವಿರೋಧಪಕ್ಷದ ನಾಯಕರಿಂದ ಆಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ ಇನ್ನು ಮುಂದೆ ಅಂದರೆ ಇವೊತ್ತಿನಿಂದ ಈ ಒಂದು ರೈತರ ಸಮಸ್ಯೆ ಬಗ್ಗೆ ರಾಜಕೀಯ ಬಳಸುವುದನ್ನು ನಿಲ್ಲಿಸಬೇಕು ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇವೊತ್ತು ತಾವು ಏನು ಘೋಷಣೆ ಮಾಡಿದ್ದೀರಿ, ಕೇಂದ್ರ ಸರ್ಕಾರದ ಆದೇಶದಂತೆ ಆ ಚೌಕಟ್ಟಿನಲ್ಲಿ ಇದಕ್ಕಿಂತಲೂ ಮುಂದೆ ಹೋಗಲಿಕ್ಕೆ ಸಾಧ್ಯವಿಲ್ಲದೇ ಇರುವಂಥ ಘೋಷಣೆ ಮಾಡಬೇಕಾಗಿದೆ ಅದನ್ನು ಮಾಡಿದ್ದೀರಿ. ನಾನು ತಮ್ಮಲ್ಲಿ ವಿನಂತಿ ಮಾಡ

ಕೊಳ್ಳುವುದು ಇಷ್ಟೆ. ಯಾರು ೧೯೮೯-೯೦ರ ಸಾಲಿನಲ್ಲಿ ಅಥವಾ ಕಳೆದ ಹತ್ತಾರು ವರ್ಷಗಳಿಂದಲೂ ಪ್ರಾಮಾಣಿಕವಾಗಿ ಸಾಲ ಪಡೆದು ಆ ಸಾಲ ವಾಪಸ್ಸು ಕಟ್ಟಲಿಕ್ಕೆ ಶಕ್ತಿ ಇಲ್ಲದಂಥ ಸಂದರ್ಭದಲ್ಲೂ ಸಾಲ ವಾಪಸ್ಸು ಕಟ್ಟಿ ಗೌರವದಿಂದ ಜೀವನ ನಡೆಸಿಕೊಂಡು ಬರುತ್ತಿದ್ದಾರೆ, ಅವರು ೧೯೮೯-೯೦ನೇ ಸಾಲಿನಲ್ಲಿ ಪಡೆದಿರುವಂಥ ಸುಮಾರು ೧೭೬ ಕೋಟಿ ರೂಪಾಯಿ ಸಾಲ ಏನಿದೆ ಆ ಸಾಲ ಮನ್ನಾ ಮಾಡಿದರೆ ಅದು ನೂರು ಕೋಟಿರೂಪಾಯಿ ದಾಟುವುದಿಲ್ಲ. ಇವೊತ್ತು ಮಧ್ಯಪ್ರದೇಶ ಸರ್ಕಾರ ಯಾವ ರೀತಿ ಆ ಸಾಲ ಮನ್ನಾ ಮಾಡಿ ಎನ್ನುವ ಪ್ರಯತ್ನ ಮಾಡುತ್ತಿದ್ದಾರೆ, ಅದಕ್ಕೆ ಕೇಂದ್ರ ಸರ್ಕಾರ ಒಪ್ಪುವಂಥ ವಾತಾವರಣ ಇದೆ. ಅದಕ್ಕೋಸ್ಕರ ನಾನು ಸಲಹೆ ಕೊಡುತ್ತಿದ್ದೇನೆ. ಇವತ್ತು ತಾವು ಒಂದು ಘೋಷಣೆ ಮಾಡಿ. ವಿರೋಧ ಪಕ್ಷದ ನಾಯಕರ ಒಂದು ಸಮಿತಿಯನ್ನು ತೆಗೆದುಕೊಂಡು ತಮ್ಮ ನಾಯಕತ್ವದಲ್ಲಿಯೇ ನಾವು ಹೋಗೋಣ. ಮಧ್ಯ ಪ್ರದೇಶ ಮತ್ತು ಇತರೆ ರಾಜ್ಯಗಳು ಇರಬಹುದು. ಗುಜರಾತ್ ಇರಬಹುದು. ೧೯೮೯-೯೦ರ ಸಾಲಿನಲ್ಲಿಯೂ ಸಹ ಸಾಲ ಪಡೆದಿರುವಂಥವನಿಗೆ ೨ನೇ ನವೆಂಬರ್ ೧೯೮೯ಕ್ಕೆ ಏನು ಸಾಲ ಪಡೆದಿದ್ದಾರೆ ಅವರೆಲ್ಲರಿಗೂ ಸಾಲ ಮನ್ನಾ ಮಾಡುವಂಥ ತೀರ್ಮಾನಕ್ಕೆ ಕೇಂದ್ರ ಸರ್ಕಾರದ ಸಹಾಯ ಪಡೆಯುವಂಥ ಪ್ರಯತ್ನ ಮಾಡುತ್ತಿದ್ದಾರೆ. ಅವರ ಸಾಲ ಮನ್ನಾ ಮಾಡುವ ದೃಷ್ಟಿಯಿಂದಲೂಸಹ ತಾವೂ ಪ್ರಯತ್ನ ಮಾಡುವ ಹಿನ್ನೆಲೆಯಲ್ಲಿ ದಯಮಾಡಿ ತಾವು ಆ ಸಾಲ ವಸೂಲಾತಿಗೆ ತಡೆ ಆಜ್ಞೆ ಕೊಡಿ. ಇವೊತ್ತು ಅಲ್ಲ, ನಾಳೆ ಮೂರು ನಾಲ್ಕು ದಿವಸದಲ್ಲಿ ಡೆಲ್ಲಿಗೆ ಹೋಗಿ ಪ್ರಧಾನಿಯವರ ಜೊತೆ ಹಣಕಾಸಿನ ಸಚಿವರ ಜೊತೆ ಮಾತನಾಡಿಕೊಂಡು ಬರೋಣ. ಅಲ್ಲಿಯವರೆಗಾದರೂ ತಡೆಯಾಜ್ಞೆ ಕೊಡಿ. ಯಾರು ಪ್ರಾಮಾಣಿಕವಾಗಿ ಸಾಲ ವಾಪಸ್ಸು ಕಟ್ಟುತ್ತಿದ್ದಾರೆ ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ದ್ರೋಹ ಮಾಡಿದಂತಾಗುತ್ತದೆ. ಕೇಂದ್ರ ಸರ್ಕಾರ ಸಹ ಇದನ್ನು ಇಬ್ಬಗೆಯ ನೀತಿ ಮಾಡಿದಂತೆ ಆಗುತ್ತದೆ, ಜನತೆಗೆ ನ್ಯಾಯ ದೊರಕಿಸಿಕೊಟ್ಟಂತಾಗುವುದಿಲ್ಲ. ಅದಕ್ಕೋಸ್ಕರ ತಾವು ೧೯೮೯-೯೦ರ ಸಾಲದ ಬಗ್ಗೆ ತಡೆಯಾಜ್ಞೆ ಕೊಡಿ ವಿರೋಧ ಪಕ್ಷದ ನಿಯೋಗ ನಿಮ್ಮ ನಾಯಕತ್ವದಲ್ಲಿಯೇ ಹೋಗೋಣ. ಪ್ರಧಾನಿಯವರನ್ನು ಮತ್ತು ಹಣಕಾಸಿನ ಸಚಿವರನ್ನು ಭೇಟಿ ಮಾಡೋಣ. ಅದು ಸಾಧ್ಯವಿಲ್ಲ ಅಂದಾಗ ನಾವು, ನೀವು ಏನೂ ಮಾಡಲಿಕ್ಕೆ ಸಾಧ್ಯವಿಲ್ಲ. ಮುಂದೆ ಏನು ಮಾಡಬೇಕೊ ಅದನ್ನು ಮಾಡೋಣ. ಅದನ್ನಾದರೂ ಮಾಡಲಿಕ್ಕೋಸ್ಕರ ತಡೆಯಾಜ್ಞೆ ಕೊಡಿ ಒಂದೆರಡು ಮೂರು ದಿವಸದಲ್ಲಿ ಒಂದು ನಿಯೋಗ ಡೆಲ್ಲಿಗೆ ಹೋಗಿ ಬರುವವರೆಗೂ ಅವಕಾಶ ಮಾಡಿಕೊಡಬೇಕು. ಆಗ ಮಾತ್ರ ಇವತ್ತು ರಾಜ್ಯದ ನಿಜವಾದ ರೈತ, ಬಡವ ರೀಪೇಮೆಂಟ್ ಮಾಡುತ್ತಿದ್ದಾನೆ ಅವನಿಗೆ ನ್ಯಾಯ ಸಿಕ್ಕುತ್ತದೆ, ಇಲ್ಲದಿದ್ದರೆ ಖಂಡಿತ ನ್ಯಾಯ ಸಿಕ್ಕುವುದಿಲ್ಲ. ಆದ್ದರಿಂದ, ದಯಮಾಡಿ ಅದರ ಬಗ್ಗೆ ತಮ್ಮ ನಿಲುವು ಏನು ಎನ್ನುವುದನ್ನು ಸ್ಪಷ್ಟ ಮಾಡಬೇಕು ಎಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ನನ್ನ ಅತ್ಯಂತ ಪರಿಣಾಮ ಎಲ್ಲರ ಮೇಲೂ ಆಗಿದ್ದರೂ ಮಾನ್ಯ ಯಡಿಯೂರಪ್ಪನವರ ಮೇಲೆ ಆದಂತೆ ಕಾಣಿಸಲಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಇವೊತ್ತು ಏನಾದರೂ ೧೯೮೯-೯೦ರ ಸಾಲ ಮನ್ನಾ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಇಷ್ಟು ಹೇಳಿದರೆ ಜನರು ನಂಬಿಕೊಂಡು ಕೊಡುವ ದುಡ್ಡು ಕೊಡಲಾರದಂತಾಗುತ್ತದೆ. ಇವೊತ್ತು ನಾನು ಯಡಿಯೂರಪ್ಪನವರಿಗೆ ಹೇಳುತ್ತೇನೆ. ಅದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಕೇಂದ್ರ ಸರ್ಕಾರದವರು, ೧೯೮೯-೯೦ರ ಸಾಲದ ರಿಕವರಿ ನೀವು ಬಹಳ ತುರ್ತಾಗಿ ಮಾಡಬೇಕು ಎಂದು ಹೇಳಿದ್ದಾರೆ. ಇವೊತ್ತು ಈ ಸದನದಲ್ಲಿ ಬರೆದುಕೊಂಡಿರಿ, ನಿಮ್ಮ ಯೋಜನೆ ಕೇಂದ್ರ ಸರ್ಕಾರ ಖಂಡಿತ ಒಪ್ಪುವುದಿಲ್ಲ. ಪರಿಸ್ಥಿತಿ ಹಾಗೆ ಇದ್ದಾಗ, ರೈತರಿಗೆ ಏತಕ್ಕೆ ಈ ಒಂದು ಟೊಳ್ಳು ಭರವಸೆ ಕೊಡಲಿಕ್ಕೆ ಪ್ರಯತ್ನ ಮಾಡೋಣ. ಅದು ಆಗುವುದಿಲ್ಲ. ನೀವೇ ಡೆಲ್ಲಿಗೆ ಹೋಗಿ ವಿಚಾರಿಸಿಕೊಂಡು ಬನ್ನಿ. ಅದು ನಿಮಗೆ ಗೊತ್ತಿಲ್ಲ. ಈಗ ಈ ಸ್ಕೀಮಿನಲ್ಲಿ ಏನಿದೆ ಇದರ ಪ್ರಕಾರ ಹೋದರೆ ನಮಗೂ ಕ್ಷೇಮ, ರೈತರಿಗೂ ಕ್ಷೇಮ ಇದೆ. ಆಗಲಾರದ್ದು ಮಾಡುತ್ತೇನೆ ಅಂದರೆ ಇವೊತ್ತು ಚಂದ್ರಲೋಕಕ್ಕೆ ಹೋಗಿಬರುತ್ತೇನೆ ಇಲ್ಲಿ ಕುಳಿತಿರು ಎಂದು ಹೇಳಿದ ಹಾಗೆ ಆಗುತ್ತದೆ. ಆದ್ದರಿಂದ, ರೈತರಿಗೆ ಅದನ್ನು ಮಾಡುವುದು ಬೇಡ. ಇದನ್ನಾದರೂ ಸಾಧಿಸೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—೧೯೮೯-೯೦ರ ಸಾಲ ಮನ್ನಾ ಮಾಡುವುದಕ್ಕೋಸ್ಕರ ಮಧ್ಯ ಪ್ರದೇಶ, ಗುಜರಾತ್ ಹಾಗೂ ಇನ್ನಿತರ ಕೆಲವು ರಾಜ್ಯಗಳು ಇವತ್ತು ಒಪ್ಪಿಕೊಳ್ಳುತ್ತಾ ಇವೆ. ದಯ ಮಾಡಿ ಆ ಒಂದು ತೀರ್ಮಾನ ತಾವು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಾನು ಪ್ರಾಯಶ್ಚಿತ್ತ ಮಾಡಿಕೊಳ್ಳುವುದಕ್ಕೋಸ್ಕರ ಈ ಸದನ ಮುಗಿಯುವ ತನಕ ಇದೇ ಸದನದಲ್ಲಿ ಧರಣಿ ಕುಳಿತು ಕೊಳ್ಳುತ್ತೇನೆ. ಯಾವುದೇ ಕಾರ್ಯಕ್ರಮಕ್ಕೆ ಅಡ್ಡಿ ಮಾಡಬೇಕೆಂದು ಅಲ್ಲ, ನಾನು ಗೌರವದಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಡಿ. ಬಿ ಚಂದ್ರೇಗೌಡ.—ನಾನು ಹೊಸ ಸಮಸ್ಯೆಗಳನ್ನು ನಿರ್ವಾಣ ಮಾಡುವುದಕ್ಕೆ ಸಿದ್ಧನಿಲ್ಲ. ನನಗೆ ಬೇಕಾಗಿರುವುದು ಒಂದು ವಿವರಣೆ. ನಿಮ್ಮ ಅಕ್ಸೆಪ್ಟೆನ್ಸ್ ಕಂಡೀಷನ್ ಈ ಕಂಡೀಷನ್ ಫುಲ್‌ಫಿಲ್ ಆದರೆ ಮಾತ್ರ ಈ ಸ್ಕೀಮ್ ಒಪ್ಪಿಕೊಳ್ಳುತ್ತೇವೆಂತಲೋ ಇಲ್ಲವೇ, ಈ ಸ್ಕೀಮ್ ಅನ್ನು ಒಪ್ಪಿಕೊಂಡಿದ್ದೇನೆಂದು ಹೇಳುತ್ತಿದ್ದೀರಾ ? ಈಗ ತಾವು ಬಡ್ಡಿ ರಹಿತ ಸಾಲ ಸಿಕ್ಕರೆ ಕೊಡುತ್ತೇನೆ ಎಂದು ಹೇಳಿದಿರಿ.

ಶ್ರೀ ವೀರೇಂದ್ರ ಪಾಟೀಲ್.—ಲಾಂಗ್ ಟರ್ಮ್ ಲೋನ್, ಬಡ್ಡಿ ರಹಿತ ಸಾಲ ಕೊಟ್ಟರೆ ಕೊಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ತಾವು ಮುಖ್ಯ ಮಂತ್ರಿಯಾಗಿ ಇದಕ್ಕೆ ಬೇಕಾಗಿರತಕ್ಕಂತಹ ಹಣದ ವ್ಯವಸ್ಥೆಯನ್ನು ಕೂಡ ನೋಡಬೇಕಾಗುತ್ತದೆ. ಈಗಲೇ ಹೇಳಿ ಎನ್ನುವಂತಹ ಕೆಲಸವನ್ನು ನಾನು ಮಾಡುವುದಿಲ್ಲ. ಎಲ್ಲರೂ ಸೇರಿ ಒಟ್ಟಿಗೆ ಒಪ್ಪಿಕೊಳ್ಳೋಣ ಅದರ ಬಗ್ಗೆ ಪ್ರಯತ್ನ ಮಾಡೋಣ.

ಶ್ರೀ ವೀರೇಂದ್ರ ಪಾಟೀಲ್.—ನಾವು ಇನ್ನೂ ಪ್ರಥಮ ಹಂತದಲ್ಲಿದ್ದೇವೆ. ಯೋಜನೆ ಇನ್ನೂ ಆಗಿಲ್ಲ. ಈ ಯೋಜನೆಯನ್ನು ನಾನು ತತ್ವಶಃ ಒಪ್ಪುತ್ತೇನೆಂದು ಈ ಸದನಕ್ಕೆ ಭರವಸೆ ಕೊಟ್ಟಿದ್ದು, ಅದಕ್ಕೆ ಹಣ ಎಲ್ಲಿಂದ ಬರಬೇಕು ಎನ್ನುವ ಪ್ರಶ್ನೆ ಇದೆ. ಇದು ನಮಗೂ ನಿಮಗೂ ಗೊತ್ತು. ಅದಕ್ಕಾಗಿ ಈ ದುಡ್ಡು ಕೇಂದ್ರದಿಂದ ಬರಬೇಕು. ಕೇಂದ್ರ ಸರಕಾರ ಇವತ್ತು ನಮಗೆ ಲಾಂಗ್ ಟರ್ಮ್ ಇಂಟರೆಸ್ಟ್ ಫ್ರೀ ಲೋನ್ ಕೊಡಬೇಕೆಂದು ನಾನು ಇವತ್ತು ಆಸೆ ಮಾಡುತ್ತೇನೆ. ಇವತ್ತು ಏನು ಹೇಳಿದ್ದೇನೆ ಅದನ್ನೇ ನಾನು ತಿಳಿಸುವವನಿದ್ದೇನೆ. ಇಲ್ಲಿ ನಿಮ್ಮ ಮುಂದೆ ಹೇಳಿದ್ದೇನೆ ಅಲ್ಲಿಲ್ಲಾ ಏನೋ ಹೇಳುತ್ತೇನೆ ಎನ್ನುವ ಪ್ರಶ್ನೆಯಿಲ್ಲ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಸಭೆಗೆ ನಾನೂ ಕೂಡ ಹೋಗುವವನಿದ್ದೇನೆ. ಅಲ್ಲಿಗೆ ಬೇರೆ ರಾಜ್ಯಗಳ ಮುಖ್ಯ ಮಂತ್ರಿಗಳೂ ಬರುತ್ತಾರೆ. ರಾಜ್ಯಗಳು ಬೇರೆ ಇರಬಹುದು ಆದರೆ ಸಮಸ್ಯೆ ಮಾತ್ರ ಒಂದೇ ಆಗಿದೆ. ನಾವು ಪಕ್ಷ ಭೇದವನ್ನು ಮರೆತು ಏನು ಮಾಡಬೇಕು ಎಂದು ವಿಚಾರ ಮಾಡಬೇಕಾಗುತ್ತದೆ. ಅಂತಹ ಪರಿಸ್ಥಿತಿ ಬಂದಾಗ ಮುಂದೆ ಏನೇನು ಡೆವಲಪ್‌ಮೆಂಟ್ ಆಗುತ್ತದೆ ಎಂಬುದನ್ನು ತಮ್ಮನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ತಿಳಿಸುತ್ತೇನೆ. ನಾನು ಏನು ಹೇಳಿದೆ ಎಂದರೆ, ಈ ಯೋಜನೆಯಿಂದ ರೈತರಿಗೆ ಅನುಕೂಲವಾಗುತ್ತದೆ. ಅದಕ್ಕಾಗಿ ಅದನ್ನು ನಾನು ತತ್ವಶಃ ಒಪ್ಪಿಕೊಳ್ಳುತ್ತೇನೆ. ಆದರೆ ನಮ್ಮ ಹಣಕಾಸಿನ ಪರಿಸ್ಥಿತಿ ಸರಿ ಇಲ್ಲ ಅದಕ್ಕಾಗಿ ಕೇಂದ್ರವನ್ನು ಕೇಳುತ್ತೇನೆ: ದಯಮಾಡಿ ನಿಮ್ಮ ಅರ್ಧ ಕೊಡುವುದಲ್ಲದೆ ನಮ್ಮ ಅರ್ಧದ ಪಾಲನ್ನು ಕೂಡ ಲಾಂಗ್ ಟರ್ಮ್ ಇಂಟರೆಸ್ಟ್ ಫ್ರೀ ಲೋನ್ ಕೊಟ್ಟು ನಮ್ಮ ಕೈ ಹಿಡಿಯಿರಿ ಎಂದು ನಾನು ಕೇಳುತ್ತೇನೆ. ಕೇಂದ್ರ ಸರಕಾರದ ಮೇಲೆ ನಾವೆಲ್ಲರೂ ಪ್ರಭಾವ ಬೀರಿ ಅವರನ್ನು ಒಪ್ಪಿಸಿಕೊಳ್ಳೋಣ ಎನ್ನುವಂಥ ಮಾತನ್ನು ಹೇಳಿದ್ದೇನೆ. ಇನ್ನು ಬೇರೆ ಬೇರೆ ರಾಜ್ಯಗಳಲ್ಲಿ ಯಾವ ರೀತಿ ಮಾಡುತ್ತಾರೆ. ಅದನ್ನು ನೋಡಿಕೊಂಡು ಮುಂದೆ ಏನಾದರೂ ಮಾರ್ಪಾಡು ಮಾಡುವುದಿದ್ದರೆ ಕುರಿತು ಸಮಾಲೋಚನೆ ಮಾಡೋಣ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಕೇಂದ್ರ ಸರಕಾರದ ರಿಸರ್ವ್ ಬ್ಯಾಂಕ್ ಇಂಟರೆಸ್ಟ್ ಫ್ರೀ ಲೋನ್ ಕೊಡದಿದ್ದರೆ ತಾವು ಏನು ಘೋಷಣೆಯನ್ನು ಮಾಡಿದ್ದೀರಿ ಅದರ ಪ್ರಕಾರ ನಡೆದು ಕೊಳ್ಳುತ್ತೀರಾ ?

ಶ್ರೀ ಸಿ. ಬೈರೇಗೌಡ.—ಬಹಳ ಶ್ರಮ ಪಟ್ಟು ಬಹಳ ಕಷ್ಟಪಟ್ಟು ನಿಮ್ಮನ್ನು ಒಂದು ಹೆಜ್ಜೆ ಮುಂದಕ್ಕೆ ತಂದಿದ್ದೇನೆ. ತಾವು ಒಂದು ಹೆಜ್ಜೆ ಮುಂದಕ್ಕೆ ಇಟ್ಟಿದ್ದಕ್ಕೆ ನಿಮಗೆ ಧನ್ಯವಾದಗಳು. ಮೊದಲು ಬಡ್ಡಿಯನ್ನು ರಿಯಾಯಿತಿ ಕೊಡತಕ್ಕಂತಹ ಯೋಜನೆ ಇತ್ತು. ನಾನು ಅದರ ಬಗ್ಗೆ ಮಾತನಾಡಿದ್ದೇನೆ. ಅದರ ಬಗ್ಗೆ ಏನು ಆಲೋಚನೆ ಮಾಡುತ್ತಿದ್ದೀರಿ ? ಆ ಯೋಜನೆಯನ್ನು ಮುಂದುವರಿಸುತ್ತೀರಾ ಅಥವಾ ಈಗ ಏನು ಒಂದು ಹೆಜ್ಜೆ ಮುಂದಿಟ್ಟಿದ್ದೇವೆ, ಇಷ್ಟೇ ಸಾಕೆಂದು ಅಷ್ಟಕ್ಕೇ ತಾವು ನಿಲ್ಲುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಬಡ್ಡಿ ಸಬ್ಸಿಡಿ ಬಗ್ಗೆ ಈಗಾಗಲೇ ನಮ್ಮ ಆಯವ್ಯಯದ ಭಾಷಣದಲ್ಲಿ ಹೇಳಿದ್ದೇವೆ. ಬಡ್ಡಿ ಸಬ್ಸಿಡಿ ಕೊಡುತ್ತೇವೆಂದು ನಾವು ಹೇಳಿದಾಗ ಇದು ನಮ್ಮ ಸ್ಕೀಮಿಗೆ ವ್ಯತಿರಿಕ್ತವಾಗಿದೆ, ಇದನ್ನು ನಾವು ಒಪ್ಪುವ ಹಾಗಿಲ್ಲವೆಂದು ನಬಾರ್ಡ್‌ನವರು ಹೇಳಿದರು. ಇದನ್ನು ಮಾಡಿದರೆ ಮುಂದೆ ಸಾಲ ಕೊಡುವ ಹಾಗಿಲ್ಲವೆಂದು ಕೂಡ ಹೇಳಿದರು. ಇಂಟರೆಸ್ಟ್ ಸಬ್ಸಿಡಿ ಎನ್ನುವುದಿಲ್ಲ ಅದಕ್ಕೆ ಎರಡನೇ ಹೆಸರಿಟ್ಟು, ನಾವು ಅವರಿಗೆ ಎರಡನೇ ರೀತಿಯಿಂದ ಕೊಡುತ್ತೇವೆ ಎಂದು ಒಪ್ಪಿಸಿಕೊಂಡು ಆ ರೀತಿ ಸ್ಕೀಮ್ ಅನ್ನು ಮಾಡುತ್ತಿದ್ದೇವೆ.

೫–೩೦ ಪಿ.ಎಂ.

ಆದರೆ ಒಟ್ಟಿನಲ್ಲಿ ಆ ದುಡ್ಡು ಅವರಿಗೆ ಮುಟ್ಟುತ್ತದೆ. ಅದು ಹೇಗೆ ಮುಟ್ಟುತ್ತದೆ ಎನ್ನುವುದನ್ನು ನಬಾರ್ಡ್‌ನವರೂ ಮತ್ತು ನಮ್ಮ ಅಧಿಕಾರಿಗಳೂ ಕುಳಿತು ಮಾಡುತ್ತಾರೆ. ನಾವು ಅವರಿಗೆ ಏನು ರಿಲೀಫ್‌ನ್ನು ಕೊಡುತ್ತೇವೆ ಎಂದು ಹೇಳಿದ್ದೇವೋ ಆ ಒಂದು ಕಮಿಟ್‌ಮೆಂಟಿಗೆ ನಾವು ಬದ್ಧರಾಗಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರ ಏನು ಹೊಸ ಯೋಜನೆಗಳನ್ನು ರೂಪಿಸಿದೆ (ಕೃಷಿ ಮತ್ತು ಗ್ರಾಮೀಣ ಸಾಲ ಪರಿಹಾರ ಯೋಜನೆ) ಇದನ್ನು ತತ್ವಶಃ ಒಪ್ಪಿಕೊಂಡು ಇಲ್ಲಿ ಅದನ್ನು ಜಾರಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ. ಅದಾದ ಮೇಲೆ ಇನ್ನೊಂದು ಮಾತನ್ನು ಅವರು ಹೇಳಿದ್ದಾರೆ. ಮಾನ್ಯ ಬೈರೇಗೌಡರು ಕೇಳಿದ್ದನ್ನೇ ನಾನು ಕೇಳಬೇಕೆಂದಿದ್ದೆ. ಅದರಲ್ಲಿ ಸ್ವಲ್ಪ ಭಾಗವನ್ನು ನಾನು ಹೇಳಿದ್ದೇನೆ ಇನ್ನುಳಿದ ಭಾಗ ಏನು ಅಂದರೆ, ತಮ್ಮ ಬಜೆಟ್‌ನಲ್ಲಿ ಬೆಳೆ ಸಾಲ ಎಂದು ಹೇಳಿದ್ದೀರಿ. ಅಲ್ಲಿ ಕೇವಲ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಎಂದು ಹೇಳಿದ್ದೀರಿ. ನಾನಾದರೂ ತಮ್ಮಲ್ಲಿ ಕೇಳಿ ಕೊಳ್ಳುತ್ತೇನೆ. ಈ ಸೌಲಭ್ಯವನ್ನು ಎಲ್ಲ ರೈತರಿಗೂ ಕೊಡಬೇಕು. ಸಾಲವನ್ನು ಮನ್ನಾ ಮಾಡುವುದ ರಿಂದ ಕೇವಲ ಕೆಲವೇ ರೈತರಿಗೆ ಅನುಕೂಲವಾಗಬಹುದು. ಆದರೆ ಈ ಯೋಜನೆ ಏನಿದೆ, ಇದು ಇನ್ನು ಮುಂದೆ ಸಾಲ ಮಾಡುವ ರೈತರಿಗೆ ಉಪಯೋಗವಾಗುತ್ತದೆ. ಇದು ವ್ಯಾಪಕವಾಗಿ ಉಪಯೋಗವಾಗುವುದ ರಿಂದ ಈ ಯೋಜನೆಗೆ ನೀವು ಬಡ್ಡಿ ಸಾಲ ರಿಯಾಯಿತಿ ಯೋಜನೆ ಎಂದು ಬೇಕಾದರೂ ಹೆಸರನ್ನಿಡಿ, ಅಥವಾ ಇನ್ನು ಬೇರೆ ಯಾವುದೇ ಹೆಸರನ್ನು ಬೇಕಾದರೂ ಇಡಿ. ಆದರೆ ಇಡೀ ದೇಶದಲ್ಲಿರತಕ್ಕ ಎಲ್ಲ ವರ್ಗದ ಕೃಷಿಕರಿಗೆ ಅಂದರೆ ಅವರು ಸಣ್ಣ ರೈತರಿರಬಹುದು, ದೊಡ್ಡ ರೈತರಿರಬಹುದು, ಬೆಳೆ ಸಾಲ ಗಾರರಿರಬಹುದು ಅಥವಾ ದೀರ್ಘಾವಧಿ ಬೆಳೆ ಸಾಲಗಾರರಿರಬಹುದು, ಯಾರು ಕಾಲಕ್ಕೆ ಸರಿಯಾಗಿ ಕಂತನ್ನು ಮರು ಪಾವತಿ ಮಾಡುತ್ತಾರೆ ಅವರಿಗೂ ಸಹ ಈ ಯೋಜನೆಯ ಲಾಭ ಸಿಕ್ಕುವಂತೆ ಮಾಡು ತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಬಜೆಟ್‌ನಲ್ಲಿ ಈ ಯೋಜನೆ ಇದೆ. ಅದರಲ್ಲಿ ಏನಾದರೂ ಮಾರ್ಪಾಡು ಮಾಡಬೇಕಾದರೆ ಬಜೆಟನ್ನು ಚರ್ಚೆಗೆ ತೆಗೆದುಕೊಂಡಾಗ ತಾವು ಇದನ್ನು ಹೇಳಿ ಮಾನ್ಯ ಹಣಕಾಸಿನ ಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಆದ ಮೇಲೆ ಇನ್ನು ಮುಂದೆ ಎಷ್ಟು ಫೈನಾನ್ಷಿಯಲ್ ಕಮಿಟ್‌ಮೆಂಟ್ ಆಗುತ್ತದೆ ಎಂಬುದನ್ನು ವಿಚಾರ ಮಾಡಿ ಅವರು ಹೇಳಬಹುದೇ ಹೊರತು, ಈಗ ತಾವು ಕೇಳಿದ ಕೂಡಲೇ ಹೇಳತಕ್ಕ ಪರಿಸ್ಥಿತಿಯಲ್ಲಿ ನಾ ಇಲ್ಲ.

ಶ್ರೀ ಶ್ರೀರಂಗದೇವರಾಯಲು.—ಮಾನ್ಯ ಅಧ್ಯಕ್ಷರೆ, ನಮ್ಮ ನೀರಾವರಿ ಇಲಾಖೆಯ ಅಧಿಕಾರಿಗಳ ದುರುಪಯೋಗದಿಂದ ನಮಗೆ ಸಾಕಷ್ಟು ಅನ್ಯಾಯವಾಗಿದೆ. ಇದನ್ನು ನಾವು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ ಇರಿಗೇಷನ್ ಡಿಪಾರ್ಟ್‌ಮೆಂಟ್, ರೆವಿನ್ಯೂ ಡಿಪಾರ್ಟ್‌ಮೆಂಟ್ ಇನ್ನಿತರ ಡಿಪಾರ್ಟ್ ಮೆಂಟ್‌ಗಳಿಂದ ಎಸ್ಟಿಮೇಟ್ಸ್‌ನ್ನು ಮಾಡಿ ನಾವು ಮಾನ್ಯ ಮುಖ್ಯ ಮಂತ್ರಿ ಳಿಗೆ ಕೊಟ್ಟಿದ್ದೇವೆ. ಡ್ರೈ ಏರಿಯಾದಲ್ಲಿ ಮಳೆ ಸರಿಯಾಗಿ ಬರುವುದಿಲ್ಲ ಇದರಿಂದಾಗಿ ನಮ್ಮಲ್ಲಿ ವ್ಯವಸಾಯ ಸರಿಯಾಗಿ ಆಗುವುದಿಲ್ಲ. ಒಂದುವೇಳೆ ಮಳೆ ಬರುತ್ತದೆಂದು ಯಾರಾದರೂ ರೈತರು ಸಾಲವನ್ನು ಮಾಡಿಕೊಂಡಿದ್ದರೆ ಮಳೆ ಬರದೆ ಅವರಿಗೆ ಬಹಳ ಅನ್ಯಾಯವಾಗಿರುತ್ತದೆ ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮಲ್ಲಿ ತುಂಗಭದ್ರಾ ಎಡದಂಡೆ ಯಲ್ಲಿರತಕ್ಕ ರೈತರಿಗೆ ಅನುಕೂಲ ಮಾಡಿಕೊಡಬೇಕು. ಈ ಎಡದಂಡೆ ಕಾಲುವೆಯಲ್ಲಿ ಬರತಕ್ಕ ರೈತರಿಗೆ ಅನ್ಯಾಯವಾಗಲು ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರೇ ಮುಖ್ಯ ಕಾರಣ. ಆದ್ದರಿಂದ ಈ ಭಾಗದ ಜನರನ್ನೂ ನಿಮ್ಮ ಯೋಜನೆಯಡಿಯಲ್ಲಿ ಸೇರಿಸಿಕೊಳ್ಳುವುದಕ್ಕೆ ಕ್ರಮ ತೆಗೆದು ಕೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಈ ಯೋಜನೆಯಲ್ಲಿ ಅದು ಬರುವುದಿಲ್ಲ.

೫–೩೫ ಪಿ. ಎಂ.

ಪ್ರೊ. ಎಂ. ಡಿ ನಂಜುಂಡಸ್ವಾಮಿ.—ಸನ್ಮಾನ್ಯ ಅಧ್ಯಕ್ಷರೆ ಇವತ್ತು ಬೆಳಿಗ್ಗೆ ಪತ್ರಿಕೆಯನ್ನು ನೋಡಿದಾಗಿನಿಂದ ನನಗೆ ಒಂದುರೀತಿಯಾಗಿದೆ. ಕೇಂದ್ರ ಸರ್ಕಾರದವರು ಕಳುಹಿಸಿದ ಸ್ಕೀಂನ್ನು ತಾವು ಎಲ್ಲರಿಗೂ ಕಳುಹಿಸಿಕೊಟ್ಟಿದ್ದೀರಿ, ಅದನ್ನು ನೋಡಿದರೆ ಸ್ಪಷ್ಟವಾಗಿದೆ ಕೇಂದ್ರದವರಿಗೆ ಮನಸ್ಸಿಲ್ಲ, ತಮ್ಮ ಅಭಿಪ್ರಾಯವನ್ನು ಕೇಳಿದಮೇಲೆ ತಮಗೆ ಶಕ್ತಿ ಇಲ್ಲವೆಂದು ಗೊತ್ತಾಗುತ್ತದೆ. ಈಗ ನಾವು

ನಮ್ಮ ಕರ್ನಾಟಕ ರಾಜ್ಯದ ರೈತರ ಪರವಾಗಿ ಒಂದೇ ಒಂದು ಉಪಕಾರವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇನೆಂದರೆ, ನಮಗಂತೂ ಆರ್ಥಿಕ ಪರಿಹಾರ ಸಿಕ್ಕುವ ಸೂಚನೆ ಇಲ್ಲ. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ, we are trying to work on wrong premises, ಈ ಸ್ಕೀಂ ಏನಿದೆ ಇದು ಬಹಳ ಜಾಣತನದಿಂದ ತಯಾರಿಸಿರತಕ್ಕ ಸ್ಕೀಂ. ಇದು ಯಾವ ರೀತಿ ಇದೆ ಎಂದರೆ, ಇದನ್ನು ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಅಣಿವಾರಿ ಸೂತ್ರ ಇಲ್ಲ. ನಾನ್ ವಿಲ್‌ಫುಲ್ ಡಿಫಾಲ್ಟರ್ ಎನ್ನುವುದರ ಬಗ್ಗೆ ಕೊಟ್ಟಿರತಕ್ಕ ವ್ಯಾಖ್ಯಾನ ಏನಿದೆ ಇದರ ಕೆಳಗಡೆ ಭಾರತದಲ್ಲಿ ಯಾವ ರೈತನೂ ಬರುವುದಿಲ್ಲವೆಂದು ನನಗನಿಸುತ್ತದೆ. ಆ ಕಾರಣಕ್ಕಾಗಿ ಇದನ್ನು ಬಿಟ್ಟು ಸ್ವಲ್ಪ ಮಾತನಾಡಿದರೆ ಒಳ್ಳೆಯದು. ಆದ್ದರಿಂದ ನಾನು ಹೇಳುತ್ತಿರುವುದು ಏನೆಂದರೆ, ನಿಮಗೆ ಶಕ್ತಿ ಇಲ್ಲವೆಂದು ಹೇಳಿದ್ದಾಗಿದೆ. ಆದ್ದರಿಂದ ನಿಮ್ಮಿಂದ ಯಾವುದೇ ಆರ್ಥಿಕ ಪರಿಹಾರವಂತೂ ಸಿಗುವುದಿಲ್ಲ. ಆದರೆ ನಿಮ್ಮ ಪ್ರಣಾಳಿಕೆಯನ್ನು ನೆನಪು ಮಾಡಿಕೊಟ್ಟು, ನಮಗೆ ಸ್ವಲ್ಪ ಭೌತಿಕವಾಗಿಯಾದರೂ ಪರಿಹಾರವನ್ನು ಕೊಡುತ್ತೀರಾ ಎಂದು ನಾನು ಕೇಳಿಕೊಳ್ಳುತ್ತೇನೆ. ತಮ್ಮ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರೆಂದರೆ, ನಾವು ಅಧಿಕಾರಕ್ಕೆ ಬಂದರೆ ಹತ್ತು ಸಾವಿರ ರೂಪಾಯಿಗಳವರೆಗಿನ ಸಾಲವನ್ನು ರದ್ದು ಮಾಡಲು ಪ್ರಧಾನಿಯವರಿಗೆ ಒತ್ತಾಯ ತರುತ್ತೇವೆಂದು ತಾವು ಹೇಳಿದ್ದೀರಿ. ಆದರೆ ಆ ರೀತಿ ಏತಕ್ಕೆ ತಮಗೆ ಮನಸ್ಸಾಯಿತು ಎನ್ನುವುದು ಗೊತ್ತಾಗಲಿಲ್ಲ. ೧೦ ಸಾವಿರ ರೂಪಾಯಿಗಳವರೆಗೆ ರೈತರ ಸಾಲ ರದ್ದು ಮಾಡಲು ಪ್ರಧಾನಿಯವರಿಗೆ ಒತ್ತಾಯ ತರುತ್ತೇವೆಂದು ತಾವು ಪ್ರಣಾಳಿಕೆಯಲ್ಲಿ ಸೇರಿಸಬೇಕಾದರೆ ಅದಕ್ಕೆ ಕಾರಣವಾದರೂ ಏನು ಎನ್ನುವುದನ್ನು ಹೇಳಿ ? ನಮಗೆ ಸಾಲ ಬರಲಿಕ್ಕೆ ಕಾರಣವೇನು ಎಂದು ತಿಳಿದುಕೊಂಡಾದರೂ ನಾವು ನೆಮ್ಮದಿಯಿಂದ ನಿದ್ದೆ ಮಾಡುತ್ತೇವೆ: ಅಷ್ಟು ಉಪಕಾರ ಮಾಡಿ ಮಹಾಸ್ವಾಮಿ.

ಶ್ರೀ ಬಿ. ಹೆಚ್. ಬನ್ನಿಕೋಡ್ —ಮಾನ್ಯ ಮುಖ್ಯಮಂತ್ರಿಗಳು ೧೯೮೦–೮೧ನೇ ಸಾಲಿನ ಸಾಲವನ್ನು ಮನ್ನಾ ಮಾಡುವುದಿಲ್ಲ, ವಸೂಲು ಮಾಡಬೇಕು ಎನ್ನುವ ವಿಚಾರ ಹೇಳಿದರು. ಆದರೆ ಕಡಿಮೆ ಬಡ್ಡಿ ದರವನ್ನು ರೈತರಿಗೆ ಕೊಡುತ್ತೇವೆಂದು ನಮ್ಮ ಬಜೆಟ್‌ನಲ್ಲಿ ಹೇಳಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಮತ್ತೆ ಮುಂದಿನ ಸಾಲ ವಸೂಲಿ ತೀವ್ರಗತಿಯಲ್ಲಿ ನಡೆಯಬೇಕೆಂದು ಹೇಳುವುದರ ಜೊತೆಗೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬಡ್ಡಿಯನ್ನು ಮನ್ನಾ ಮಾಡುತ್ತೇವೆ ಅಥವಾ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಕೊಡುತ್ತೇವೆ ಎನ್ನುವುದನ್ನು ನಿರ್ಣಯಿಸದೆ, ಅದನ್ನು ರೈತರಿಗೆ ಹೇಳದೆ ಇದ್ದರೆ ಸಾಲ ವಸೂಲಿಗೆ ಸಹಾಯ ಆಗುವುದಿಲ್ಲ. ಆದ್ದರಿಂದ ನಿಮ್ಮ ರಿಯಾಯಿತಿ ಬಡ್ಡಿ ದರ ಸಣ್ಣ ದೊಡ್ಡ ಎಲ್ಲ ರೈತರಿಗೆ ಅನುಕೂಲವಾಗುವಂಥ ರೀತಿಯಲ್ಲಿ ನೀವು ಎಷ್ಟು ಬೇಗ ಅದನ್ನು ಹೇಳುತ್ತೀರಿ ಅಷ್ಟು ಬೇಗ ಸಾಲ ವಸೂಲಿಗೆ ಅನುಕೂಲವಾಗುತ್ತದೆ ಎನ್ನುವುದರ ಬಗ್ಗೆ ವಿವರಣೆಯನ್ನು ಕೊಡಬೇಕು ಅಥವಾ ಡಿಕ್ಲೇರ್ ಮಾಡಬೇಕು ಎಂದು ಹೇಳುತ್ತೇನೆ,

ಶ್ರೀ ವೀರೇಂದ್ರ ಪಾಟೀಲ್. —ತಾವು ಬಜೆಟ್ ಸ್ಪೀಚ್‌ನ್ನು ಓದಿ. ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ನಾವು ಏನು ಇಂಟರೆಸ್ಟ್ ಸಬ್‌ಸಿಡಿ ಕೊಡುತ್ತೇವೆಂದು ಹೇಳಿದ್ದೇವೆ. ಹಿಂದಿನ ಸರ್ಕಾರ ಯಾವತ್ತಿನಿಂದ ನಿಲ್ಲಿಸಿದೆ ಬಹುಶಃ ನನಗೆ ನೆನಪಿದ್ದಹಾಗೆ, ಆವತ್ತಿನಿಂದ ನಾವು ಅದನ್ನು ಕೊಡುತ್ತೇವೆ ಎನ್ನುವಂಥ ಭರವಸೆಯನ್ನು ಕೊಟ್ಟಿದ್ದೇನೆ. ಬಜೆಟ್‌ನಲ್ಲಿ ಏನು ಹೇಳಿದ್ದೇವೊ ಅದನ್ನು ಪೂರ್ತಿಯಾಗಿ ನಡೆಸುತ್ತೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಸಾಲವನ್ನು ಮರುಪಾವತಿ ಮಾಡದಂತಹ ರೈತರಿಗೆ ಅವರು ಯಾವ ಬಡ್ಡಿ ದರದಲ್ಲಿ ಸಾಲ ಮರುಪಾವತಿ ಮಾಡಬೇಕೆಂಬ ಸಮಸ್ಯೆ ಬರುತ್ತದೆ. ಆದಕ್ಕೆ ಆದಷ್ಟು ಬೇಗ ಅದು ಇತ್ಯರ್ಥ ಆಗಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್. —ಇತ್ಯರ್ಥ ಮಾಡುತ್ತಾ ಇದ್ದೇನೆ.

ಶ್ರೀ ಬಿ. ಎಂ. ಇದಿನಬ್ಬ. —ಮಾನ್ಯ ಅಧ್ಯಕ್ಷರೇ, ನಾವು ೨೨೦ ಕಿಲೋಮೀಟರ್ ಕರಾವಳಿಯಲ್ಲಿರ ತಕ್ಕಂಥ ಜನ. ನಮ್ಮಲ್ಲಿ ಮೀನುಗಾರರಲ್ಲಿ ಬಡವರೇ ಜಾಸ್ತಿ ಇರತಕ್ಕಂಥವರು, ಮೀನುಗಾರರಿಗೆ ಕೊಟ್ಟಂಥ ಹಣಕ್ಕೆ ಯಾವರೀತಿಯಲ್ಲಿ ಬಡ್ಡಿ ದರವನ್ನು ಹಿಡಿದುಕೊಳ್ಳುತ್ತೀರಿ ?

ಅಧ್ಯಕ್ಷರು.—ಅದರ ಬಗ್ಗೆ ಚರ್ಚೆ ಇದೆ, ಇದಾದನಂತರ ಅದನ್ನು ತೆಗೆದುಕೊಳ್ಳೋಣ.

ಶ್ರೀ ಬಿ. ಎಂ. ಇದಿನಬ್ಬ.—ಸಾಲ ಮನ್ನಾ ಮಾಡುವಾಗ ಅವರಿಗೆ ಇದು ಲಗಾವು ಆಗುತ್ತದೆಯೋ ಎಂದು ಕೇಳುತ್ತೇನೆ ?

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ರೈತರು ತೆಗೆದುಕೊಂಡಿರತಕ್ಕಂಥ ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲವನ್ನು ಮನ್ನಾ ಮಾಡುವುದಕ್ಕೆ ವ್ಯವಸ್ಥೆಯಾಗುತ್ತಿದೆ. ಸಂತೋಷ ಅದೇ ರೈತರು ಬಡವರು, ನಿರ್ಗತಿಕರು, ಅಸಹಾಯಕರು ಡೈರಿ ಆಪರೇಷನ್ ಫ್ಲಡ್ ೧-೨ರಲ್ಲಿ ಸುಮಾರು ೬೦ ರಿಂದ ೮೦ ಕೋಟಿ ಯೋಜನೆ ಕಾರ್ಯಗತವಾಗಿದೆ, ಇದರಲ್ಲಿ ಸಾವಿರಾರು ಜನ ನಿರ್ಗತಿಕರು ಹಸು, ಎಮ್ಮೆಗಳನ್ನು ಕೊಂಡುಕೊಂಡು ಹಾಲನ್ನು ಮಾರಿ ಜೀವನ ಮಾಡುತ್ತಿದ್ದಾರೆ. ಅದನ್ನೆಲ್ಲ ಮಾಡುತ್ತಿರುವವರು ಬಡವರು ನಿರ್ಗತಿಕರು ಮತ್ತು ರೈತರು. ಜಮೀನು ಇರುವವರು ಸಾಲ ತೆಗೆದುಕೊಂಡು ವ್ಯವಸಾಯ ಮಾಡುತ್ತಾರೆ. ಆದರೆ ಜಮೀನು ಇಲ್ಲದವರು ಕೂಲಿಕಾರರು ಬಡವರು, ವಿಧವೆಯಾದವರು ಹೆಂಗಸರು ೨ ಸಾವಿರ ೩ ಸಾವಿರ ೪ ಸಾವಿರ ಸಾಲವನ್ನು ತೆಗೆದುಕೊಂಡು ಹಸು-ಎಮ್ಮೆ ಕೊಂಡುಕೊಂಡು ಹಾಲನ್ನು ಮಾರಿ ಜೀವನ ಮಾಡುತ್ತಿದ್ದಾರೆ. ಈ ಸ್ಕೀಮ್‌ನಲ್ಲಿ ಅವರಿಗೆ ಸಾಲ ಮನ್ನಾ ಆಗುತ್ತದೆಯೋ ?

ಶ್ರೀ ವೀರೇಂದ್ರ ಪಾಟೀಲ್.—ಈ ಸ್ಕೀಮ್‌ನ್ನು ಎಲ್ಲರಿಗೂ ಹಂಚಿದ್ದೇನೆ. ಅದನ್ನು ಓದಿಕೊಂಡರೆ ಈ ಸ್ಕೀಂ ಯಾರಿಗೆ ಅನ್ವಯವಾಗುತ್ತದೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಡುತ್ತೇನೆ. ೧೯೮೯-೯೦ನೇ ಸಾಲಿನ ಸಾಲ ಮನ್ನಾ ಮಾಡಲಿಕ್ಕೆ ಅನೇಕ ರಾಜ್ಯಗಳು ಮುಂದೆ ಬಂದಿವೆ, ಪ್ರಪೋಸಲ್ಸ್ ಕಳುಹಿಸಿದ್ದಾರೆ, ಅದನ್ನು ಒಪ್ಪಿಸುವಂಥ ಪ್ರಯತ್ನವನ್ನು ಪ್ರಧಾನಿಯವರ ಜೊತೆಗೆ ಮಾಡುತ್ತಿದ್ದಾರೆ. ತಾವು ಇಲ್ಲಿಂದ ಒಂದು ರೆಸಲ್ಯೂಷನ್ ಮಾಡಿ, ೧೯೮೯-೯೦ನೇ ಸಾಲಿನಲ್ಲಿ ಕೊಟ್ಟಿರತಕ್ಕಂಥ ೧೭೫ ಕೋಟಿ ರೂಪಾಯಿಗಳಲ್ಲಿ ೧೦ ಸಾವಿರದವರೆಗೆ ನಾವು ಸಾಲ ಮನ್ನಾ ಮಾಡಿದರೆ ೧೦೦ ಕೋಟಿ ರೂಪಾಯಿ ದಾಟುವುದಿಲ್ಲ. ಅದರಲ್ಲಿ ಅರ್ಧಭಾಗ ಕೇಂದ್ರ ಸರ್ಕಾರ ಭರಿಸಿ ಕೊಡುವುದಾದರೆ, ಇವತ್ತು ನಮ್ಮ ರಾಜ್ಯದಲ್ಲಿ ಬೇರೆ ರಾಜ್ಯದಲ್ಲಿರದಂತ ವಿಶೇಷವಾದ ಸಂದರ್ಭ ಇದ್ದು ಕಳೆದ ೪-೫ ವರ್ಷಗಳಿಂದ ನಮ್ಮ ರಾಜ್ಯದ ರೈತ ತೀವ್ರವಾದ ಬರಗಾಲಕ್ಕೆ ಸಿಕ್ಕಿರುವ ಪರಿಣಾಮ ೫೦ ಪರ್ಸೆಂಟ್ ಕೇಂದ್ರ ಸರ್ಕಾರ ತುಂಬಿಕೊಡುವುದಕ್ಕೆ ಸಿದ್ಧವಿದ್ದರೆ, ನಾವು ೫೦ ಪರ್ಸೆಂಟ್ ತುಂಬಿ ಕೊಡುವುದಕ್ಕೆ ಸಿದ್ಧರಿದ್ದೇವೆ. ಆ ರೀತಿ ಮಾಡಿಕೊಡಿ ಎಂದು ಪ್ರಧಾನಿಯವರಿಗೆ ಇಲ್ಲಿಂದ ಒಂದು ರೆಸಲ್ಯೂಷನ್ ಕಳುಹಿಸಿಕೊಡತಕ್ಕಂಥಾದ್ದು ಮತ್ತು ಒಂದು ನಿಯೋಗ ಇಲ್ಲಿಂದ ಹೋಗಿ ಅವರ ಮನಸ್ಸನ್ನು ಒಲಿಸುವಂಥ ಪ್ರಯತ್ನ ಮಾಡುವುದಕ್ಕಾದರೂ ತಾವು ಒಪ್ಪಿಕೊಳ್ಳುತ್ತೀರಾ. ಆ ರೀತಿ ಒಂದು ರೆಸಲ್ಯೂಷನ್ ಮಾಡುವುದಕ್ಕಾದರೂ ಅಷ್ಟಾದರೂ ಮಾಡಿ ಸ್ವಾಮಿ ಎಂದು ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಯಡಿಯೂರಪ್ಪನವರು ತಿಳಿದುಕೊಳ್ಳಬೇಕು. ಸದನದಲ್ಲಿ ಸುಮ್ಮನೆ ಏನಾದರೂ ಮಾಡಬೇಕು ಎಂಬುದಕ್ಕೆ ಇದೇನು ಬಾರ್ಗೈನಿಂಗ್ ಹೌಸ್ ಅಲ್ಲ ಸ್ವಲ್ಪ ವಿಚಾರ ಮಾಡಬೇಕು. ಏನೆಂದರೆ, ತಾವು ಏನು ಹೇಳುತ್ತಿದ್ದೀರಿ ಇದನ್ನು ಮಾಡಿದ ತಕ್ಷಣ ಇದರ ಪರಿಣಾಮ ರೈತರ ಮೇಲೆ ಏನಾಗುತ್ತದೆಂದು ತಾವು ತಿಳಿದುಕೊಳ್ಳಬೇಕು. ಅವರಿಗೆ ನಾನು ಪದೇ ಪದೇ ಹೇಳುತ್ತಿದ್ದೇನೆ. ಅದು ಆಗುವುದಿಲ್ಲವೆಂದು ಗೊತ್ತಿದೆ ಅಧಿಕಾರಿಗಳ ಜೊತೆಯಲ್ಲಿ ಸಂಪೂರ್ಣವಾಗಿ ಚರ್ಚೆ ಮಾಡಿದ್ದಾರೆ, ನಾನೂ ಕೇಳಿದ್ದೇನೆ. ಈ ಯೋಜನೆ ಇನಿದೆ ಇದು ಯಾವುದೂ ಬದಲಾವಣೆ ಆಗುವುದಿಲ್ಲವೆಂಬ ಪರಿಸ್ಥಿತಿ ಇದ್ದಾಗ ಸುಮ್ಮನೆ ರೆಸಲ್ಯೂಷನ್ ಮಾಡುವುದು, ನಾವು ನಿಯೋಗ ಹೋಗುವುದು ಪ್ರಯೋಜನವಿಲ್ಲ. ಮಧ್ಯಪ್ರದೇಶದಲ್ಲಿ ಯಶಸ್ವಿಯಾಗಿ ಬನ್ನಿ ಮುಂದೆ ನೋಡೋಣ.

ಶ್ರೀ ವಾಟಾಳ್ ನಾಗರಾಜ್.—ಮುಖ್ಯಮಂತ್ರಿಗಳ ಭಾಷಣವನ್ನು ಹೊಸ ಸರ್ಕಾರ ಬಂದಾಗಿನಿಂದಲೂ ಕೇಳುತ್ತಿದ್ದೇವೆ ಭಾಷಣವನ್ನು ಬಹಳ ಸೊಗಸಾಗಿ ಮಾಡುವುದರಲ್ಲಿ ಮೊದಲು ಮುಖ್ಯಮಂತ್ರಿಯಾದಾಗಿನಿಂದಲೂ ನಾನು ಬಲ್ಲೆ. ಸಭೆಯಲ್ಲಿ ಒಳ್ಳೆಯ ಉತ್ತರ ಕೊಡುತ್ತಾರೆ. ನಮ್ಮ ಸರ್ಕಾರಕ್ಕೆ ಹಣಕಾಸಿನ ತೊಂದರೆ ಇದೆ ಎಂದು ಪ್ರತಿಸಾರಿ ಹೇಳಿದ್ದಾರೆ. ಈ ಸಾರಿಯೂ ತೊಂದರೆ ಇದೆ ಎಂದು ಹೇಳುತ್ತಾರೆ. ನಮ್ಮ ಸ್ನೇಹಿತರು ನಿಮಗೆ ಅನೇಕ ಬಾಬಿನಿಂದ ದುಡ್ಡು ಬರುತ್ತದೆ ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ನನ್ನ ಸಲಹೆಯನ್ನು ಒಪ್ಪಿಕೊಳ್ಳುವುದಾದರೆ, ಒಂದು ತಿಂಗಳಿಗೆ ನೂರು ಕೋಟಿ ರೂಪಾಯಿಗಳನ್ನು ಕೊಡುತ್ತೇನೆ. ಇದು ಜೋಕ್ ಅಲ್ಲ. ನಾನು ನಿಮ್ಮ ಪಕ್ಷದವನು ಅಲ್ಲ. ಆದರೂ ಕೂಡ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮಂತ್ರಿಯಾಗಿ ಒಂದು ತಿಂಗಳು ನೀವು ನನಗೆ ಕೊಟ್ಟರೆ ನೂರು ಕೋಟಿ ರೂಪಾಯಿ ಕೊಡಲಿಲ್ಲವೆಂದರೆ ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ. ಇದನ್ನು ಜೋಕ್ ಆಗಿ ಹೇಳುತ್ತಿಲ್ಲ. ರಾಜ್ಯದ ಹಣಕಾಸಿನ ಪರಿಸ್ಥಿತಿಯ ದೃಷ್ಟಿಯಿಂದ ಒಂದು ತಿಂಗಳು ಮಂತ್ರಿ ಮಾಡಿ ನೋಡಿ.

ಅಧ್ಯಕ್ಷರು.—ಫೆಬ್ರುವರಿ ತಿಂಗಳಲ್ಲಿ ಬರೀ ೨೮ ದಿವಸ ಇರುತ್ತದೆ. ಫೆಬ್ರುವರಿ ತಿಂಗಳಲ್ಲಿ ಮಂತ್ರಿಯಾಗಬೇಕೋ ಅಥವಾ ಏಪ್ರಿಲ್ ತಿಂಗಳಲ್ಲಿ ಮಂತ್ರಿ ಆಗಬೇಕೋ ?

ಶ್ರೀ ಪಾಟೀಲ್ ನಾಗರಾಜ್.—ನಾನು ಇದನ್ನು ಲಘುವಾಗಿ ಹೇಳುತ್ತಿಲ್ಲ, ಜೋಕ್ ಮಾಡುತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಪಾಟೀಲ್ ನಾಗರಾಜ್‌ರವರೇ, ಮೊದಲು ಆ ಪಕ್ಷಕ್ಕೆ ಸೇರುತ್ತೇನೆಂದು ಅರ್ಜಿ ಹಾಕಿ. ನಂತರ ಮಂತ್ರಿ ಸ್ಥಾನಕ್ಕೆ ಕ್ಲೈಂ ಮಾಡಬಹುದು.

ಶ್ರೀ ಪಾಟೀಲ್ ನಾಗರಾಜ್.—ದೇಶದ ಪ್ರಧಾನಿಯವರು ಹೇಳುತ್ತಿದ್ದಾರೆ, ಸರ್ವ ಪಕ್ಷಗಳ ಮಂತ್ರಿಮಂಡಲವನ್ನು ಮಾಡಬೇಕೆಂದು. ನನ್ನೊಬ್ಬನನ್ನಾದರೂ ಪಕ್ಷ ರಹಿತವಾಗಿ ಅವರು ಒಂದು ತಿಂಗಳು ತೆಗೆದುಕೊಳ್ಳಲಿ ಒಂದು ತಿಂಗಳಿಗೆ ನೂರು ಕೋಟಿ ರೂಪಾಯಿಗಳನ್ನು ಕೊಡಲಿಲ್ಲವೆಂದರೆ ನಾನು ರಾಜೀನಾಮೆ ಕೊಡುತ್ತೇನೆ. ತಮ್ಮ ಮೂಲಕ ನಾನು ಈ ವಿಚಾರವನ್ನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ಮುಖ್ಯ ಮಂತ್ರಿಗಳು ನನ್ನ ಚಾಲೆಂಜ್ ಸ್ವೀಕಾರ ಮಾಡುವುದಾದರೆ, ನೂರು ಕೋಟಿ ರೂಪಾಯಿಗಳನ್ನು ಒಂದು ತಿಂಗಳಲ್ಲಿ ಕೊಡಲಿಲ್ಲವೆಂದರೆ ನಾನು ನನ್ನ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ.

(ಈ ಹಂತದಲ್ಲಿ ಬಿ.ಜೆ.ಪಿ.ಯ ಮಾನ್ಯ ಸದಸ್ಯರಾದ ಸರ್ವಶ್ರೀ ಬಿ. ಎಸ್. ಯಡಿಯೂರಪ್ಪ, ಕೆ.ಜಿ. ಈಶ್ವರಪ್ಪ, ನಾರಾಯಣರಾವ್ ಮಾನಹಳ್ಳಿ ಹಾಗೂ ರುಕ್ಮಯ್ಯ ಪೂಜಾರಿಯವರು ಸಭಾಧ್ಯಕ್ಷರ ಮುಂದಿನ ಅಂಗಣದಲ್ಲಿ ಧರಣಿ ಹೂಡಿದರು.)

ಅಧ್ಯಕ್ಷರು.—ನೀವು ಒಳಗೆ ಏಕೆ ಬಂದಿದ್ದೀರಿ ?

(ಶ್ರೀ ಬಿ. ಎಸ್. ಯಡಿಯೂರಪ್ಪನವರು ಧರಣಿ ಹೂಡಿದ್ದ ಸ್ಥಳದಲ್ಲೇ ಎದ್ದುನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡುವುದು ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ಅಧ್ಯಕ್ಷರು ಕರೆದ ಮೇಲೆ ಯಾರು ತಮ್ಮ ಸ್ಥಾನದಿಂದ ಮಾತನಾಡುವುದಿಲ್ಲ ಅವರು ಏನು ಹೇಳಿದರೂ ರೆಕಾರ್ಡಿನಲ್ಲಿ ದಾಖಲಾಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ (ತಮ್ಮ ಸ್ಥಾನಕ್ಕೆ ತೆರಳಿ ಮಾತನಾಡಿದರು).—ಸನ್ಮಾನ್ಯ ಅಧ್ಯಕ್ಷರೆ ಇವತ್ತು ಕೇಂದ್ರ ಸರ್ಕಾರ ರಾಜ್ಯದ ರೈತರಿಗೆ ದ್ರೋಹ ಮಾಡಿದೆ. ಅದನ್ನು ನಾವು ಪ್ರತಿಭಟಿಸುತ್ತೇವೆ. ರಾಜ್ಯಸರ್ಕಾರ ೧೯೮೯-೯೦ರ ಸಾಲವನ್ನು ಕೂಡ ಮನ್ನಾ ಮಾಡಬೇಕಾಗಿತ್ತು ಅದು ೬೦ ಕೋಟಿ ರೂಪಾಯಿಗಳಿಗಿಂತ ಏನು ಜಾಸ್ತಿ ಆಗುವುದಿಲ್ಲ. ಈ ಸರ್ಕಾರ ರೈತ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ ರೈತ ಪ್ರಾಮಾಣಿಕವಾಗಿ ಏನು ಸಾಲ ಕಟ್ಟುತ್ತಿದ್ದಾನೆ ಅವನು ಮುಂದೆ ಪ್ರಾಮಾಣಿಕವಾಗಿ ನಡೆದುಕೊಳ್ಳದಂತೆ ಒಂದು ವ್ಯವಸ್ಥೆ ರಾಜ್ಯ ಸರ್ಕಾರ ಮಾಡಿದಂತಾಗುತ್ತದೆ. ೧೭೬ ಕೋಟಿ ರೂಪಾಯಿಗಳಲ್ಲಿ ಮೊದಲ ಹತ್ತು ಸಾವಿರ ರೂಪಾಯಿಗಳನ್ನು ಮನ್ನಾ ಮಾಡಿದರೆ ೬೦-೬೫ ಕೋಟಿ ರೂಪಾಯಿಗಳನ್ನು ದಾಟುವುದಿಲ್ಲ. ಈಗಲೂ ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಈ ರಾಜ್ಯದ ರೈತ ನಿಮ್ಮ ಪರವಾಗಿ ಇದ್ದಾನೆ. ನಿಮ್ಮನ್ನು ನಂಬಿದ್ದಾನೆ. ದೊಡ್ಡ ಮನಸ್ಸು ಮಾಡಿ ಉದಾರತೆಯಿಂದ ಅವನ ೧೯೮೯-೯೦ರ ರೈತರ ಸಾಲವನ್ನು ಕೂಡ ಮನ್ನಾ ಮಾಡಬೇಕೆಂದು ಮಾನ್ಯ ಸಭಾ ನಾಯಕರನ್ನು ಪ್ರಾರ್ಥಿಸುತ್ತೇನೆ. ಆಗ ಮಾತ್ರ ನ್ಯಾಯ ಸಿಕ್ಕಿದಂತಾಗುತ್ತದೆ. ಇಲ್ಲದಿದ್ದರೆ ನಿಜಕ್ಕೂ ದ್ರೋಹ ಮಾಡಿದಂತಾಗುತ್ತದೆ. ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಿ ಧರಣಿ ಹೂಡುತ್ತೇವೆ.

(ಬಿಜೆಪಿ.ಯ ಸದಸ್ಯರೆಲ್ಲ ಸದನದ ವೆಲ್‌ನೊಳಗೆ ಧರಣಿ ಹೂಡಿದರು.)

SRI M. MALLIKARJUNA KHARGE.—When the House is not in order the Hon. Member cannot speak on this occasion, because all his party members are sitting in the well of the House and the leader of BJP is speaking

MR. SPEAKER.—I seek the guidance of the Leader of House.

(Hon. Member Sri B.S. Yediyurappa once again came to the well of the House)

ಶ್ರೀ ಟಿ.ಎಂ. ಮಂಜುನಾಥ್.—ಮಾನ್ಯ ಅಧ್ಯಕ್ಷರೆ, ರೈತರ ಸಾಲದ ಬಗೆ ಬಹಳ ವಿಸ್ತಾರವಾದ ವಿಚಾರ ವಿನಿಮಯಗಳು ನಡೆದಮೇಲೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಬಹಳ ಯೋಚನೆ ಮಾಡಿ ನಮ್ಮ ರಾಜ್ಯದಲ್ಲಿ ರೈತರ ಹಿತಾಸಕ್ತಿಯನ್ನು ಪರಿಗಣಿಸಿ ಅವರ ತೊಂದರೆಗೆ ಧಕ್ಕೆ ಬರಬಾರದೆಂಬ ದೃಷ್ಟಿಯಿಂದ ನಮ್ಮ ರಾಜ್ಯ ಸರ್ಕಾರ ಸಾಲದ ಹೊರೆ ಪಡೆದರೂ ಚಿಂತೆಯಿಲ್ಲ ಎನ್ನತಕ್ಕಂಥ ಭಾವನೆಯಿಂದ, ರೈತರ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಒಪ್ಪಿ, ಇವತ್ತಿನ ದಿವಸ ಕೇಂದ್ರ ಸರ್ಕಾರ ಕಳುಹಿಸಿರತಕ್ಕ ಯೋಜನೆಯನ್ನು ಒಪ್ಪಿ, ರೈತರಿಗೆ ಏನು ಸಾಲ ಮನ್ನಾ ಮಾಡುವ ಬಗ್ಗೆ ಮುಂಚೂಣಿಯಲ್ಲಿ ಕೆಲಸ ಮಾಡಿದ್ದಾರೆ ಅದಕ್ಕೋಸ್ಕರ ಪಕ್ಷದ ಪತಿಯಿಂದ ನಮ್ಮ ಮಾನ್ಯ ಮಂತ್ರಿಗಳನ್ನು ಇಡೀ ಕರ್ನಾಟಕದ ರೈತರ ಪರವಾಗಿ ಅವರನ್ನು ಅಭಿನಂದಿಸುತ್ತೇನೆ.

ಅಧ್ಯಕ್ಷರು.—ಈಗ ಚರ್ಚೆ ಮುಕ್ತಾಯ ಆಯಿತು.

ಶ್ರೀ ಎಂ. ಪಿ. ವೆಂಕಟೇಶ್.—ನಾನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು.—ಯಾವ ವಿಚಾರ ?

ಶ್ರೀ ಎಂ. ಪಿ. ವೆಂಕಟೇಶ್.—ನಾನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಸಭಾಧ್ಯಕ್ಷರೆ, ಹಣಕಾಸಿನ ಪರಿಸ್ಥಿತಿ ಬಹಳ ತೊಂದರೆ ಇದೆ ಎಂದು...

ಅಧ್ಯಕ್ಷರು.—ಅದನ್ನೇ ಹೇಳಬೇಡಿ.

ಶ್ರೀ ಎಂ. ಪಿ. ವೆಂಕಟೇಶ್.—೨೨ನೇ ತಾರೀಖು ಗ್ರಾನೈಟ್ ರಾಷ್ಟ್ರೀಕರಣವನ್ನು ತೆಗೆದಿದ್ದಾರೆ.

ಅಧ್ಯಕ್ಷರು.—ಅದಕ್ಕೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ರಾಷ್ಟ್ರೀಕರಣವನ್ನು ೨೨ನೇ ತಾರೀಖು ತೆಗೆದಿದ್ದಾರೆ.

ಅಧ್ಯಕ್ಷರು.—ನೀವು ಅದರ ವಿಚಾರವಾಗಿ ನೋಟೀಸ್ ಕೊಡಿ. ವಿಶೇಷವಾದ ಚರ್ಚೆಗೆ ನಿಮಗೆ ನಾನು ಏರ್ಪಾಡು ಮಾಡಿಕೊಡುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಸಲಹೆ ಕೊಡಿ ಎಂದು ಹೇಳಿದರಲ್ಲ ಅದಕ್ಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆ,

ವಿತ್ತೀಯ ಕಾರ್ಯಕಲಾಪಗಳು

ಅಧ್ಯಕ್ಷರು.—೧೯೯೦–೯೧ ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲೆ ಚರ್ಚೆ. ಮಾನ್ಯ ಮಂತ್ರಿಗಳಾದ ನರಸಿಂಹಮೂರ್ತಿಯವರು ತಮ್ಮ ಇಲಾಖೆ ಬೇಡಿಕೆಗಳನ್ನು ಮಂಡಿಸಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ (ನಗರಾಭಿವೃದ್ಧಿ ಮತ್ತು ಮೀನುಗಾರಿಕೆ, ಬಂದರು ಮಂತ್ರಿಯವರು).— ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ ೩೧–೩–೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನನ್ನ ಖಾತೆಗಳ ಬೇಡಿಕೆಗಳ ಸಂಖ್ಯೆ ೫, ೪೮, ೩೨, ೩೩ ಮತ್ತು ೩೪ನೇ ಸಂಖ್ಯೆಯ ಈ ಕೆಳಗಿನ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಭಿಯಾಚನೆ ಕ್ರಮಾಂಕ ೫— ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೭೩,೬೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೩೧,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.